ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 15 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 149 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಸೆ.23ರಿಂದ 27ರವರೆಗೆ ವರ್ಣರಂಜಿತ ಯುವ ದಸರಾ

ಮೊದಲ ದಿನ ಅರ್ಜುನ್ ಜನ್ಯರಿಂದ ಮ್ಯೂಜಿಕಲ್ ಹಿಟ್ಸ್

- ಈ ಬಾರಿಯೂ ಉತ್ತನಹಳ್ಳಿ ಬಳಿಯ ಮೈದಾನದಲ್ಲಿ ಸಂಗೀತ ಹಬ್ಬ
- ಪ್ರತಿ ದಿನ ಸುಮಾರು 70ರಿಂದ 80 ಸಾವಿರ ಜನರಿಂದ ವೀಕ್ಷಣೆ ನಿರೀಕ್ಷೆ
- ಅರಮನೆಯಲ್ಲಿ ಜಂಬೂ ಸವಾರಿ ವೀಕ್ಷಣೆಗೆ 48 ಸಾವಿರ ಆಸನ
- 55 ಸ್ತಬ್ಧ ಚಿತ್ರ, ಜಾನಪದ ಕಲಾತಂಡಗಳ ವೈಭವ ಅನಾವರಣ
- ಅಪಾಯಕಾರಿ ಕಟ್ಟಡಗಳಲ್ಲಿ ಮೆರವಣಿಗೆ ವೀಕ್ಷಣೆಗೆ ನಿರ್ಬಂಧ

ಮೈಸೂರು, ಸೆ.14(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ಯುವ ದಸರಾ ಸೆಪ್ಟೆಂಬರ್ 23 ರಿಂದ 27 ರವರೆಗೆ ನಡೆಯಲಿದ್ದು, ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರು ಮೊದಲ ದಿನದ ಕಾರ್ಯಕ್ರಮ ನಡೆಸಿ ಕೊಡಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಮೈಸೂರು ಅರಮನೆ ಮಂಡಳಿ ಸಭಾಂಗಣದಲ್ಲಿ ಇಂದು ಚೆಸ್ಕಾಂ ವತಿಯಿಂದ ಅನಾವರಣಗೊಳ್ಳುವ ಜಗಮಗಿಸುವ ವಿದ್ಯುತ್ ದೀಪಾಲಂಕಾರದ ಟೀಸರ್ ಹಾಗೂ ಡ್ರೋನ್ ಪ್ರದರ್ಶನದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಮೈಸೂರಿನ ಉತ್ತನಹಳ್ಳಿಯ ವಿಶಾಲ ಮೈದಾನದಲ್ಲಿ ಯುವ ದಸರಾ ಆಯೋಜಿಸಲಾಗಿದೆ ಎಂದು ಹೇಳಿದರು.

ವಿನೂತನ ಸಂಗೀತ ಮನೋರಂಜನೆಯ ಯುವ ದಸರಾ ಕಾರ್ಯಕ್ರಮವನ್ನು ಪ್ರತಿದಿನ ಸುಮಾರು 70 ರಿಂದ 80 ಸಾವಿರ ಜನರು ವೀಕ್ಷಣೆ ಮಾಡಿ ವಿಶಿಷ್ಟ ಅನುಭವ ಪಡೆಯುತ್ತಾರೆ ಎಂದರು. ಮೈಸೂರು ದಸರಾ ನಾಡಹಬ್ಬವಾಗಿದ್ದು, ಧರ್ಮ ಮತ್ತು ರಾಜಕಾರಣವನ್ನು ಮೀರಿದ ವಿಶಿಷ್ಟ ಹಬ್ಬವಾಗಿದೆ. ದಸರಾಗೆ ತನ್ನದೆ ಆದ ಐತಿಹಾಸಿಕ ಹಿನ್ನೆಲೆ ಇದ್ದು, ಅತಿಥಿಗಳನ್ನು ಗೌರವಿಸುವ ಸನ್ನಡತೆಯ ಹಬ್ಬವಾಗಿದೆ ಎಂದರು.


ಮೈಸೂರು ಅರಮನೆಯಲ್ಲಿ ಕಳೆದ ಬಾರಿ ಜಂಬೂ ಸವಾರಿ ಮೆರವಣಿಗೆ ವೀಕ್ಷಣೆಗೆ ಸುಮಾರು 80 ಸಾವಿರ ಆಸನ ವ್ಯವಸ್ಥೆ ಮಾಡಲಾಗಿತ್ತು. ಆದರೆ ಇದರಿಂದ ನೂಕು ನುಗ್ಗಲು ಉಂಟಾಗುತ್ತದೆ ಎಂದು ಮುನ್ನೆಚ್ಚರಿಕಾ ಕ್ರಮವಾಗಿ ಈ ಬಾರಿ ಸುಮಾರು 48 ಸಾವಿರ ಆಸನ ವ್ಯವಸ್ಥೆ ಮಾಡಲಾಗುವುದು ಎಂದು ಡಾ.ಮಹದೇವಪ್ಪ ಮಾಹಿತಿ ನೀಡಿದರು.

ಜಂಬೂ ಸವಾರಿ ಮೆರವಣಿಗೆಯಲ್ಲಿ 55 ಸ್ತಬ್ಧ ಚಿತ್ರ ಹಾಗೂ ಜಾನಪದ ನೃತ್ಯಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು. ಜಂಬೂ ಸವಾರಿ ■6ನೇ ಪುಟಕ್ಕೆ



ದಸರಾ ಮಹೋತ್ಸವದ ದೀಪಾಲಂಕಾರದ ಟೀಸರ್ ಹಾಗೂ ಡ್ರೋನ್ ಶೋ ಪೋಸ್ಟರ್ ಅನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಬಿಡುಗಡೆ ಮಾಡಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಮಾಡೆಲ್ ಮೈಸೂರು, ಈ ಬಾರಿಯ ದಸರಾ ಥೀಮ್



ನಾಲ್ವಡಿ ಕೃಷ್ಣರಾಜ ಒಡೆಯರ್ ಅಂತಹ ಮಹಾರಾಜರು ಇದ್ದಿದ್ದರೆ ನಮಗೆ ಸ್ವಾತಂತ್ರ್ಯವೇ ಬೇಕಿರಲಿಲ್ಲ ಎಂದು ಪ್ರತಿಪಾದಿಸಿದ ಡಾ.ಮಹದೇವಪ್ಪ ಅವರು, ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಮಾಡೆಲ್ ಮೈಸೂರು ಹಾಗೂ ಗಾಂಧಿ ತತ್ವ ಆಧರಿಸಿದ ಥೀಮ್ ಇಟ್ಟುಕೊಂಡು ಈ ಬಾರಿ ದಸರಾ ಆಚರಣೆ ಮಾಡಲಾಗುವುದು. ■6ನೇ ಪುಟಕ್ಕೆ

ಸೆ.27, ಅ.1ರಂದು ಏರ್ ಶೋ

ಸೆ.28ರಿಂದ ನಾಲ್ಕು ದಿನ ಡ್ರೋನ್ ಶೋ



ಸಂಗ್ರಹ ಚಿತ್ರ

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಡ್ರೋನ್ ಶೋ ಸೆ.28 ರಿಂದ ನಾಲ್ಕು ದಿನಗಳ ಕಾಲ ಪ್ರದರ್ಶನಗೊಳ್ಳಲಿದೆ ಎಂದು ಡಾ.ಮಹದೇವಪ್ಪ ಮಾಹಿತಿ ನೀಡಿದರು. ದಸರಾ ಮಹೋತ್ಸವದ ಸಂಭ್ರಮಕ್ಕೆ ಹೊಸದಾಗಿ ಸೇರ್ಪಡೆಗೊಂಡಿರುವ ಡ್ರೋನ್ ಪ್ರದರ್ಶನ ಈ ಬಾರಿ ಮತ್ತಷ್ಟು ಆಕರ್ಷಣೆಯಾಗಲಿದೆ ಎಂದರು.

ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಸೆ.28, 29 ಮತ್ತು ಅ.1 ಹಾಗೂ 2 ರಂದು ನಡೆಯಲಿದೆ. ಕಳೆದ ಬಾರಿ ಒಂದೂವರೆ ಸಾವಿರ ಡ್ರೋನ್ ಬಳಸಲಾಗಿತ್ತು. ಆದರೆ ಈ ಬಾರಿ 3,000 ಸಾವಿರ ಡ್ರೋನ್ ಬಳಸಲಾಗುವುದು ಎಂದು ಹೇಳಿದರು.

ಮೈಸೂರಿನ ಪಂಜಿನ ಕವಾಯತು ಮೈದಾನದಲ್ಲಿ ಸೆಪ್ಟೆಂಬರ್ 27 ಮತ್ತು ಅಕ್ಟೋಬರ್ 1 ರಂದು ಏರ್ ಶೋ ನಡೆಯಲಿದೆ ಎಂದು ಡಾ.ಮಹದೇವಪ್ಪ ತಿಳಿಸಿದರು. ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಹಾಗೂ ಕೇಂದ್ರಬಿಂದುವಾದ ಅರಮನೆ ಸುತ್ತ ವಿದ್ಯುತ್ ದೀಪಾಲಂಕಾರ ಜಗಮಗಿಸುತ್ತದೆ. ಈ ಸಂದರ್ಭದಲ್ಲಿ ಅರಮನೆ ಸುತ್ತ ಭಾಗಶಃ ಝೀರೋ ಟ್ರಾಫಿಕ್ ವ್ಯವಸ್ಥೆ ಮಾಡಲಾಗುವುದು. ವಿದೇಶಿ ಹಬ್ಬಗಳಂತೆ ಇಲ್ಲಿನ ಜನರು ವಾಹನಗಳಿಲ್ಲದೆ ಹೆಜ್ಜೆ ಹಾಕುತ್ತಾ ಸುತ್ತಲಿನ ಸೌಂದರ್ಯ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಡಾ.ಮಹದೇವಪ್ಪ ಹೇಳಿದರು.

136 ಕಿಲೋ ಮೀಟರ್ ರಸ್ತೆಯಲ್ಲಿ ದಸರಾ ದೀಪಾಲಂಕಾರ ಚೆಸ್ಕಾಂನಿಂದ 7 ಕೋಟಿ ವೆಚ್ಚ: 2.57 ಲಕ್ಷ ಯೂನಿಟ್ ಬಳಕೆ



ಮೈಸೂರು, ಸೆ.14(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಹಬ್ಬಕ್ಕೆ ಸಾಂಸ್ಕೃತಿಕ ನಗರಿ ಸಜ್ಜಾಗುತ್ತಿದೆ. ಈ ಬಾರಿ ಕೂಡ ವಿಶಿಷ್ಟ ಹಾಗೂ ವಿನೂತನ ವಿದ್ಯುತ್ ದೀಪಾಲಂಕಾರದಿಂದ ಮೈಸೂರು ಅಂದವನ್ನು ಇಮ್ಮಡಿಗೊಳಿಸಲಾಗುವುದು. ದೀಪಾಲಂಕಾರದಿಂದ ಯಾವುದೇ ರೀತಿಯ ವಿದ್ಯುತ್ ಅವಘಡ ಸಂಭವಿಸದಂತೆ ಹಲವು ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ. ಈ ಬಾರಿ ದಸರಾದಲ್ಲಿ 136 ಕಿಲೋ ಮೀಟರ್ ವರೆಗೆ ವಿದ್ಯುತ್ ದೀಪಲಂಕಾರ ಮಾಡಲಾಗುವುದು. 118 ವೃತ್ತಗಳಲ್ಲಿ ವಿವಿಧ ರೀತಿಯ ■6ನೇ ಪುಟಕ್ಕೆ

ದಸರಾಗೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್‌ಗೆ ಜಿಲ್ಲಾಡಳಿತದಿಂದ ಸಾಂಪ್ರದಾಯಕ ಆಹ್ವಾನ

ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪಗೆ ಡಿಸಿ ಸೇರಿ ಹಿರಿಯ ಅಧಿಕಾರಿಗಳು ಸಾಥ್



ಮೈಸೂರು ಅರಮನೆಗೆ ಭಾನುವಾರ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರಿಗೆ ಸಾಂಪ್ರದಾಯಿಕ ಹಾಗೂ ಅಧಿಕೃತವಾಗಿ ದಸರಾ ಮಹೋತ್ಸವಕ್ಕೆ ಆಹ್ವಾನ ನೀಡಿದರು. ಜಿಲ್ಲಾಧಿಕಾರಿ ಲಕ್ಷ್ಮೀಕಾಂತರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು, ಸೆ.14(ಬಿಎಲ್‌ಯು)– ಸೆಪ್ಟೆಂಬರ್ 22 ರಿಂದ ಆರಂಭವಾಗುವ ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವಂತೆ ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರಿಗೆ ಭಾನುವಾರ ಜಿಲ್ಲಾಡಳಿತದಿಂದ ಸಾಂಪ್ರದಾಯಿಕ ಹಾಗೂ ಅಧಿಕೃತವಾಗಿ ಆಹ್ವಾನ ನೀಡಲಾಯಿತು.


ಇಂದು ಬೆಳಿಗ್ಗೆ ಮೈಸೂರು ಅರಮನೆಗೆ ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳೊಂದಿಗೆ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಪ್ರಮೋದಾದೇವಿ ಅವರಿಗೆ ಫಲ ತಾಂಬೂಲ ಹಾಗೂ ಗೌರವ ಧನ ನೀಡಿ ಆಹ್ವಾನ ನೀಡಿದರು. ನಂತರ ಪ್ರಮೋದಾದೇವಿ ಅವರೊಂದಿಗೆ ಸೌಜನ್ಯಯುತ ಚರ್ಚೆ ಮಾಡಿದ ಡಾ.ಮಹದೇವಪ್ಪ ಅವರು ಚಹಾ ಸೇವಿಸಿದರು.

ಈ ಸಂದರ್ಭದಲ್ಲಿ ಪ್ರಮೋದಾದೇವಿ ಅವರು ದಸರಾ ಮಹೋತ್ಸವ ಕುರಿತಂತೆ ಜಿಲ್ಲಾಡಳಿತಕ್ಕೆ ಕೆಲವು ಸಲಹೆಗಳನ್ನು ನೀಡಿದರು. ಅರಮನೆಯಿಂದ ನಿರ್ಗಮಿಸುವ ಮುನ್ನ ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದ ಡಾ.ಮಹದೇವಪ್ಪ, ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವಂತೆ ಪ್ರಮೋದಾದೇವಿ ಒಡೆಯರ್ ಅವರಿಗೆ ಆಹ್ವಾನ ನೀಡಿದ್ದೇವೆ. ದಸರಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಅವರು ಉತ್ಸಾಹ ತೋರಿದರು. ಜೊತೆಗೆ ಜಿಲ್ಲಾಡಳಿತದಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಸಂತಸ ವ್ಯಕ್ತಪಡಿಸಿದರು ಎಂದರು.

ದಸರಾ ಆಚರಣೆ ಸಂಬಂಧ ಪ್ರಮೋದಾದೇವಿ ಅವರು ಜಿಲ್ಲಾಡಳಿತಕ್ಕೆ ಏನಾದರೂ ಸಲಹೆ ನೀಡಿದ್ದಾರೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಡಾ.ಮಹದೇವಪ್ಪ, ಅರಮನೆಯೊಳಗೆ ■6ನೇ ಪುಟಕ್ಕೆ

ರಾಜ್ಯದ ಜನತೆಗೆ ಮತ್ತೆ ವಿದ್ಯುತ್ ಶಾಕ್; ದರ ಏರಿಕೆಗೆ ಬೆಸ್ಕಾಂ ಪ್ರಸ್ತಾವನೆ

ಬೆಂಗಳೂರು, ಸೆ.14– ಇತ್ತೀಚೆಗಷ್ಟೇ ದರ ಏರಿಕೆ ಬೆಳವಣಿಗಳಿಂದ ಹೈರಾಣಾಗಿರುವ ರಾಜ್ಯದ ಜನತೆಗೆ ಮತ್ತೊಂದು ಶಾಕ್ ಎದುರಾಗಿದ್ದು, ಶೀಘ್ರವೇ ವಿದ್ಯುತ್ ದರ ಏರಿಕೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.



ಬೆಲೆ ಏರಿಕೆಯಿಂದ ತತ್ತರಿಸಿರುವ ರಾಜ್ಯದ ಜನತೆಗೆ ಮತ್ತೊಂದು ಶಾಕ್ ಎದುರಾಗಿದ್ದು, ಶೀಘ್ರವೇ ವಿದ್ಯುತ್ ದರ ಏರಿಕೆಯಾಗುವ ಸಾಧ್ಯತೆ ಇದೆ. ವಿದ್ಯುತ್ ದರ ಏರಿಕೆ ಮಾಡುವಂತೆ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗಕ್ಕೆ ಬೆಸ್ಕಾಂ ಪ್ರಸ್ತಾವನೆ ಸಲ್ಲಿಸಿದೆ. ಮೂಲಗಳ ಪ್ರಕಾರ ಪ್ರತಿ ■6ನೇ ಪುಟಕ್ಕೆ

ಏಷ್ಯಾಕಪ್–2025

ಪಾಕಿಸ್ತಾನ ವಿರುದ್ಧ ಗೆಲುವು: ಸೂಪರ್–4ಗೆ ಭಾರತ ಲಗ್ಗೆ

ಐಸಿಸಿ ಟೂರ್ನಿಯಲ್ಲಿ ಪಾಕ್ ವಿರುದ್ಧ ಟೀಂ ಇಂಡಿಯಾ ಪ್ರಾಬಲ್ಯ



ದುಬೈ, ಸೆ.14(ವಿವಿಹೆಚ್)– ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಸಂಘಟಿತ ಪ್ರದರ್ಶನದ ನೀಡಿದ ಸೂರ್ಯಕುಮಾರ್ ಯಾದವ್ ನೇತೃತ್ವದ ಭಾರತ ಏಷ್ಯಾಕಪ್‌ನ ಹೈವೋಲ್ಟೇಜ್ ಪಂದ್ಯದಲ್ಲಿ ಪಾಕಿಸ್ತಾನವನ್ನು 7 ವಿಕೆಟ್‌ಗಳಿಂದ ಮಣಿಸಿತು. ಆ ಮೂಲಕ ಟೂರ್ನಿಯಲ್ಲಿ ಸತತ 2 ಗೆಲುವು ದಾಖಲಿಸಿದ ಭಾರತ 'ಎ' ಗ್ರೂಪ್‌ನ ಮೊದಲ ತಂಡವಾಗಿ ಸೂಪರ್ 4 ಹಂತಕ್ಕೆ ಲಗ್ಗೆ ಹಾಕಿತು.

ಇಲ್ಲಿನ ದುಬೈ ಅಂತರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ಸ್ಪಿನ್ ಬೌಲಿಂಗ್‌ಗೆ ನೆರವು ನೀಡುತ್ತಿದ್ದ ಪಿಚ್‌ನಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಪಾಕಿಸ್ತಾನ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದಾಗಿ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 127 ರನ್ ಗಳಿಸಲಷ್ಟೇ ಶಕ್ತಾಯಿತು. ಇದಕ್ಕುತ್ತರವಾಗಿ ಭಾರತ ಕೇವಲ 15.5 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 131 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಆ ಮೂಲಕ ಐಸಿಸಿ ಟೂರ್ನಿಯಲ್ಲಿ ಪಾಕಿಸ್ತಾನದ ಮೇಲಿನ ತಮ್ಮ ಪ್ರಾಬಲ್ಯವನ್ನು ಮುಂದುವರೆಸಿತು. ಪಾಕಿಸ್ತಾನದ 3 ವಿಕೆಟ್ ಉರುಳಿಸಿದ ಕುಲ್ದೀಪ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸಾಧಾರಣ ಮೊತ್ತ ಬೆನ್ನತ್ತಿದ ಭಾರತದ ಪರ ಆರಂಭಿಕರಾದ ಅಭಿಷೇಕ್ ಶರ್ಮಾ ಮತ್ತು ಶುಭ್‌ಮನ್ ಗಿಲ್ ಉತ್ತಮ ಆರಂಭ ಒದಗಿಸಿದರು. ಈ ವೇಳೆ ಕೇವಲ 7 ಎಸೆತಗಳಲ್ಲಿ 2 ಬೌಂಡರಿ ಒಳಗೊಂಡ 10 ರನ್ ಗಳಿಸಿದ್ದ ಗಿಲ್ ಅವರನ್ನು ಸ್ಪಿನ್ನರ್ ಸಯೀಮ್ ಅಯೂಬ್ ಅವರು ಸ್ಟಂಪ್ ಔಟ್ ಬಲೆಗೆ ಬೀಳಿಸಿದರು. ಮತ್ತೊಂದೆಡೆ ಅಬ್ಬರಿಸಿದ ಅಬಿಷೇಕ್ ಶರ್ಮಾ 13 ಎಸೆತಗಳಲ್ಲಿ 4 ಬೌಂಡರಿ ಮತ್ತು 2 ಸಿಕ್ಸರ್‌ಗಳಿದ್ದ 31 ರನ್ ಗಳಿಸಿ ಸಯೀಮ್ ಅಯೂಬ್ ಅವರಿಗೆ ವಿಕೆಟ್ ಒಪ್ಪಿಸಿದರು.

ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ನಾಯಕ ಸೂರ್ಯಕುಮಾರ್ ಯಾದವ್ ಹಾಗೂ ತಿಲಕ್ ವರ್ಮಾ ಮಹತ್ವದ 56 ರನ್‌ಗಳ ಜೊತೆಯಾಟವಾಡಿ ಪಾಕಿಸ್ತಾನದ ಕೈಯಿಂದ ಪಂದ್ಯವನ್ನು ಸಂಪೂರ್ಣ ಕಸಿದುಕೊಂಡಿತು. ■6ನೇ ಪುಟಕ್ಕೆ


ಎರಡು ದಿನಗಳ ಗಗನಚುಕ್ಕಿ ಜಲಪಾತೋತ್ಸವಕ್ಕೆ ತೆರೆ

ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲ

ಡಿಸಿಎಂ ಡಿ.ಕೆ.ಶಿವಕುಮಾರ್ ಸವಾಲು

ಮಂಡ್ಯ,ಸೆ.14(ಮೋಹನ್ ರಾಜ್)– ಕೆಆರ್‌ಎಸ್‌ನಲ್ಲಿ ಕಾವೇರಿ ಆರತಿ ಮಾಡಲು ಕಾರ್ಯಕ್ರಮ ರೂಪಿಸಲಾಗಿದೆ. ಇದರ ಯೋಜನೆ ತಯಾರಾಗುತ್ತಿದೆ. ಇದಕ್ಕೆ ಕೆಲವರು ಅಡಚಣೆ ಮಾಡುತ್ತಿದ್ದಾರೆ. ನ್ಯಾಯಾಲಯಕ್ಕೂ ಹೋಗಿದ್ದಾರೆ. ಆದರೆ, ಪ್ರಕೃತಿ ಮಾತೆಗೆ ಪೂಜೆ, ಆರತಿ ಮಾಡುವುದನ್ನು ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸವಾಲೆಸೆದರು.

ಭಾನುವಾರ ಸಂಜೆ ಮಂಡ್ಯ ಜಿಲ್ಲಾಡಳಿತ, ಪ್ರವಾಸೋದ್ಯಮ ಹಾಗೂ ಕನ್ನಡ ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಎರಡು ದಿನಗಳ ಕಾಲ ನಡೆದ ಗಗನಚುಕ್ಕಿ ಜಲಪಾತೋತ್ಸವದ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಗಗನಚುಕ್ಕಿ ಜಲಪಾತೋತ್ಸವ ಇದೊಂದು ಐತಿಹಾಸಿಕ ಕಾರ್ಯಕ್ರಮ. ಈ ಸಮಾರಂಭಕ್ಕೆ ನಿರೀಕ್ಷೆಗೂ ಮೀರಿ ಜನ ಬಂದಿದ್ದಾರೆ. ಕಾವೇರಿ ನಮ್ಮೆಲ್ಲರ ಪುಣ್ಯ ಮಾತೆ. ತಾಯಿ ಜನ್ಮ ಕೊಟ್ಟಿದ್ದರೆ, ಕಾವೇರಿ ಮಾತೆ ಬದುಕಲು ಅನ್ನ ಮತ್ತು ನೀರನ್ನ ಕೊಟ್ಟಿದ್ದಾಳೆ. ಕೃಷಿ, ವಿದ್ಯುಚ್ಛಕ್ತಿ ಇನ್ನಿತರೆ ಅಭಿವೃದ್ಧಿಗೆ ಕಾವೇರಿ ಮಾತೆ ಕಾರಣೀಭೂತಳಾಗಿದ್ದಾಳೆ ಎಂದು ಬಣ್ಣಿಸಿದರು.



ಗಗನಚುಕ್ಕಿ ಜಲಪಾತೋತ್ಸವದ ಸಮಾರೋಪ ಸಮಾರಂಭವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಿದರು. ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಶಾಸಕ ಪಿ.ಎಂ. ನರೇಂದ್ರಸ್ವಾಮಿ, ಜಿಲ್ಲಾಧಿಕಾರಿ ಡಾ. ಕುಮಾರ್, ಜಿಲ್ಲಾ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಕೆ.ಶಿವಕುಮಾರ್ ಇನ್ನಿತರರಿದ್ದರು.



ರಾಜ್ಯದ ಪ್ರವಾಸೋದ್ಯಮ ನೀತಿಗೆ ಹೊಸ ರೂಪ ನೀಡುವ ಮೂಲಕ ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಅಲ್ಲದೆ, ಈವರೆಗೂ 1.50 ಲಕ್ಷ ಉದ್ಯೋಗ ಸೃಷ್ಟಿಸಲಾಗಿದೆ ಎಂದ ಅವರು, ಪ್ರವಾಸೋದ್ಯಮಕ್ಕೆ ರೈತರು, ವಿದ್ಯಾರ್ಥಿಗಳು, ಯುವಕರು ಬರಬೇಕು. ಐತಿಹಾಸಿಕ ಜಾಗಗಳನ್ನು ವೀಕ್ಷಣೆ ಮಾಡಬೇಕು. ಅದಕ್ಕಾಗಿ ಪ್ರವಾಸೋದ್ಯಮ, ಶಿಕ್ಷಣ, ಪ್ರಾಥಮಿಕ ಶಿಕ್ಷಣ ಇಲಾಖೆಯೊಂದಿಗೆ ಚರ್ಚೆ ನಡೆಸಿ ಪ್ರವಾಸಿ ತಾಣಗಳ ವೀಕ್ಷಣೆಗೆ ಯೋಜನೆ ರೂಪಿಸಲಾಗುವುದು ಎಂದು ಹೇಳಿದರು. ಹೆಚ್.ಡಿ.ಕೋಟೆಯ ಡ್ಯಾಂ, ಪ್ರಾಣಿಗಳು, ಇಡೀ ದೇಶಕ್ಕೆ ಮಾದರಿ ಯಾಗಿದೆ. ಹಿಂದೆ ಕಾಕನಕೋಟೆಯಾಗಿತ್ತು ಆನೆಗಳನ್ನು ಹಿಡಿದು ವಿಶೇಷವಾದ ಅಧ್ಯಯನ ■6ನೇ ಪುಟಕ್ಕೆ

ದಸರಾದಲ್ಲಿ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಅವಕಾಶ ಮಾಡಿಕೊಡಿ

ಸರ್ಕಾರಕ್ಕೆ ರಂಗಭೂಮಿ ಕಲಾವಿದರಾದ ಹುಯಿಲಾಳು ರಾಮಸ್ವಾಮಿ ಮನವಿ



ರಾಮಸ್ವಾಮಿ

ಮೈಸೂರು, ಸೆ.14–ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಹಲವಾರು ಸ್ಥಳೀಯ ಕಲಾವಿದರು ವಿಶ್ವವಿಖ್ಯಾತ ದಸರಾ ಮಹೋತ್ಸವದಲ್ಲಿ ನಾಟಕ ಪ್ರದರ್ಶನ ನೀಡುವ ಸಲುವಾಗಿ ಅವಕಾಶಕ್ಕಾಗಿ ಕಾದು ಕುಳಿತಿದ್ದಾರೆ. ಆದರೆ, ಈವರೆವಿಗೂ ಅವರಿಗೆ ಅವಕಾಶ ದೊರೆತಿಲ್ಲ ಎಂದು ರಂಗ ಕಲಾವಿದ ಹುಯಿಲಾಳು ರಾಮಸ್ವಾಮಿ ತೀವ್ರ ವಿಷಾದ ವ್ಯಕ್ತಪಡಿಸಿದ್ದಾರೆ.

ಸ್ಥಳೀಯ ಸೀನರಿ ಮಾಲೀಕರು, ನಾಟಕ ನಿರ್ದೇಶಕರು, ಪುರುಷ ಮತ್ತು ಮಹಿಳಾ ಕಲಾವಿದರು, ಕ್ಯಾಸಿಯೋ, ತಬಲಾ ಮುಂತಾದ ವಾದ್ಯಗಳಲ್ಲಿ ಪರಿಣಿತರು ಪ್ರತಿ ವರ್ಷವೂ ದಸರಾ ಮಹೋತ್ಸವದಲ್ಲಿ ಅವಕಾಶಕ್ಕೆ ಕಾದಿರುತ್ತಾರೆ.

ಈ ಬಾರಿಯೂ ದಸರಾದಲ್ಲಿ ಇಂತಹ ಸ್ಥಳೀಯ ಕಲಾವಿದರಿಗೆ ಹಲವು ವೇದಿಕೆಗಳಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವಕಾಶ ನೀಡಿದಲ್ಲಿ ಬಡ ಕಲಾವಿದರನ್ನು ಪ್ರೋತ್ಸಾಹಿಸಿದಂತಾಗುತ್ತದೆ. ಬೇರೆ ಕಡೆಯಿಂದ ಬಂದಂತಹ ಕಲಾವಿದರಿಗೆ ಅವಕಾಶಗಳನ್ನು ಕೊಟ್ಟು ಹೆಚ್ಚಿನ ಅನುದಾನ ನೀಡುತ್ತಿರುವುದು ಅತ್ಯಂತ ವಿಷಾದನೀಯ ಸಂಗತಿ. ಆದರೆ ಕಡಿಮೆ ಹಣಕ್ಕೆ ಉತ್ತಮ ಅಭಿನಯ ನೀಡುವವರು ನಮ್ಮಲ್ಲಿದ್ದಾರೆ. ಅವರಿಗೆ ಮೈಸೂರಿನ ಪುರಭವನ, ಚಿಕ್ಕಗಡಿಯಾರ ವೃತ್ತ, ಜಗನ್ಮೋಹನ ಅರಮನೆ, ಕಲಾಮಂದಿರದಲ್ಲಿ ಅವಕಾಶ ನೀಡುವಂತೆ ಮನವಿ ಮಾಡಿದ್ದಾರೆ. ಪ್ರತಿನಿತ್ಯ 3 ನಾಟಕ ಪ್ರದರ್ಶನಗಳಿದ್ದು, ಅದರ ಬದಲು 5 ನಾಟಕಗಳನ್ನು ಪ್ರದರ್ಶನ ಮಾಡಲು ಅವಕಾಶ ಮಾಡಿಕೊಟ್ಟರೆ, ಎಲ್ಲರಿಗೂ ಅವಕಾಶ ಸಿಕ್ಕಂತಾಗುತ್ತದೆ. ನಾಟಕ ಪ್ರದರ್ಶನದ ವೇಳೆ ಕಲಾವಿದರಿಗೆ ಲಘು ಉಪಹಾರ ಮತ್ತು ಪಾನೀಯಗಳನ್ನು ವಿತರಿಸುವಂತೆಯೂ ಹುಯಿಲಾಳು ರಾಮಸ್ವಾಮಿ ಮನವಿ ಮಾಡಿದ್ದಾರೆ.

ಸರ್ಕಾರ ಯಾವುದೇ ಲಾಬಿಗೆ ಮಣಿದು ಪ್ರಶಸ್ತಿ ನೀಡಬಾರದು

ಸಾಹಿತಿ ಡಿಎನ್‌ಕೆ ಅವರ 'ಮಹಾಚೈತನ್ಯ', 'ವಿಮೋಚನೆ', 'ವಿಜಯಯಾತ್ರೆ' ಕೃತಿಗಳ ಬಿಡುಗಡೆಗೊಳಿಸಿ ಶಾಸಕ ಶ್ರೀವತ್ಸ ಅಭಿಮತ



ಮೈಸೂರಿನ ಗೋಪಾಲಸ್ವಾಮಿ ಪದವಿಪೂರ್ವ ಕಾಲೇಜಿನ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಡಿ.ಎನ್.ಕೃಷ್ಣಮೂರ್ತಿಯವರನ್ನು ಅಭಿನಂದಿಸಲಾಯಿತು. ಚಿತ್ರದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಡಾ.ಎಸ್.ಮುರುಳಿ, ಮೈ.ವಿ.ರವಿಶಂಕರ್ ಇನ್ನಿತರರನ್ನು ಕಾಣಬಹುದು.

ಮೈಸೂರು,ಸೆ.14(ಜಿಎ)–ಪ್ರತಿಭೆಯನ್ನು ಗುರುತಿಸಿ ಪ್ರಶಸ್ತಿ ನೀಡಬೇಕು. ರಾಜ್ಯ ಸರ್ಕಾರ ಯಾವುದೇ ಪ್ರಶಸ್ತಿಯನ್ನು ಲಾಬಿಗೆ ಮಣಿದು ನೀಡಬಾರದು ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ಗೋಪಾಲಸ್ವಾಮಿ ಪದವಿಪೂರ್ವ ಕಾಲೇಜಿನ ಸಭಾಂಗಣದಲ್ಲಿ ಡಿಎನ್ಕೆ ಸ್ನೇಹ ಬಳಗ, ಮೈಸೂರು ಕನ್ನಡ ವೇದಿಕೆ, ಸ್ವಜನ್ಯ ಸಾಹಿತ್ಯಕಲಾ ವೇದಿಕೆ ವತಿಯಿಂದ ಹಿರಿಯ ಸಾಹಿತಿ ಡಿ.ಎನ್.ಕೃಷ್ಣಮೂರ್ತಿ ಅವರ 'ಮಹಾಚೈತನ್ಯ', 'ವಿಮೋಚನೆ' ಮತ್ತು 'ವಿಜಯಯಾತ್ರೆ' ಕೃತಿಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸಾಹಿತ್ಯ, ಕೃಷಿ, ತಂತ್ರಜ್ಞಾನ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು ಎಲೆಮರೆ ಕಾಯಿಯಂತೆ ಇದ್ದಾರೆ. ಅಂತವರನ್ನು ಸರಕಾರವೇ ಗುರುತಿಸಿ ಪ್ರಶಸ್ತಿ ನೀಡಿದರೆ, ಪ್ರಶಸ್ತಿಯ ಬೆಲೆ ಹೆಚ್ಚಾಗಲಿದೆ. ಕೆಲವರು ಪ್ರಶಸ್ತಿಗಳನ್ನು ಪಡೆಯಲು ಸಾಕಷ್ಟು ಲಾಬಿ ಮಾಡುತ್ತಾರೆ. ಆದರೆ, ನಮ್ಮಲ್ಲಿರುವ ಪ್ರತಿಭೆಗಳು, ಹೊರ ಜಗತ್ತಿಗೆ ಗೊತ್ತಾಗಬೇಕು ಎಂದರು.

ಹಿರಿಯ ಸಾಹಿತಿ ಡಿ.ಎನ್.ಕೃಷ್ಣಮೂರ್ತಿ ಅವರು ಮಹಾಚೈತನ್ಯ ಸಾಹಿತ್ಯ ಕೃತಿಯಲ್ಲಿ ಮಾಸ್ತಿ ಅವರ ಬಗ್ಗೆ ಚೆನ್ನಾಗಿ ಅಧ್ಯಯನ ಮಾಡಿ ಬರೆದಿದ್ದಾರೆ. ಅಲ್ಲದೆ, ಗ್ರಾಮೀಣ ಪ್ರದೇಶದ ಅನುಭವ ಹೊಂದಿರುವುದರಿಂದ, ಸಾಹಿತ್ಯದಲ್ಲಿ ಗ್ರಾಮೀಣತೆ ಸಹಜವಾಗಿ ಬಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹಿರಿಯ ಸಾಹಿತಿ ಡಿ.ಎನ್. ಕೃಷ್ಣಮೂರ್ತಿ ಮಾತನಾಡಿ, ರಾಜ್ಯ ಸರ್ಕಾರ ಲೇಖಕರ ಹಾಗೂ ಪ್ರಕಾಶಕರಿಂದ, ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿ ಮಾಡಿದರೆ, ಇಬ್ಬರಿಗೂ ಆರ್ಥಿಕ ಸಮಸ್ಯೆಗಳು ಕಡಿಮೆಯಾಗಲಿದೆ ಎಂದು ಮನವಿ ಮಾಡಿದರು.

ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅವರು 'ಮಹಾಚೈತನ್ಯ', ಡಾ.ಕಬ್ಬಿ ನಾಲೆ ವಸಂತ ಭಾರದ್ವಾಜ್ ಅವರು 'ವಿಮೋಚನೆ', ಡಾ.ಎಸ್.ಶಿವರಾಜಪ್ಪ ಅವರು 'ವಿಜಯಯಾತ್ರೆ' ಕೃತಿ ಕುರಿತು ಮಾತನಾಡಿದರು.

ಇದೇ ಸಂದರ್ಭದಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಅವರು ಸಾಹಿತಿ ಡಿ.ಎನ್. ಕೃಷ್ಣಮೂರ್ತಿ ಅವರನ್ನು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಎಂಐಟಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಎಸ್.ಮುರಳಿ, ಸಮಾಜ ಸೇವಕ ಮೈ.ವಿ.ರವಿಶಂಕರ್, ಡಿಎನ್ಕೆ ಸ್ನೇಹ ಬಳಗದ ಎಂ.ಆರ್.ಚಂದ್ರಶೇಖರ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಸ್ವಜನ್ಯ ಸಾಹಿತ್ಯ ಕಲಾವೇದಿಕೆ ಅಧ್ಯಕ್ಷ ಎಸ್.ಶಿಶಿರಂಜನ್ ಮತ್ತಿತರರು ಉಪಸ್ಥಿತರಿದ್ದರು.

ಅದಾಲತ್‌ನಲ್ಲಿ 11 ಸಾವಿರ ಪ್ರಕರಣ ಇತ್ಯರ್ಥ


41 ಜೋಡಿ ಮತ್ತೆ ಹೊಸ ಜೀವನಕ್ಕೆ ಹೆಜ್ಜೆ

ಮೈಸೂರು,ಸೆ.14–ಮೈಸೂರು ನಗರ ಹಾಗೂ ತಾಲೂಕು ನ್ಯಾಯಾಲಯಗಳಲ್ಲಿ ನಡೆದ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ 11 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಇತ್ಯರ್ಥಗೊಂಡಿವೆ.

ಮೈಸೂರು ನಗರ ಮತ್ತು ತಾಲೂಕು ನ್ಯಾಯಾಲಯಗಳಲ್ಲಿ 64,530 ಸಿವಿಲ್ ಹಾಗೂ 64,077 ಕ್ರಿಮಿನಲ್ ಪ್ರಕರಣ ಸೇರಿ ಒಟ್ಟು 1,28,607 ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. ಇವುಗಳಲ್ಲಿ 44,312 ರಾಜಿಯಾಗಬಹುದಾದ ಪ್ರಕರಣಗಳಿದ್ದು, ಇಂದಿನ ಅದಾಲತ್‌ನಲ್ಲಿ 22,678 ಪ್ರಕರಣಗಳನ್ನು ರಾಜಿ ಸಂಧಾನಕ್ಕಾಗಿ ತೆಗೆದುಕೊಳ್ಳಲಾಗಿತ್ತು. ಇದರಲ್ಲಿ 11,293 ಪ್ರಕರಣಗಳನ್ನು ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗಿದೆ.

ಈ ಬಾರಿಯ ಲೋಕ್ ಅದಾಲತ್‌ನಲ್ಲಿ ವಿಶೇಷವಾಗಿ ಸಂಚಾರ ನಿಯಮ ಉಲ್ಲಂಘನೆ ಒಟ್ಟು 10,09,305 ಪ್ರಕರಣಗಳು ವಿಲೇವಾರಿಯಾಗಿದ್ದು, 26,14,54,700 ರೂ. ದಂಡ ಸಂಗ್ರಹವಾಗಿದೆ. ಕೌಟುಂಬಿಕ ವಿವಾದದ ಪ್ರಕರಣಗಳಲ್ಲಿ 41 ದಂಪತಿ ವಾಜ್ಯ ಬಗೆಹರಿಸಿಕೊಂಡು ಹೊಸ ಜೀವನಕ್ಕೆ ಹೆಜ್ಜೆ ಹಾಕಿದರು. ಸಿವಿಲ್ ಹಾಗೂ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 102,32,46,249 ರೂ. ವ್ಯಾಜ್ಯ ಇತ್ಯರ್ಥವಾಗಿದೆ. ಅದಾಲತ್ ಯಶಸ್ಸಿಗೆ ಸಹಕರಿಸಿದ ವಕೀಲರ ಸಂಘದ ಪದಾಧಿಕಾರಿಗಳು, ಎಲ್ಲಾ ವಕೀಲರು, ಕಕ್ಷಿದಾರರು, ಪೊಲೀಸ್ ಇನ್ನಿತರೆ ಎಲ್ಲಾ ಇಲಾಖೆ ಅಧಿಕಾರಿಗಳಿಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ಶ್ರೀಮತಿ ಉಷಾರಾಣಿ ಅವರು ಧನ್ಯವಾದ ತಿಳಿಸಿದ್ದಾರೆ.

ಇಂದು, ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಸೆ.14–ಸೆಪ್ಟೆಂಬರ್ 15 ಮತ್ತು 16ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ನಿರ್ವಹಣೆ ಕಾಮಗಾರಿ ನಿಮಿತ್ತ ಹಂಪಾಪುರ, ಕಂಚಮಳ್ಳಿ, ಹೊಮ್ಮರಗಳ್ಳಿ, ಮಾದಾಪುರ, ಕೆ.ಬೆಳ್ತೂರು, ಮನುಗನಹಳ್ಳಿ ಮತ್ತು ಬಾಚೇ ಗೌಡನಹಳ್ಳಿ ಪಂಚಾಯಿತಿ ವ್ಯಾಪ್ತಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಸೆ.16ರಂದು ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಹುಲ್ಲಹಳ್ಳಿ, ಶಿರಮಳ್ಳಿ, ಹಗಿನವಾಳು, ರಾಂಪುರ, ಹುಸ್ಕೂರು, ವಳಗೆರೆ, ಹರತಲೆ, ಬೆಳಲೆ, ಹೆಗ್ಗಡಹಳ್ಳಿ, ಗಾಂಧಿಗ್ರಾಮ, ಬ್ಯಾಳಾರು, ಗೌಡರಹುಂಡಿ, ಅಹಲ್ಯ, ಮೊಬಳ್ಳಿ, ಕಾರ್ಯ, ಮಾದಾಪುರ, ಕುರಿಹುಂಡಿ, ದುಗಳ್ಳಿ, ಯಾಲೇಹಳ್ಳಿ ಗ್ರಾಪಂ ವ್ಯಾಪ್ತಿ ಪ್ರದೇಶಗಳು. ಅಲ್ಲದೆ **ಸೆ.15ರಂದು** ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಕಾರ್ಯ, ಬಾನೂರು, ಚಿನ್ನಂಬಳ್ಳಿ, ಕಾರೇಪುರ, ಹಾಡ್ಯ, ಕಾಮಳ್ಳಿ, ತಗಡೂರು, ಕೊತ್ತಯ್ಯನಹುಂಡಿ, ಕಕ್ಕರಹಟ್ಟಿ, ಬೋಗಯ್ಯನಹುಂಡಿ, ಅರಳಿಕಟ್ಟೆಹುಂಡಿ ಗ್ರಾಪಂ ವ್ಯಾಪ್ತಿಯ ಪ್ರದೇಶಗಳು. ನೇರಳೆ, ಹಳೇಪುರ, ಹಂಪಾಪುರ ಕೆ.ಐ.ಎ.ಡಿ.ಬಿ (W/S) ಹೆಮ್ಮರಗಾಲ, ಕುಂಬ್ರಹಳ್ಳಿ, ಮಲ್ಲಹಳ್ಳಿ, ಭುಜಗಯ್ಯನಹುಂಡಿ, ಹೆಡತಲೆ, ಬಸವಟ್ಟಿಗೆ, ಶ್ರೀನಗರ, ಸಿಂಗಾರಿಪುರ, ಮಾಡ್ರಹಳ್ಳಿ, ಗೋಣತಗಾಲ ಗ್ರಾಪಂ ವ್ಯಾಪ್ತಿ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಎಂಐಟಿಯಲ್ಲಿ ಹ್ಯಾಕಥಾನ್ ಕಾರ್ಯಕ್ರಮ



ನಂಜನಗೂಡು ತಾಲೂಕು ತಾಂಡವಪುರದ ಮಹಾರಾಜ ತಾಂತ್ರಿಕ ಮಹಾವಿದ್ಯಾಲಯದಲ್ಲಿ ರಾಷ್ಟ್ರಮಟ್ಟದ ಹ್ಯಾಕಥಾನ್ ಕಾರ್ಯಕ್ರಮ ನಡೆಯಿತು.

ಮೈಸೂರು, ಸೆ. 14– ನಂಜನಗೂಡು ತಾಲೂಕು ತಾಂಡವಪುರದ ಮಹಾ ರಾಜ ತಾಂತ್ರಿಕ ಮಹಾವಿದ್ಯಾಲಯದ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದ ವತಿಯಿಂದ ರಾಷ್ಟ್ರಮಟ್ಟದ ಹ್ಯಾಕಥಾನ್ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸುಮಾರು 100ಕ್ಕೂ ಹೆಚ್ಚು ತಂಡಗಳು ಮತ್ತು 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ದೇಶದ ವಿವಿಧ ಭಾಗಗಳಿಂದ ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದ್ಯಾಸಿನ್ ಟೆಕ್ನೋ ಸಾಫ್ಟ್ ಟೆಕ್ನಾಲಜೀಸ್ ಲಿಮಿಟೆಡ್‌ನ ಸಿಇಓ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಕೃತಕ ಬುದ್ಧಿಮತ್ತೆ ಮತ್ತು ಸೈಬರ್ ಸುರಕ್ಷತೆ ವಿಷಯದ ಮಹತ್ವ ವಿವರಿಸಿದರು. ವಿಜೇತ ತಂಡಗಳಿಗೆ ಒಟ್ಟು ರೂ. 1,00,000 ನಗದು ಬಹುಮಾನ, ಉಡುಗೊರೆ ನೀಡಲಾಯಿತು. ಎಂಐಟಿಯ ಡಾ.ಡಿ.ಎಸ್. ಗುರು, ಕಾಲೇಜಿನ ಪ್ರಾಂಶುಪಾಲ ಡಾ.ವೈ.ಟಿ.ಕೃಷ್ಣೇಗೌಡ, ಡಾ.ಎಚ್.ಕೆ. ಚೇತನ್ ಉಪಸ್ಥಿತರಿದ್ದರು. ರಾಜುಕೆ. ಪ್ರಥಮ ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ನೀಡಿದರು. ಎರಡನೇ ಮತ್ತು ಮೂರನೇ ತಂಡಕ್ಕೆ ಉಚಿತ ಇಂಟರ್ನ್‌ಶಿಪ್ ಅವಕಾಶ ನೀಡಿದರು.

ಬೇಡಿಕೆಗಳ ಈಡೇರಿಕೆಗೆ ಸರ್ಕಾರದ ಮೇಲೆ ಒತ್ತಡ ತರಲು ಶಿಕ್ಷಕರ ಸಂಘ ನಿರ್ಧಾರ

ಮೈಸೂರು,ಸೆ.14(ಎಸ್‌ಪಿಎನ್)– ಪ್ರಾಥಮಿಕ ಶಾಲಾ ಶಿಕ್ಷಕರ ಮುಂಬಡ್ತಿಗೆ ಟಿಇಟಿ ಪರೀಕ್ಷೆ ಕಡ್ಡಾಯಗೊಳಿಸಿರುವ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ಮರು ಪರಿಶೀಲನಾ ಅರ್ಜಿ ಸಲ್ಲಿಕೆ ಸೇರಿದಂತೆ ಇತರೆ 14 ಬೇಡಿಕೆಗಳನ್ನು ಈಡೇರಿಸಲು ರಾಜ್ಯ ಸರ್ಕಾರದ ಮೇಲೆ ಒತ್ತಡ ತರಲು ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ನಿರ್ಧರಿಸಿದೆ. 4.9.2025ರ ಸಚಿವ ಸಂಪುಟದ ತೀರ್ಮಾನಗಳಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಹಾಗೂ ಇತರೆ ಬೇಡಿಕೆಗಳನ್ನು ಈಡೇರಿಸಲು ಸರ್ಕಾರದ ಮೇಲೆ ಒತ್ತಡ ತರಬೇಕು. ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಸರ್ಕಾರಿ ಶಾಲೆ ಶಿಕ್ಷಕಿ ಮೇಲೆ ದೌರ್ಜನ್ಯ ಎಸಗಿದ ಪೋಷಕರ ವಿರುದ್ಧ ಕಾನೂನು ಕ್ರಮ ಜರುಗಿಸಲು ಖಂಡನಾ ನಿರ್ಣಯವನ್ನು ಬೆಂಗಳೂರಲ್ಲಿ ನಡೆದ ಶಿಕ್ಷಕರ ಸಂಘದ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಪ್ರಾಥಮಿಕ ಶಾಲಾ ಸಹಶಿಕ್ಷಕರಿಗೆ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ, 2017 ಮುನ್ನ 1–7ನೇ ತರಗತಿಗೆ ಬೋಧನೆಗೆ ನೇಮಕವಾದ ಶಿಕ್ಷಕರಿಗೆ ಸಾಮೂಹಿಕ ಹಿಂಬಡ್ತಿ ಸರಿಪಡಿಸಲು ಸೇವಾ ಜೇಷ್ಠತೆಯೊಂದಿಗೆ ಬಡ್ತಿ, ಸೇವಾನಿರತ ಪದವೀಧರ ಪಿಎಸ್‌ಟಿ ಶಿಕ್ಷಕರ ಆರ್ಥಿಕ ಸೌಲಭ್ಯಕ್ಕೆ ಆಗ್ರಹಿಸಲಾಯಿತು.

ಇಂದು ಉಚಿತ ಆಯುರ್ವೇದ ವೈದ್ಯಕೀಯ ತಪಾಸಣಾ ಶಿಬಿರ

ಮೈಸೂರು, ಸೆ. 14–ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಪ್ರಯುಕ್ತ ಮೈಸೂರಿನ ಕಾವೇರಿ ಆಯುರ್ವೇದ ಆಸ್ಪತ್ರೆಯಲ್ಲಿ ಸೆ.15ರಂದು ಬೆಳಗ್ಗೆ 9.30ರಿಂದ 4.30 ರವರೆಗೆ ಉಚಿತ ಆಯುರ್ವೇದ ವೈದ್ಯಕೀಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಹಿರಿಯ ನಾಗರಿಕರ ಸೇವೆ, ಆರೈಕೆಗಾಗಿ ಆರೋಗ್ಯ ಆಶ್ರಯಧಾಮ


ಮೈಸೂರು, ಸೆ.14–ಹಿರಿಯ ನಾಗರೀಕರ ಆರೈಕೆ ಮತ್ತು ಸೇವೆ ಮಾಡುವ ಸಲುವಾಗಿ ಮೈಸೂರಿನ ವಿಜಯನಗರದಲ್ಲಿ ಸ್ಥಾಪನೆ ಆಗಿರುವ ಆರೋಗ್ಯ ಆಶ್ರಯಧಾಮ 14ನೇ ವರ್ಷಕ್ಕೆ ಕಾಲಿಟ್ಟಿದ್ದು ಕೆಲವು ವಿಶೇಷ ಸೌಲಭ್ಯಗಳನ್ನು ಕಲ್ಪಿಸಲು ಮುಂದಾಗಿದೆ. 30 ಹಾಸಿಗೆಗಳ ಸೌಲಭ್ಯವಿರುವ ಈ ಆಶ್ರಯಧಾಮದಲ್ಲಿ ಹಾಸಿಗೆ ಹಿಡಿದವರು, ಅವಲಂಬಿತರು, ಅಶಕ್ತರು, ಹಿರಿಯ ರೋಗಿಗಳ ಆರೈಕೆ, ಅವಸಾನ ಅಂಚಿನಲ್ಲಿರುವವರಿಗೆ ಸೇವೆ, ಪಾರ್ಕಿನ್‌ಸನ್, ಡಿಮೆನ್ಶಿಯಾ, ಅಲ್ಜಿಮರ್ಸ್, ಹೆಲ್ತ್ ಮಾನಿಟರಿಂಗ್, ಫಿಸಿಯೋಥೆರಪಿ, ನಿಯಮಿತ ವೈದ್ಯರ ಭೇಟಿ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಹೆಚ್ಚಿನ ವಿವರಗಳು ಮತ್ತು ಸಲಹೆಗಳಿಗಾಗಿ ದೂ.9986346668, 9886344884 ಮೂಲಕ ಸಂಪರ್ಕಿಸುವಂತೆ ಆಶ್ರಯಧಾಮದ ಮುಖ್ಯಸ್ಥರು ಮನವಿ ಮಾಡಿದ್ದಾರೆ.

ಸಂಧಾನ ಸಭೆಗೆ ಕೆಎಸ್‌ಆರ್‌ಟಿಸಿ ನೌಕರರ ಒಕ್ಕೂಟ ಸಿಎಂಗೆ ಮನವಿ

ಮೈಸೂರು,ಸೆ.14(ಎಸ್‌ಪಿಎನ್)–ನೌಕರರ ಬೇಡಿಕೆಗಳನ್ನು ಈಡೇರಿಸಲು ಕಾರ್ಮಿಕ ಮುಖಂಡರು ಮತ್ತು ಸರ್ಕಾರದೊಂದಿಗೆ 'ಸಂಧಾನ ಸಭೆ' ಏರ್ಪಡಿಸುವಂತೆ ಕೆಎಸ್‌ಆರ್‌ಟಿಸಿ ಮೈಸೂರು ವಲಯದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಮಸ್ತ ನೌಕರರ ಕ್ಷೇಮಾಭಿವೃದ್ಧಿ ಸಮಿತಿ, ಮುಖ್ಯಮಂತ್ರಿ ಸಿದ್ದರಾಮಯ್ಯರಲ್ಲಿ ಮನವಿ ಮಾಡಿದೆ.

ಕಾರ್ಮಿಕರ ನೋವುಗಳನ್ನು ಹತ್ತಿರದಿಂದ ಬಲ್ಲವರಾದ ಸಿಎಂ ಸಿದ್ದರಾಮಯ್ಯನವರು, ನಾಲ್ಕು ನಿಗಮದ ನೌಕರರಿಗೆ ಬರಬೇಕಾದ 38 ತಿಂಗಳ ಹಿಂಬಾಕಿ ಮೊತ್ತ ಹಾಗೂ 1.1.2024ರಿಂದ ಜಾರಿಗೆ ಬರುವಂತೆ ವೇತನ ಪರಿಷ್ಕರಣೆ ಮಾಡುವಂತೆ ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿದ್ದಾರೆ. ಈ ಕೂಡಲೇ ಸಾಮಾಜಿಕ ನ್ಯಾಯದಡಿ ಕೆಎಸ್‌ಆರ್‌ಟಿಸಿ ನೌಕರರ ಬೇಡಿಕೆಗಳನ್ನು ಈಡೇರಿಸಲು ರಾಜ್ಯ ಸರ್ಕಾರ ಕಾರ್ಮಿಕ ಮುಖಂಡರೊಂದಿಗೆ ಸಂಧಾನ ಸಭೆ ನಡೆಸಲು ತನ್ನ ಇಚ್ಛಾಸಕ್ತಿ ಪ್ರದರ್ಶಿಸಬೇಕು ಎಂದು ಹಿರಿಯ ಕಾರ್ಮಿಕ ಮುಖಂಡ ಎಂ.ಮಲ್ಲಯ್ಯ ಮನವಿ ಮಾಡಿದ್ದಾರೆ.

ರಾಣಿ ಅಬ್ಬಕ್ಕ ಜಯಂತ್ಯುತ್ಸವ; ರಥೋತ್ಸವಕ್ಕೆ ಚಾಲನೆ



ರಾಣಿ ಅಬ್ಬಕ್ಕ ಅವರ 500ನೇ ಜಯಂತ್ಯುತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ರಥಯಾತ್ರೆಗೆ ಹಿಂದೂ ಸಂಘಟನೆ ಮುಖಂಡರು ಚಾಲನೆ ನೀಡಿದರು.

ಮೈಸೂರು, ಸೆ.14–(ಎಸ್‌ಪಿಎನ್)– ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಮುಂಭಾಗದಲ್ಲಿ ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಅಬ್ಬಕ್ಕ ಅವರ 500ನೇ ಜಯಂತ್ಯೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ರಥಯಾತ್ರೆಗೆ ಎಬಿವಿಪಿ ಕಾರ್ಯಕರ್ತರು ಹಾಗೂ ಹಿಂದೂ ಸಂಘಟನೆ ಮುಖಂಡರು ಪುಷ್ಪಾರ್ಚನೆ ಮಾಡಿ, ಚಾಲನೆ ನೀಡಿದರು.

ಬಳಿಕ ಈ ರಥಯಾತ್ರೆಯು ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಹೊರಟು, ಬಸವೇಶ್ವರ ವೃತ್ತದ ಮಾರ್ಗವಾಗಿ ಅಗ್ರಹಾರ ವೃತ್ತದ ಮೂಲಕ ಸಿದ್ದಪ್ಪ ವೃತ್ತ, ನಂಜುಮಳಿಗೆ ಸರ್ಕಲ್ ಮೂಲಕ ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಆವರಣ ತಲುಪಿತು. ನಂತರ ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಧ್ಯಾಪಕಿ ಡಾ.ಎಚ್.ಎಸ್. ಉಷಾರಾಣಿ ಮಾತನಾಡಿ, ರಾಣಿ ಅಬ್ಬಕ್ಕರ ಶೌರ್ಯ, ಸಾಹಸ, ಜೀವನ ಇಂದಿನ ಯುವ ಸಮೂಹಕ್ಕೆ ಆದರ್ಶಪ್ರಾಯವಾಗಿದೆ. ಪೋರ್ಚುಗೀಸರಿಗೆ ಸಿಂಹಸ್ವಪ್ನವಾಗಿದ್ದ ರಾಣಿ ಅಬ್ಬಕ್ಕರ ಧೈರ್ಯ ಇಂದಿನ ಮಹಿಳೆಯರಲ್ಲಿ ಇರಬೇಕು ಎಂದು ಸಲಹೆ ನೀಡಿದರು.

ಎನ್‌ಐಇ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎಲ್.ಮದನ್ ಕುಮಾರ್ ಮಾತನಾಡಿ, ರಾಣಿ ಅಬ್ಬಕ್ಕನ ದೇಶಪ್ರೇಮ, ದಿಟ್ಟತನದ ಹೋರಾಟ, ಅವರ ತ್ಯಾಗದ ಮನೋಭಾವ ಎಂದೆಂದಿಗೂ ನಮಗೆಲ್ಲರಿಗೂ ಪ್ರೇರಣೆ ಎಂದರು. ಎಬಿವಿಪಿ ಕರ್ನಾಟಕ ಸಹ ಸಂಚಾಲಕ ಎಚ್.ಬಿ.ಪ್ರಜ್ವಲ್ ಮಾತನಾಡಿದರು. ಈ ವೇಳೆ ಎಬಿವಿಪಿ ಮುಖಂಡರಾದ ಗಂಗಾಧರ್, ಶಿವು, ಮಂದಾರ, ಧನ್ಯ, ಪಟೇಲ್, ಆಕಾಶ್, ಇಂಚರ, ಭಾನುಷಾ, ಶೃತಿ, ನಾರಾಯಣ್, ಪ್ರಜ್ಞಾ, ಮಂಜುಶ್ರೀ ಉಪಸ್ಥಿತರಿದ್ದರು.

ಮಹದೇಶ್ವರ ಬೆಟ್ಟದಲ್ಲಿ ಮಹಾಲಯ ಅಮಾವಾಸ್ಯೆ, ದಸರಾ, ದೀಪಾವಳಿ, ಕಾರ್ತಿಕ ಜಾತ್ರಾ ಮಹೋತ್ಸವ



ಮೈಸೂರು: ಚಾಮರಾಜನಗರ ಜಿಲ್ಲೆಯ ಪ್ರಸಿದ್ಧ ಪುಣ್ಯ ಕ್ಷೇತ್ರ ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರದ ದೇವಾಲಯದಲ್ಲಿ 2025ನೇ ಸಾಲಿನಲ್ಲಿ ಈ ಕೆಳಕಂಡ ಜಾತ್ರೆಗಳು ವಿಜೃಂಭಣೆಯಿಂದ ಜರುಗಲಿವೆ.

ಮಹಾಲಯ ಅಮಾವಾಸ್ಯೆ ಜಾತ್ರಾ ಮಹೋತ್ಸವ: ಸೆ.19ರಂದು ಮಹಾಲಯ ಅಮಾವಾಸ್ಯೆ ಜಾತ್ರೆ ಪ್ರಾರಂಭ, ಸೆ.20ರಂದು ಚತುರ್ದಶಿ, ಶ್ರೀ ಸ್ವಾಮಿಗೆ ಎಣ್ಣೆ ಮಜ್ಜನ ಸೇವೆ, ವಿಶೇಷ ಸೇವೆ, ಉತ್ಸವಾದಿಗಳು, ಸೆ.21ರಂದು ಮಹಾಲಯ ಅಮಾವಾಸ್ಯೆ, ಶ್ರೀ ಸ್ವಾಮಿಗೆ ಅಮಾವಾಸ್ಯೆ ವಿಶೇಷ ಸೇವೆ ಮತ್ತು ಉತ್ಸವಾದಿಗಳು.

ದಸರಾ ಜಾತ್ರಾ ಮಹೋತ್ಸವ: ಸೆ.22ರಂದು ಶರನ್ನವರಾತ್ರಾರಂಭ ಉಯ್ಯಾಲೋತ್ಸವ ಪ್ರಾರಂಭ, ಅ.1ರಂದು ಮಹಾನವಮಿ, ಆಯುಧ ಪೂಜೆ, ಅ.2ರಂದು ವಿಜಯ ದಶಮಿ, ಕುದುರೆ ವಾಹನೋತ್ಸವ, ದಶಮಿ ಪೂಜೆ, ಹಾಗೂ ನೈವೇದ್ಯದ ನಂತರ ತೆಪ್ಪೋತ್ಸವ.

ದೀಪಾವಳಿ ಜಾತ್ರಾ ಮಹೋತ್ಸವ: ಅ.18ರಂದು ದೀಪಾವಳಿ ಜಾತ್ರೆ ಪ್ರಯುಕ್ತ ವಿಶೇಷ ಕಾರ್ಯಕ್ರಮಗಳು ಪ್ರಾರಂಭ, ಅ.19 ಶ್ರೀ ಸ್ವಾಮಿಗೆ ಎಣ್ಣೆಮಜ್ಜನ ಹಾಗೂ ವಿಶೇಷ ಸೇವೆ, ಉತ್ಸವಾದಿಗಳು, ಅ.20ರಂದು ನರಕ ಚತುರ್ದಶಿ, ವಿಶೇಷ ಸೇವೆ ಮತ್ತು ಉತ್ಸವಾದಿಗಳು, ಅ.21ರಂದು ದೀಪಾವಳಿ ಅಮಾವಾಸ್ಯೆ, ಬೆಳಗ್ಗೆ 9–15ರ ನಂತರ ಹಾಲರವಿ ಉತ್ಸವ, ವಿಶೇಷ ಸೇವೆ ಮತ್ತು ಉತ್ಸವಾದಿಗಳು, ಅ.22ರಂದು ದೀಪಾವಳಿ ಮಹಾರಥೋತ್ಸವ ಬೆಳಗ್ಗೆ 9–15ರಿಂದ ಬೆಳಿಗ್ಗೆ 9–55 ಗಂಟೆಯವರೆಗೆ, ಹಾಗೂ ರಾತ್ರಿ ಪೂಜೆ, ನೈವೇದ್ಯದ ನಂತರ ತೆಪ್ಪೋತ್ಸವ.

ಕಾರ್ತಿಕ ಸೋಮವಾರ ಜಾತ್ರಾ ಮಹೋತ್ಸವ: ಅ.27ರಂದು ಮೊದಲನೇ ಕಾರ್ತಿಕ ಸೋಮವಾರ, ನ.3ರಂದು 2ನೇ ಕಾರ್ತಿಕ ಸೋಮವಾರ, ನ.10ರಂದು 3ನೇ ಕಾರ್ತಿಕ ಸೋಮವಾರ, ನ.17ರಂದು 4ನೇ ಕಾರ್ತಿಕ ಸೋಮವಾರ ರಾತ್ರಿ ವಿಶೇಷ ಪೂಜೆ, ನೈವೇದ್ಯ ನಂತರ ಶ್ರೀ ಮಹದೇಶ್ವರ ಜ್ಯೋತಿದರ್ಶನ, ತದನಂತರ ತೆಪ್ಪೋತ್ಸವ, ನವೆಂಬರ್ 18ರಿಂದ ನವೆಂಬರ್ 20ರವರೆಗೆ ಶ್ರೀ ಸ್ವಾಮಿಯವರಿಗೆ ಎಣ್ಣೆ ಮಜ್ಜನ ಸೇವೆ, ವಿಶೇಷ ಸೇವೆ, ಉತ್ಸವಾದಿಗಳು ಛಟ್ಟಿ ಅಮಾವಾಸ್ಯೆ ನಡೆಯುತ್ತದೆ. ಭಕ್ತಾದಿಗಳು ಸಕಾಲದಲ್ಲಿ ಶ್ರೀ ಕ್ಷೇತ್ರಕ್ಕೆ ಬಂದು ಸೇವೆ ಕಾರ್ಯ ಕ್ರಮಗಳಲ್ಲಿ ಭಾಗವಹಿಸಬಹುದಾಗಿದೆ ಎಂದು ಮಹದೇಶ್ವರಬೆಟ್ಟದ ಶ್ರೀ ಮಲೈಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ರಘು ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.09.2025 ಸೋಮವಾರ, ಮಳೆ ನಕ್ಷತ್ರ: ಉತ್ತರಾ 14.09.2025ರಿಂದ 26.09.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತ, ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಫಿಸ್ತೂಲಾ/ಭಗಂದರ, ನಾಡಿವ್ರಣ, ಫಿಸರ್ ಮತ್ತು ಶರದ್ ವಿರೇಚನ ಪಂಚಕರ್ಮ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಗ್ಯಾಸ್ಟ್ರೈಟಿಸ್ (ಆಮ್ಲ ಪಿತ್ತ) ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಕೆಎಂಪಿಕೆ ಟ್ರಸ್ಟ್ ಹಾಗೂ ಜೀವಧಾರ ರಕ್ತನಿಧಿ ಕೇಂದ್ರ :** ಭಾರತ ರತ್ನ, ಸರ್ ಎಂ.ವಿಶ್ವೇಶ್ವರಯ್ಯ ಜಯಂತ್ಯುತ್ಸವ, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ನಂ.ಶ್ರೀಕಂಠಕುಮಾರ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಸರ್‌ಎಂ. ವಿಶ್ವೇಶ್ವರಯ್ಯ ವೃತ್ತ (ಕೆ.ಆರ್. ಸರ್ಕಲ್), ಬೆಳಗ್ಗೆ 11 ಗಂಟೆಗೆ.
- **ಮೈಸೂರು ವಿಶ್ವವಿದ್ಯಾನಿಲಯ, ಪ್ರಸಾರಾಂಗ, ಕನ್ನಡ ಜಾನಪದ ಪರಿಷತ್:** ವಿಶ್ವ ಜಾನಪದ ಹಾಗೂ ವಿಶ್ವ ಬುಡಕಟ್ಟು ದಿನಾಚರಣೆ ಕಾರ್ಯಕ್ರಮ–2025, ಉದ್ಘಾಟನೆ: ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ.ಸವಿತಾ, ಅಧ್ಯಕ್ಷತೆ: ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗನೂರು, ಸ್ಥಳ: ಕುವೆಂಪು ಸಭಾಂಗಣ, ಪ್ರಸಾರಾಂಗ, ಬೆಳಗ್ಗೆ 11 ಗಂಟೆಗೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ, ನರುಳಿ ಮತ್ತು ಸೊಂಟ ನೋವಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜೆಎಸ್‌ಎಸ್ ತಾಂತ್ರಿಕ ವಿದ್ಯಾ ಸಂಸ್ಥೆ, ಮೈಸೂರು:** ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾ ಸ್ವಾಮೀಜಿಯವರ 110ನೇ ಜಯಂತಿ ಮಹೋತ್ಸವ, ದಿವ್ಯ ಸಾನ್ನಿಧ್ಯ: ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಮುಖ್ಯ ಅತಿಥಿ: ಮೈಸೂರು ವಿವಿಯ ನಿವೃತ್ತ ಪ್ರೊಫೆಸರ್ ಹೆಚ್.ಎಂ.ರಾಜಶೇಖರ, ಜೆಎಸ್‌ಎಸ್ ಮಹಾ ವಿದ್ಯಾಪೀಠದ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಬಿ.ಸುರೇಶ್, ಅಧ್ಯಕ್ಷತೆ: ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿವಿಯ ಉಪಕುಲಪತಿ ಪ್ರೊ.ಎ.ಎಸ್.ಸಂತೋಷ್‌ಕುಮಾರ್, ಸ್ಥಳ: ಎಸ್‌ಜೆಸಿಇ ಸಭಾಂಗಣ, ಬೆಳಗ್ಗೆ 11 ಗಂಟೆಗೆ.
- **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಪಾಲಿಟೆಕ್ನಿಕ್ :** ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಅವರ 165ನೇ ಜಯಂತಿ ಮಹೋತ್ಸವ, 58ನೇ ಇಂಜಿನಿಯರ್ಸ್ ಡೇ, ಮುಖ್ಯ ಅತಿಥಿ: ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್ (ಪಿಡಬ್ಲ್ಯೂಡಿ) ಎಂ.ಕೆ.ನಂಜಯ್ಯ, ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಸಾಹುಕಾರ್ ಚನ್ನಯ್ಯ ಆಡಿಟೋರಿಯಂ, ವಿದ್ಯಾವರ್ಧಕ ಕ್ಯಾಂಪಸ್, ಬೆಳಗ್ಗೆ 11.30ಕ್ಕೆ
- **ಕರ್ನಾಟಕ ಸೇನಾಪಡೆ:** ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ಅವರ ಜಯಂತಿ ಅಂಗವಾಗಿ ಇಂಜಿನಿಯರ್ಸ್ ದಿನಾಚರಣೆ, ಸರ್ ಎಂ.ವಿಶ್ವೇಶ್ವರಯ್ಯ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಸಿಹಿ ವಿತರಣೆ, ದಿವ್ಯ ಸಾನ್ನಿಧ್ಯ: ಯೋಗನರಸಿಂಹಸ್ವಾಮಿ ದೇವಸ್ಥಾನ ಸಂಸ್ಥಾಪಕ ಭಾಷ್ಯಂ ಸ್ವಾಮೀಜಿ, ಉದ್ಘಾಟನೆ ಮತ್ತು ಪುಷ್ಪಾರ್ಚನೆ: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಸಿಹಿ ವಿತರಣೆ: ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷ ಡಾ.ಬಿ.ಆರ್. ನಟರಾಜ್ ಜೋಯಿಸ್, ಸ್ಥಳ: ಅಗ್ರಹಾರ, ಬೆಳಗ್ಗೆ 11.30ಕ್ಕೆ.
- **ಶ್ರೀ ಕೃಷ್ಣ ಮಿತ್ರ ಮಂಡಳಿ ಮತ್ತು ಶ್ರೀ ಕೃಷ್ಣ ಟ್ರಸ್ಟ್:** ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಛದ್ಮವೇಷ ಸ್ಪರ್ಧೆ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಮಧ್ಯಾಹ್ನ 1ರಿಂದ.
- **ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪಿಯು ಕಾಲೇಜು, ಶ್ರೀ ಪ್ರಣಮ್ಯ ಎಜುಕೇಷನಲ್ ಟ್ರಸ್ಟ್:** ಹಿಂದಿ ದಿನಾಚರಣೆ, ಸ್ಥಳ: ಶಾರದಾ ಆಡಿಟೋರಿಯಂ, ಮಧ್ಯಾಹ್ನ 3 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಡಾ.ಸಂಜೀವ್ ಕುಲಕರ್ಣಿ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳ ದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂಶಾಸ್ತ್ರಿ, ಸದಾಶಿವಪಾಟೀಲ್, ಕೆ.ಬಿ.ಸುನೀತಾ ಆಚಾರ್ಯ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು: ಪು.ತಿ.ನರಸಿಂಹಾಚಾರ್ ರಚನೆಗಳು, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 10.00–ಕರ್ನಾಟಕ ಶಾಸ್ತ್ರೀಯ ಸಂಗೀತ–ಮಲ್ಲಾಡಿ ಸಹೋದರರ ಯುಗಳ ಹಾಡುಗಾರಿಕೆಯಲ್ಲಿ ಅಣ್ಣಮಾಚಾರ್ಯರ ಕೃತಿಗಳು, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ, ಪ್ರಸ್ತುತಿ–ಬಿ.ದಿಗ್ವಿಜಯ್, **ಮಧ್ಯಾಹ್ನ:** 12.05–ವನಿತಾ ವಿಹಾರ, 12.35–ದೇವರನಾಮ, 12.45–ನಮ್ಮ ಆರೋಗ್ಯ ವಿಶ್ವ ಲಿಂಫೋಮಾ ಜಾಗೃತಿ ದಿನದ ಸಂಬಂಧವಾಗಿ ಲಿಂಫೋಮಾ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಮೈಸೂರಿನ ಕನ್ಸಲ್ಟಂಟ್ ಸರ್ಜಿಕಲ್ ಆಂಕಾಲಜಿಸ್ಟ್ ಡಾ.ಗಿರೀಶ್.ಎಂ.ಎಸ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ–ಸಾವರಿನ್ ಗೋಲ್ಡ್ ಬಾಂಡ್ ಯೋಜನೆ ಬಗ್ಗೆ ಮಾತನಾಡುತ್ತಾರೆ ಎನ್.ವಿ.ಫಣೀಶ್, 1.20–ಭಾವಗೀತೆಗಳು–ರಜನಿ ಅನಿಲ್, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಕೆ.ಎಸ್.ಹೇರಂಬ ಹಾಗೂ ಕೆ.ಎಸ್.ಹೇಮಂತ, ಯುಗಳ ವೇಣುವಾದನ, 4.00–ಮಹಿಳಾರಂಗ, ಮಹಿಳಾರಂಗ–ನನ್ನ ಹಕ್ಕು: ನನ್ನ ಜವಾಬ್ದಾರಿ–ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ, ಭಾಗವಹಿಸುತ್ತಾರೆ–ವಕೀಲರು ಹಾಗೂ ಸಾಮಾಜಿಕ ಕಾರ್ಯಕರ್ತರಾದ ಪಿ.ಪಿ.ಬಾಬುರಾಜ್, 4.45–ಹಿಂದಿ ಪಾಠ, ಪ್ರಸ್ತುತಿ: ಡಾ.ಜಯಂತಿ ಪ್ರಸಾದ್ ನೌಟಿಯಾಲ್, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ. ಭತ್ತದ ವೈಜ್ಞಾನಿಕ ಬೇಸಾಯ ಕ್ರಮಗಳನ್ನು ಕುರಿತು ಸಂವಾದ. ಭಾಗವಹಿಸುತ್ತಾರೆ, ಮಂಡ್ಯದ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ.ವಿ.ಬಿ.ಸನತ್‌ಕುಮಾರ್, ಡಾ.ಜಿ.ಆರ್.ದಿನೇಶ್, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ, ಮೈಸೂರಿನ ದೃಷ್ಟಿ ವಿಶೇಷಚೇತನ ಸಂಗೀತ ಶಿಕ್ಷಕ ಕಿರಣ್ ಹೆಚ್.ಪಿ ಅವರೊಂ ದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ದಿಗ್ವಿಜಯ್.ಬಿ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ವೆಂಕಟೇಶಚಾರ್, ಹಾಡುಗಾರಿಕೆ, 10.00–ನಿನಾದ: ವೈಣಿಕ ವಾಗ್ಗೇಯವಾಹಿನಿ. 10.30–ಸವಿನೆನಪು.

ಮೈಸೂರು ದಸರಾ ಮಹೋತ್ಸವ-2025

ದಸರಾ ಯುವ ಸಂಭ್ರಮದಲ್ಲಿ ಕನ್ನಡದ ಕಂಪು ಹರಡಿದ ವಿದ್ಯಾರ್ಥಿಗಳು

ಅಂಬೇಡ್ಕರ್ ಕುರಿತ ನೃತ್ಯ ರೂಪಕಕ್ಕೆ ಮೊಳಗಿದ ಜೈ ಭೀಮ್ ಘೋಷಣೆ



ಎಸ್.ಡಿ.ಜಯರಾಮ್ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಮೆಡಿಕಲ್ ಸೈನ್ಸ್ ಕಾಲೇಜು ತಂಡದವರಿಂದ ನವಶಕ್ತಿ ವೈಭವ ನೃತ್ಯ ರೂಪಕ

ಮೈಸೂರು, ಸೆ.14(ವಿವಿಹೆಚ್)- ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು.... ಕರುನಾಡೇ ಕೈ ಚಾಚಿದೆ ನೋಡೇ... ಈ ಕನ್ನಡ ಮಣ್ಣನ್ನು ಮರಿಬೇಡ ಓ ಅಭಿಮಾನಿ... ನಾನು ಕನ್ನಡಿಗ, ಕನ್ನಡದ ಕಾವಲಿಗ..... ಹೀಗೆ ಕನ್ನಡದ ಕಂಪು ಬಯಲು ರಂಗಮಂದಿರವನ್ನೆಲ್ಲ ಆಕ್ರಮಿಸಿಕೊಂಡ ಪರಿಯಿದು.

ಒಂದೆಡೆ ಯುವ ಸಂಭ್ರಮವನ್ನು ಕರ್ನಾಟಕದ ಧ್ವಜವನ್ನು ಹಿಡಿದು ಕನ್ನಡದ ಹಾಡುಗಳಿಗೆ ಕುಣಿದು ಕುಪ್ಪಳಿಸಿದ ಪ್ರೇಕ್ಷಕ ಸಮೂಹ ದನಿಗೂಡಿಸಿತು.

ಯುವ ಪ್ರತಿಭೆಗಳ ಅನಾವರಣಕ್ಕೆ ಉತ್ತಮ ವೇದಿಕೆಯಾಗಿರುವ ಯುವ ಸಂಭ್ರಮದಲ್ಲಿ ಕನ್ನಡತನದೊಂದಿಗೆ, ನಾಡು-ನುಡಿ ಸ್ಥಿತಿಗತಿ, ರೈತರ ಸಮಸ್ಯೆಗಳು, ಮಹಿಳಾ ಸಬಲೀಕರಣ ಕುರಿತಾದ ವಿಷಯಗಳು ಮನ ಮುಟ್ಟುವಂತೆ ಸಾದರಪಡಿಸಲಾಯಿತು.

ಯುವ ಸಂಭ್ರಮದ 5ನೇ ದಿನವಾದ ಭಾನುವಾರ ರಾಜ್ಯದ ವಿವಿಧ ಕಾಲೇಜಿನ 57 ತಂಡಗಳ ವಿದ್ಯಾರ್ಥಿಗಳು ನರ್ತಿಸಿದ ಪರಿಯು ನೆರೆದಿದ್ದ ಯುವ ಸಮೂಹಕ್ಕೆ ರಸದೌತಣ ನೀಡಿತು. ಪೂಜಾ ಕುಣಿತ, ವೀರಗಾಸೆ, ಡೊಳ್ಳು ಕುಣಿತ, ಮನಮೋಹಕ ನೃತ್ಯಗಳಿಗೆ ಶಿಳ್ಳೆ-ಚೀರಾಟದೊಂದಿಗೆ ತಮ್ಮನ್ನ ಮರೆತು ಹೆಜ್ಜೆ ಹಾಕಿ ಹುರುದುಂಬಿಸಿದರು.

ಕೊಳ್ಳೇಗಾಲದ ಆದರ್ಶ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಕನ್ನಡ ಮತ್ತು ಸಂಸ್ಕೃತಿ ವಿಷಯದಡಿ, ಗುಂಡ್ಲುಪೇಟೆಯ ಗೌತಮ ಪದವಿಪೂರ್ವ ಕಾಲೇಜು ತಂಡದಿಂದ ಸಂಸ್ಕೃತಿಯ ವಿಷಯದಡಿ ಕನ್ನಡದ ಹಾಡುಗಳಿಗೆ ನರ್ತಿಸುವ ಮೂಲಕ ಎಲ್ಲರನ್ನು ಕುಣಿಯುವಂತೆ ಮಾಡಿದರು.

ಇತ್ತ ಮಂಡ್ಯ ಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜು ತಂಡ ಆಯೋಧ್ಯೆ ರಾಮನನ್ನು ಮೈಸೂರಿಗೆ ಕರೆತಂದರೆ, ಮಂಡ್ಯ ಅಶೋಕ ನಗರದ ಎಸ್.ಡಿ.ಜಯರಾಮ್ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಮೆಡಿಕಲ್ ಸೈನ್ಸ್ ಕಾಲೇಜು ತಂಡದವರಿಂದ ನವಶಕ್ತಿ ವೈಭವ ಕಂಡುಬಂದಿತು. ಶ್ರೀ ದಕ್ಷ ಅಕಾಡೆಮಿ ಸಂಜೆ ಪಿಯು ಕಾಲೇಜು ವಿದ್ಯಾರ್ಥಿಗಳು ಭಕ್ತಪ್ರಹ್ಲಾದ ನೃತ್ಯ ರೂಪಕ ಪ್ರದರ್ಶಿಸಿ ಎಲ್ಲರನ್ನೂ ಭಕ್ತಿ ಪರಾಕಾಷ್ಠೆಯಲ್ಲಿ ಮುಳುಗಿಸಿದರು.

ಮೊಳಗಿದ ಜೈ ಭೀಮ ಘೋಷವಾಕ್ಯ: ಮಂಡ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜು ತಂಡದಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಕುರಿತಾದ ನೃತ್ಯ ರೂಪಕ ಪ್ರದರ್ಶಿಸಿದರು. ಅಸಾಮಾನ್ಯ ವ್ಯಕ್ತಿ ಅಂಬೇಡ್ಕರ್ ಅವರು ಸಮಾನತೆ ಮತ್ತು ಶಿಕ್ಷಣ, ನೊಂದವರಿಗೆ ಧನಿಯಾಗಿ, ಪ್ರೀತಿ ಕರುಣೆಯ ಪಾಠ ಮಾಡಿ, ಜಾತಿ ತಿರಸ್ಕಾರ ಮಾಡಿ ಎಲ್ಲರೂ ಮನುಷ್ಯರಂತೆ ಬದುಕ ಬೇಕು ಎಂದು ನೃತ್ಯದೊಂದಿಗೆ ಸಾದರಪಡಿಸಿದರು. ನೆರೆದಿದ್ದ ಪ್ರೇಕ್ಷಕ ಸಮೂಹ ಜೈ ಭೀಮ್ ಘೋಷಣೆ ಕೂಗುತ್ತಾ ಹುರಿದುಂಬಿಸಿದರು.

ಪರಿಸರ ಸಂರಕ್ಷಣೆ: ಉಡುಪಿ ಜಿಲ್ಲೆಯ ಕುಂದಾಪುರದ ಸುಜ್ಞಾನ್ ಪ್ರೀ ಯೂನಿವರ್ಸಿಟಿ ಕಾಲೇಜು ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆ ವಿಷಯಡಿ ನೃತ್ಯದ ಮೂಲಕ ಸುಂದರವಾದ ಕಥೆಯನ್ನು ಹೇಳಿದರು. ಮನುಷ್ಯನ ಆಸೆಗೆ ಕಾಡಿನ ಸಂಪತ್ತು ನಾಶವಾಗುತ್ತಿದ್ದು, ಅದರೊಂದಿಗೆ ನಮ್ಮ ಮೂಲ ಸಂಸ್ಕೃತಿಯೂ ನಾಶವಾಗುತ್ತಿದೆ. ಪರಿಸರ ಸಂರಕ್ಷಣೆ ಜೊತೆಗೆ ಸ್ವಚ್ಚತೆಗೆ ಹೆಚ್ಚಿನ ಮಹತ್ವ ನೀಡಬೇಕು ಎಂದು ಒತ್ತಿ ಹೇಳಿದರು.

ಮಲ್ಲಕಂಬ ಕಮಾಲ್: ಭಾರತೀನಗರದ ಭಾರತೀ ಕಾಲೇಜು (ಸ್ನಾತಕ) ಕಾಲೇಜು ವಿದ್ಯಾರ್ಥಿಗಳು ವೇದಿಕೆಯಂಗಳದಲ್ಲಿ ಮಲ್ಲಕಂಬ ಪ್ರದರ್ಶನ ಮಾಡಿದರು. ವಿವಿಧ ಬಗೆಯ ಭಂಗಿಗಳ ಮೂಲಕ ನೆರೆದಿದ್ದ ಅಪಾರ ಸಮೂಹವನ್ನು ಪುಳಕಿತಗೊಳಿಸಿದರು. ಹಾಡಿಗೆ ತಕ್ಕಂತೆ ಮಲ್ಲಕಂಬದ ಸುತ್ತಾ ಪಟುಗಳು ವಿನೂತನವಾಗಿ ವಿವಿಧ ಭಂಗಿಗಳನ್ನು ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.



ಆಯೋಧ್ಯೆ ರಾಮನನ್ನು ಮೈಸೂರಿಗೆ ಕರೆತಂದ ಮಂಡ್ಯ ಭಾರತಿ ಸಂಯುಕ್ತ ಪದವಿ ಪೂರ್ವ ಕಾಲೇಜು ತಂಡ



ನೃತ್ಯದ ಮೂಲಕ ಮಲ್ಲಕಂಬ ಪ್ರದರ್ಶನ ಅನಾವರಣ

ಜನಸಂದಣಿ ನಿಯಂತ್ರಣ ಮಾಡಲು ಲಾಠಿಚಾರ್ಜ್ ಮಾಡಿದ ಪೋಲೀಸರು

ಯುವ ಸಂಭ್ರಮ ಕಾರ್ಯಕ್ರಮದ 5ನೇ ದಿನವಾದ ಭಾನುವಾರ ಜನಸಂದಣಿ ಹೆಚ್ಚಾಗಿತ್ತು. ಭಾನುವಾರ ರಜಾ ದಿನವಾಗಿದ್ದು, ನೃತ್ಯ, ಗಾಯನ ನೋಡಲು ಜಿಲ್ಲೆ, ಹೊರ ಜಿಲ್ಲೆಯಿಂದಲೂ ಅಪಾರ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಮಕ್ಕಳು, ಹಿರಿಯರು ಆಗಮಿಸಿದ್ದರು. ಸಂಜೆಗಾಗಲೇ ಗಂಗೋತ್ರಿಯ ಬಯಲು ರಂಗಮಂದಿರ ತುಂಬಿತ್ತು. ಆಗಿದ್ದರೂ ಕಾರ್ಯಕ್ರಮ ವೀಕ್ಷಣೆಗೆ ಆಗಮಿಸುವವರ ಸಂಖ್ಯೆ ಮಾತ್ರ ಕಡಿಮೆಯಾಗಲಿಲ್ಲ.

ಒಳಗೆ ಜಾಗವಿಲ್ಲ ಎಂದು ಪೊಲೀಸರು ಎಷ್ಟೇ ಹೇಳಿದರೂ ಕೇಳದ ಯುವ ಸಮೂಹ ತಮಗೂ ಕಾರ್ಯಕ್ರಮ ವೀಕ್ಷಣೆಗೆ ಅವಕಾಶ ಮಾಡಿಕೊಡಬೇಕು ಎಂದು ಒಳನುಗ್ಗಲು ಪ್ರಯತ್ನಿಸಿದರು. ಮಿತಿ ಮೀರಿದ ದಟ್ಟಣೆಯನ್ನು ತಡೆಯಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಪೊಲೀಸರ ಹೊಡೆತದಿಂದ ತಪ್ಪಿಸಿಕೊಳ್ಳಲು ಯುವಕರು ದಿಕ್ಕಾಪಾಲಾಗಿ ಓಡಿದರು. ಸುತ್ತಲೂ ಬಿಗಿಭದ್ರತೆ ಒದಗಿಸಿಯೂ ಕಾಂಪೌಂಡ್, ಬೇಲಿ ಹಾರುವುದು ಸಾಮಾನ್ಯ ವಾಗಿತ್ತು ಇದನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಡುತ್ತಿದ್ದ ದೃಶ್ಯ ಕಂಡುಬಂದಿತು.

ಪಾರ್ಕಿಂಗ್ ಸಮಸ್ಯೆ: ಇನ್ನು ಕಾರ್ಯಕ್ರಮ ವೀಕ್ಷಣೆಗೆ ಬರುವವರಿಗೆ ಗಂಗೋತ್ರಿ ಒಳಾಂಗಣದಲ್ಲಿ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿಯೂ ಸ್ಥಳಾವಕಾಶ ಸಾಲದೇ ಗಂಗೋತ್ರಿ-ಗದ್ದಿಗೆ ರಸ್ತೆಯಲ್ಲಿ ಸುಮಾರು ಅರ್ಧ ಕಿ.ಮೀ ಗೂ ಹೆಚ್ಚು ದೂರದವರೆಗೆ ಫುಟ್ಪಾತ್‌ನ ಎರಡೂ ಬದಿಯಲ್ಲಿ ವಾಹನಗಳನ್ನು ನಿಲ್ಲಿಸಲಾಗಿತ್ತು. ಇದರಿಂದ ಟ್ರಾಫಿಕ್ ಸಮಸ್ಯೆಯೂ ಉಲ್ಬಣಗೊಂಡಿತ್ತು.

ದಸರಾ ವೇಳೆ ರಾಜವಂಶಸ್ಥರ ಧಾರ್ಮಿಕ ಕೈಂಕರ್ಯ ಹಿನ್ನೆಲೆ

ದರ್ಬಾರ್ ಹಾಲ್ ಸೇರಿದಂತೆ ಅರಮನೆಯ ಒಳಾಂಗಣದಲ್ಲಿ ಸ್ವಚ್ಛತೆ, ಸಿದ್ಧತಾ ಕಾರ್ಯ



ಮೈಸೂರು ಅರಮನೆಯ ಖಾಸಗಿ ದರ್ಬಾರ್ ಹಾಲ್‌ನಲ್ಲಿ ರಾಯಲ್ ಚಾಂಡಿಯರ್ ದೀಪಗಳ ಸ್ವಚ್ಛತೆ ಕಾರ್ಯವನ್ನು ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಭಾನುವಾರ ಪರಿಶೀಲಿಸಿದರು.

ಮೈಸೂರು,ಸೆ.14(ಪಿಎಂ)- ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಯುಕ್ತ ಮೈಸೂರು ರಾಜವಂಶಸ್ಥರು ನಡೆಸುವ ಧಾರ್ಮಿಕ ಕೈಂಕರ್ಯಗಳ ಹಿನ್ನೆಲೆಯಲ್ಲಿ ದರ್ಬಾರ್ ಹಾಲ್ ಸೇರಿದಂತೆ ಅರಮನೆಯ ಒಳಾಗಂಣದಲ್ಲಿ ಸ್ವಚ್ಛತೆ ಹಾಗೂ ಸಿದ್ಧತಾ ಭರದಿಂದ ಸಾಗಿದೆ.

ಪ್ರತಿವರ್ಷದಂತೆ ಈ ಬಾರಿಯೂ ಮೈಸೂರು ರಾಜವಂಶಸ್ಥರು ಅರಮನೆಯಲ್ಲಿ ದಸರಾ ಪ್ರಯುಕ್ತ ಧಾರ್ಮಿಕ ಪೂಜಾ ಕೈಂಕರ್ಯಗಳನ್ನು ನಡೆಸಲಿದ್ದು, ಹೀಗಾಗಿ ಅರಮನೆ ಮಂಡಳಿ ವತಿಯಿಂದ ಸ್ವಚ್ಛತೆ ಹಾಗೂ ಸಿದ್ಧತಾ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ.

ಈ ಬಾರಿಯ ದಸರಾ ಮಹೋತ್ಸವ ಸೆ.22ರಂದು ಉದ್ಘಾಟನೆಗೊಳ್ಳಲಿದ್ದು, ಅಂದು ಪ್ರತಿವರ್ಷದಂತೆ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಖಾಸಗಿ ದರ್ಬಾರ್ ಹಾಲ್‌ನಲ್ಲಿ ಸಿಂಹಾಸನದಲ್ಲಿ ಆಸೀನರಾಗಿ ರಾಜಗಾಂಭೀರ್ಯದೊಂದಿಗೆ ಖಾಸಗಿ ದರ್ಬಾರ್ ನಡೆಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಸೆ.16 ರಂದು ಸದರಿ ಹಾಲ್‌ನಲ್ಲಿ ಸಿಂಹಾಸನ ಜೋಡಣಾ ಕಾರ್ಯ ನಡೆಯಲಿದೆ.

ಸ್ಟ್ರಾಂಗ್ ರೂಮ್‌ನಲ್ಲಿ ಇಟ್ಟಿರುವ ಸಿಂಹಾಸನದ ಬಿಡಿ ಭಾಗಗಳನ್ನು ತಂದು ಅಂದು ಜೋಡಣಾ ಕಾರ್ಯ ಕೈಗೆತ್ತಿಗೊಳ್ಳಲಾಗುತ್ತದೆ. ನವರಾತ್ರಿಗೆ ದಿನಗಣನೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಅರಮನೆಯ ಖಾಸಗಿ ದರ್ಬಾರ್ ಹಾಲ್ ಮತ್ತು ಪಬ್ಲಿಕ್ ದರ್ಬಾರ್ ಹಾಲ್‌ನಲ್ಲಿ ಸ್ವಚ್ಛತೆ ಕಾರ್ಯ ನಡೆಸಲಾಗುತ್ತಿದೆ. ಇದಲ್ಲದೆ, ಕಲ್ಯಾಣ ಮಂಟಪ, ಕಲ್ಯಾಣಿ ತೊಟ್ಟಿ, ಸವಾರಿ ತೊಟ್ಟಿ ಸೇರಿದಂತೆ ಅರಮನೆಯಲ್ಲಿ ಸ್ವಚ್ಛತೆ ಮತ್ತು ಸಿದ್ಧತೆ ನಡೆಸಲಾಗುತ್ತಿದೆ. ಕಳೆದ ಎರಡು -ಮೂರು ದಿನಗಳಿಂದ ಅರಮನೆ ಒಳಾಂಗಣದ ರಾಯಲ್ ಚಾಂಡಿಯರ್ ದೀಪಗಳ ಸ್ವಚ್ಛತೆ ಹಾಗೂ ದುರಸ್ತಿ ಕಾರ್ಯ ಚುರುಕಿನಿಂದ ಸಾಗಿದೆ. ಒಟ್ಟಾರೆ ಖಾಸಗಿ ದರ್ಬಾರ್‌ಗೆ ಅಂತಿಮ ಹಂತದ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ

ದಸರಾ ನಾಡಕುಸ್ತಿಯಲ್ಲಿ 132 ಜೋಡಿ ಸೆಣಸಾಟ



ದಸರಾ ಕುಸ್ತಿ ಉಪಸಮಿತಿ ವತಿಯಿಂದ ದಸರಾ ನಾಡಕುಸ್ತಿ ಪಂದ್ಯಾವಳಿಗೆ ಪೈಲ್ವಾನರ ಜೋಡಿ ಕಟ್ಟುವ ಕಾರ್ಯಕ್ರಮ ಭಾನುವಾರ ನಡೆಯಿತು.

ಮೈಸೂರು, ಸೆ.14(ಎಂಕೆ)- ಮೈಸೂರು ದಸರಾ ಮಹೋತ್ಸವ-2025ರ ಪ್ರಮುಖ ಆಕರ್ಷಣೆಯಾದ ಪಾರಂಪರಿಕ ದಸರಾ ನಾಡಕುಸ್ತಿ ಪಂದ್ಯಾವಳಿಯಲ್ಲಿ 132 ಜೋಡಿ ಪೈಲ್ವಾನರು ಗೆಲುವಿಗಾಗಿ ಸೆಣಸಲಿದ್ದಾರೆ.

ನಗರದ ಚಾಮುಂಡಿವಿಹಾರ ಕ್ರೀಡಾಂಗಣದ ಒಳಾಂಗಣದಲ್ಲಿ ಭಾನುವಾರ ದಸರಾ ಕುಸ್ತಿ ಉಪಸಮಿತಿ ವತಿಯಿಂದ ಆಯೋಜಿಸಿದ್ದ ಪೈಲ್ವಾನರ ಜೋಡಿ ಕಟ್ಟುವ ಕಾರ್ಯಕ್ರಮದಲ್ಲಿ ನಾಡಕುಸ್ತಿ ಪಂದ್ಯಗಳಿಗಾಗಿ 132 ಜೋಡಿಗಳನ್ನು ಹಿರಿಯ ಪೈಲ್ವಾನರು, ತರಬೇತುದಾರರ ಸಮಕ್ಷಮದಲ್ಲಿ ಕಟ್ಟಲಾಯಿತು.

ಹಾಗೆಯೇ ಸೆ.24 ರಿಂದ ನಡೆಯುವ ಪಾಯಿಂಟ್ ಕುಸ್ತಿ, ಸೆ.27 ರಂದು ನಡೆಯುವ ಪಂಜಕುಸ್ತಿ ಪಂದ್ಯಾವಳಿಯ ಪೋಸ್ಟರ್‌ಗಳು ಹಾಗೂ ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕುಮಾರ್, ದಸರಾ ಕಿಶೋರ ಮತ್ತು ಕಿಶೋರಿ ಟೈಟಲ್ ಪಂದ್ಯಗಳ ಮಾಹಿತಿಯುಳ್ಳ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು.

ಮರದ ಗದೆ ಎತ್ತುವ ಮೂಲಕ ಜೋಡಿ ಕಟ್ಟುವ ಕಾರ್ಯಕ್ರಮ ಉದ್ಘಾಟಿಸಿದ ದಸರಾ ಕುಸ್ತಿ ಉಪಸಮಿತಿ ಉಪ ವಿಶೇಷಾಧಿಕಾರಿ ಹಾಗೂ ಎಎಸ್‌ಪಿ ಎಲ್.ನಾಗೇಶ್ ಮಾತನಾಡಿ, ದಸರಾ ನಾಡಕುಸ್ತಿ ಪಾಯಿಂಟ್ ಹಾಗೂ ಟೈಟಲ್ ಕುಸ್ತಿ ಪಂದ್ಯಗಳನ್ನು ಪಾರದರ್ಶಕವಾಗಿ ನಡೆಸುವ ದೃಷ್ಟಿಯಿಂದ ಹಾಗೂ ನಾಡಕುಸ್ತಿಯ ಪರಂಪರೆಯಂತೆ ಪೈಲ್ವಾನರ ಜೋಡಿ ಕಟ್ಟಲಾಗಿದೆ. ಪೈಲ್ವಾನರಿಗೆ ಯಾವುದೇ ಸಮಸ್ಯೆಗಳು ಎದುರಾದರೂ ಕೂಡಲೇ ಮಾಹಿತಿ ಬಗೆಹರಿಸಿಕೊಳ್ಳುವುದಲ್ಲದೇ ಉತ್ಸಾಹದಿಂದ ಕುಸ್ತಿ ಪಂದ್ಯಗಳಲ್ಲಿ ಭಾಗವಹಿಸುವಂತೆ ತಿಳಿಸಿದರು.

ದಸರಾ ಕುಸ್ತಿ ಉಪಸಮಿತಿ ಕಾರ್ಯದರ್ಶಿ ಹಾಗೂ ಡಿವೈಎಸ್‌ಪಿ ಬಿ.ಎಸ್.ರಘು ಮಾತನಾಡಿ, ಸೆ.22 ರಿಂದ 28ರವರೆಗೆ ನಡೆಯುವ ದಸರಾ ನಾಡಕುಸ್ತಿ ಪಂದ್ಯಾವಳಿಗೆ ಪೈಲ್ವಾನ ಇಚ್ಛೆಯಂತೆ ಜೋಡಿ ಕಟ್ಟಲಾಗಿದ್ದು, ಪಾಯಿಂಟ್ ಮತ್ತು ಪಂಜ ಕುಸ್ತಿಗಳಿಗೆ ಪೈಲ್ವಾನರ ತೂಕ ಪರಿಗಣಿಸಲಾಗುವುದು. ನಾಡಕುಸ್ತಿ ಸೇರಿದಂತೆ ಎಲ್ಲಾ ಕುಸ್ತಿ ಪಂದ್ಯಗಳು ವಸ್ತುಪ್ರದರ್ಶನ ಆವರಣದಲ್ಲಿರುವ ಡಿ.ದೇವರಾಜ ಅರಸು ವಿವಿದ್ದೋದ್ದೇಶ ಕ್ರೀಡಾಂಗಣದ ಕುಸ್ತಿ ಅಖಾಡದಲ್ಲಿ ನಡೆಯಲಿದ್ದು, ಸೆ.23 ರಂದು ಪಾಯಿಂಟ್ ಕುಸ್ತಿಗೆ ಪೈಲ್ವಾನರ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಹಾಗೆಯೇ ಸೆ27 ರಂದು ಬೆಳಗ್ಗೆ 8 ಗಂಟೆಗೆ ಪಂಜ ಕುಸ್ತಿ ಪಂದ್ಯಾವಳಿಗೆ ಪಟುಗಳನ್ನು ಆಯ್ಕೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು. ದಸರಾ ಕುಸ್ತಿ ಉಪಸಮಿತಿ ಕಾರ್ಯಾಧ್ಯಕ್ಷ ಹೆಚ್.ಸಿ.ನಾಗೇಂದ್ರಪ್ಪ ಮೈಸೂರಿನ ಹಿರಿಯ ಕುಸ್ತಿ ಪೈಲ್ವಾನರು, ತರಬೇತುದಾರರು ಉಪಸ್ಥಿತರಿದ್ದರು.

ದಸರಾ ಆನೆಗಳ ಮಾವುತರು, ಕಾವಾಡಿಗಳಿಗೆ ಜಿಲ್ಲಾಡಳಿತದಿಂದ ಉಪಹಾರದ ಆತಿಥ್ಯ

ರುಚಿ, ಶುಚಿಯಾದ ಉಪಹಾರ ಸೇವಿಸಿ ಸಂತಸ ಪಟ್ಟ ಹಾಡಿ ಜನರು



ಮೈಸೂರು ಅರಮನೆ ಆವರಣದ ದಸರಾ ಆನೆ ಶಿಬಿರದಲ್ಲಿ ಭಾನುವಾರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಆನೆಗಳ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬಸ್ಥರಿಗೆ ರುಚಿಯಾದ ಉಪಹಾರ ಬಡಿಸಿದರು.

ಮೈಸೂರು, ಸೆ.14(ಬಿಎಲ್‌ಯು)- ವಿಶ್ವ ಪ್ರಸಿದ್ಧ ಮೈಸೂರು ದಸರಾ ಮಹೋತ್ಸವದ ಜಂಬೂ ಸವಾರಿ ಮೆರವಣಿಗೆಯಲ್ಲಿ ಗಜಪಡೆಯನ್ನು ಮುನ್ನಡೆಸುವ ಆನೆಗಳ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬಸ್ಥರಿಗೆ ಇಂದು ರುಚಿಯಾದ ಉಪಹಾರವನ್ನು ಉಣಬಡಿಸಲಾಯಿತು.

ಮೈಸೂರು ಅರಮನೆಯ ದಸರಾ ಆನೆ ಶಿಬಿರದಲ್ಲಿ ಇಂದು ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬಸ್ಥರಿಗೆ ಸ್ವತಃ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಉಪಹಾರ ಬಡಿಸಿದರು.

ಮೈಸೂರು ದಸರಾ ಮಹೋತ್ಸವದಲ್ಲಿ ಆನೆಗಳ ಮಾವುತರು ಹಾಗೂ ಕಾವಾಡಿಗಳ ಕರ್ತವ್ಯ ನಿರ್ವಹಣೆ ಪ್ರಮುಖ ಪಾತ್ರ ವಹಿಸುತ್ತದೆ. ಕಾಡಿನ ಹಾಡಿಗಳಲ್ಲಿ ವಾಸ ಮಾಡುವ ಮಾವುತರು ಹಾಗೂ ಕಾವಾಡಿಗಳು ಕುಟುಂಬ ಸಮೇತ ಸುಮಾರು ಎರಡೂವರೆ ತಿಂಗಳು ಮೈಸೂರು ಅರಮನೆಯ ಆನೆ ಶಿಬಿರದಲ್ಲಿ ವಾಸ್ತವ್ಯ ಹೂಡುತ್ತಾರೆ. ಈ ಸಂದರ್ಭದಲ್ಲಿ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬಸ್ಥರನ್ನು ಸಂತೋಷಪಡಿಸುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಪ್ರತಿ ವರ್ಷ ಉಪಾಹರವನ್ನು ಆಯೋಜಿಸುತ್ತದೆ.

ಅದರಂತೆ ಅರಮನೆಯಲ್ಲಿ ಇಂದು ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬದವರಿಗೆ ರುಚಿ, ಶುಚಿಯಾದ ಉಪಹಾರವನ್ನು ಉಣಬಡಿಸಲಾಯಿತು. ಹೋಳಿಗೆ ತುಪ್ಪ ಮಸಾಲೆ ಇಡ್ಲಿ, ಸಾಂಬಾರು, ಚಟ್ನಿ, ವಡೆ, ದೋಸೆ, ಸಾಗು, ಪೊಂಗಲ್-ಹುಳಿಗೊಜ್ಜು, ಅವರೆಕಾಳು ಉಪ್ಪಿಟ್ಟು ಬಡಿಸಲಾಯಿತು. ರುಚಿಯಾದ ಉಪಹಾರ ಸೇವಿಸಿದ ಮಾವುತರು, ಕಾವಾಡಿಗಳು ಹಾಗೂ ಅವರ ಕುಟುಂಬಸ್ಥರು ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್‌ಸೇಠ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಸೇರಿದಂತೆ ಹಲವರು ಮಾವುತರು ಹಾಗೂ ಕಾವಾಡಿಗಳ ಜೊತೆಗೂಡಿ ಉಪಹಾರ ಸೇವಿಸಿದರು.

ಮಾವುತರು, ಕಾವಾಡಿಗಳ ಮಕ್ಕಳಿಗೆ ಟೆಂಟ್ ಶಾಲೆಗೆ ಚಾಲನೆ



ಮೈಸೂರು ಅರಮನೆ ಆವರಣದಲ್ಲಿ ದಸರಾ ಆನೆಗಳ ಮಾವುತರು ಹಾಗೂ ಕಾವಾಡಿಗಳ ಮಕ್ಕಳಿಗೆ ತೆರೆದಿರುವ ಟೆಂಟ್ ಶಾಲೆಗೆ ಭಾನುವಾರ ಚಾಲನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ ಹಾಗೂ ತನ್ವೀರ ಸೇಠ್ ಅವರು ಮಕ್ಕಳ ನೃತ್ಯ ವೀಕ್ಷಿಸಿದರು.

ಮೈಸೂರು, ಸೆ.14(ಬಿಎಲ್‌ಯು)- ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಆನೆಗಳ ಮಾವುತರು ಹಾಗೂ ಕಾವಾಡಿಗಳ ಮಕ್ಕಳಿಗೆ ಮೈಸೂರು ಅರಮನೆ ಆವರಣದಲ್ಲಿ ತೆರೆದಿರುವ ಟೆಂಟ್ ಶಾಲೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಇಂದು ಉದ್ಘಾಟಿಸಿದರು.

ಹಾಡಿಗಳಲ್ಲಿ ವಾಸ ಮಾಡುವ ಮಾವುತರು ಮತ್ತು ಕಾವಾಡಿಗಳು ದಸರಾದಲ್ಲಿ ಪಾಲ್ಗೊಳ್ಳಲು ಕುಟುಂಬ ಸಮೇತ ಮೈಸೂರಿಗೆ ಬರುತ್ತಾರೆ. ಸುಮಾರು ಎರಡೂವರೆ ತಿಂಗಳು ಹಾಡಿ ಬಿಟ್ಟು ಮೈಸೂರಿಗೆ ಬಂದ ಸಂದರ್ಭದಲ್ಲಿ ಮಾವುತರು ಹಾಗೂ ಕಾವಾಡಿಗಳ ಮಕ್ಕಳಿಗೆ ಶಾಲಾ ಶಿಕ್ಷಣ ದೊರೆಯುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದೆಂದು ಅರಮನೆಯ ಆನೆ ಶಿಬಿರದಲ್ಲಿ ತಾತ್ಕಾಲಿಕ ಟೆಂಟ್ ಶಾಲೆ ತೆರೆಯಲಾಗುತ್ತದೆ.

ಅದರಂತೆ ಈ ವರ್ಷ ಕೂಡ ಟೆಂಟ್ ಶಾಲೆ ತೆರೆದಿದ್ದು, ಡಾ.ಮಹದೇವಪ್ಪ ಅವರು ಟೆಂಟ್ ಶಾಲೆ ಶಿಕ್ಷಣಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಕ್ಕಳು ಜೋಗಮ್ಮ ಜಂಗಮ ಸೇರಿದಂತೆ ಇತರೆ ಗಿರಿಜನರ ಹಾಡು ಹಾಡುತ್ತಾ ನೃತ್ಯ ಮಾಡಿ ರಂಜಿಸಿದರು. ಡಾ.ಮಹದೇವಪ್ಪ ಸೇರಿದಂತೆ ಹಲವು ಅಧಿಕಾರಿಗಳು ಗಿರಿಜನರ ನೃತ್ಯ ವೀಕ್ಷಿಸಿ ಮಕ್ಕಳನ್ನು ಪ್ರಶಂಸಿದರು.

ನಕ್ಕರೆ ಅದೇ ಸ್ವರ್ಗ

ರೋಗಿ : ಡಾಕ್ಟ್ರೇ, ಒಡೊಂದು ಸಲ ನಾನೇ ದೇವರು ಅಂತ ಅನ್ನೋಕೆ ಶುರುವಾಗುತ್ತೆ

ಡಾಕ್ಟರ್ : ಈ ಸಮಸ್ಯೆ ಎಷ್ಟು ದಿನದಿಂದ ಇದೆ?

ರೋಗಿ : ನಾನು ಈ ಜಗತ್ತನ್ನು ಸೃಷ್ಟಿಸಿದಂದಿನಿಂದ...!

ಮೈಸೂರು ಮಿತ್ರ

ಸೋಮವಾರ, 15 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.


ಅಮೃತ ವಾಹಿನಿ......

'ನಿಮಗೆ ಶಾಂತಿ ಬೇಕಿದ್ದರೆ ಕಡಿಮೆ ಮಾತಾಡಿ, ವಿವೇಕ ಬೇಕು ಅಂತ ಅನಿಸಿದರೆ ಹೆಚ್ಚು ಕೇಳಿ, ಜಗಳವೇ ಬೇಡ ಅಂತ ನಿರ್ಧರಿಸಿದರೆ ಮೌನ ವಹಿಸಿ, ನೆಮ್ಮದಿಯಾಗಿರಬೇಕೆಂದು ತೀರ್ಮಾನಿಸಿದರೆ ಯಾರಿಂದಲೂ ಏನನ್ನೂ ನಿರೀಕ್ಷಿಸಬೇಡಿ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ.

ನಿಮ್ಮ ಪತ್ರಗಳು

ಸಿಂಹದ ಮುಡಿಗೇರಿದ ಕರ್ನಾಟಕ ರತ್ನ



ಮಾನ್ಯರೆ,

ಕೊನೆಗೂ ಅಭಿಮಾನಿಗಳ ಮನವಿ ಸರ್ಕಾರಕ್ಕೆ ತಲುಪಿದಂತಾಗಿದೆ. ಸಾಹಸಸಿಂಹ, ಅಭಿನಯ ಭಾರ್ಗವ, ಸರಳ ಸಹೃದಯಿ ಡಾ.ವಿಷ್ಣುವರ್ಧನ್ ಅವರು ನಮ್ಮನ್ನು ಅಗಲಿ ಹಲವು ವರ್ಷಗಳು ಕಳೆದರೂ ಅವರ ನೆನಪು ಮಾತ್ರ ಕೋಟ್ಯಾಂತರ ಕನ್ನಡಿಗರ ಹೃದಯದಲ್ಲಿಂದು ಅಜರಾಮರವಾಗಿದೆ. ಅವರ ನಟನೆಯನ್ನು ಮೆಚ್ಚದ ವ್ಯಕ್ತಿಗಳಿಲ್ಲ ಎಂದರೆ ತಪ್ಪಾಗಲಾರದು.

ಆಡು ಮುಟ್ಟದ ಸೊಪ್ಪಿಲ್ಲ, ವಿಷ್ಣು ಅವರು ಅಭಿನಯಿಸದ ಪಾತ್ರವಿಲ್ಲ. ಅವರು ಚಿತ್ರಮಂದಿರಗಳಲ್ಲಿ ಹಾಗೂ ದೂರದರ್ಶನದ ಪರದೆಯ ಮೇಲೆ ಕಂಡರೆ ಸಾಕು ಒಂದು ರೀತಿಯ ಹುರುಪು, ಅಭಿಮಾನ, ಅಕ್ಕರೆ ನಮ್ಮಲ್ಲಿ ಮನೆಮಾಡುತ್ತದೆ.

ಇಂತಹ ನಟನಿಗೆ ಪುರಸ್ಕಾರಗಳ ಕಪ್ಪು ಛಾಯೆ ಆವರಿಸಿತ್ತು. ಎಷ್ಟೇ ಅದ್ಭುತವಾಗಿ ನಟಿಸಿದರೂ ಪುರಸ್ಕಾರಗಳು ಅವರ ಪಾಲಿಗೆ ದೊರಕಲೇ ಇಲ್ಲಾ ಎಂಬ ಕೊರಗು ಕನ್ನಡಿಗರಲ್ಲಿ ಯಾವಾಗಲೂ ಮನವಿ ಮಾಡಿತ್ತು. ಮಲತಾಯಿ ಧೋರಣೆ ಏಕೆ? ಈ ನಟನ ಮೇಲೆ ಎಂದೂ, ಎಷ್ಟೋ ಕೋಟ್ಯಾಂತರ ಅಭಿಮಾನಿಗಳು ಮರುಗಿದರು. ಅವರ ಹಸನ್ಮುಖ ಎಲ್ಲಾ ಅಭಿಮಾನಿಗಳನ್ನು ಆಯಸ್ಕಾಂತದಂತೆ ಸೆಳೆಯುತ್ತಿತ್ತು. ಇವರಿಗೆ ಮರಣೋತ್ತರ ಪ್ರಶಸ್ತಿಯಾದರು ಕೊಡಬಾರದೇ ಎಂದು ಅಭಿಮಾನಿಗಳು ತಮ್ಮ ತಮ್ಮಲ್ಲಿ ಚರ್ಚಿಸಿದರು.

ಸಂಘಟನೆಗಳು ಇದಕ್ಕೆ ಹಣತೆ ಹಚ್ಚಿತ್ತು. ಅಷ್ಟೇ ಅಲ್ಲದೆ ಹಲವು ಸಿನಿಮಾ ತಾರೆಯರು ಕೈಜೋಡಿಸಿ ನಟನಿಗೆ ಪುರಸ್ಕಾರ ಕೊಡಿಸುವ ಪಣತೊಟ್ಟರು. ಇದರ ಫಲವಾಗಿ ಮರಣೋತ್ತರ ಕರ್ನಾಟಕ ರತ್ನ ಪುರಸ್ಕಾರ ದಾದಾ ಅವರ ಮುಡಿಗೇರಿತು. ಡಾ.ವಿಷ್ಣುವರ್ಧನ್ ಅವರಿಗೆ ಸಂದಿರುವ ಈ ಪುರಸ್ಕಾರ ನಮ್ಮ ಮನೆಯ ಸದಸ್ಯರಲ್ಲಿ ಒಬ್ಬರಿಗೆ ಬಂದಷ್ಟೇ ಸಂತಸ ತಂದಿದೆ. ಎಂದು ಎಲ್ಲಾ ಅಭಿಮಾನಿಗಳು ಬಹಳ ಸಂತಸದಿಂದ ಸಿಹಿ ಹಂಚಿ ಸಂಭ್ರಮಿಸುತ್ತಿದ್ದಾರೆ. ಇನ್ನಷ್ಟು ಪುರಸ್ಕಾರಗಳು ವಿಷ್ಣುವರ್ಧನ್‌ರವರನ್ನು ಹರಸಿ ಬರಲಿ ಎಂದು ನಾವೆಲ್ಲರೂ ಪ್ರಾರ್ಥಿಸೋಣ....! **–ಅನಿಲ್ ರಾಜ, ಸಹ ಶಿಕ್ಷಕರು, ಮೈಸೂರು**

ರಾಜ್ಯ ಸರ್ಕಾರಕ್ಕೆ ಅಭಿನಂದನೆಗಳು

ಮಾನ್ಯರೆ,

ಕನ್ನಡ ಚಿತ್ರರಂಗ ಕಂಡ ಅತ್ಯಂತ ಪ್ರತಿಭಾವಂತ ನಟ ಡಾ.ವಿಷ್ಣುವರ್ಧನ್ ಹಾಗೂ ಬಿ.ಸರೋಜಾದೇವಿ ಅವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ನೀಡಿದ ಕರ್ನಾಟಕ ಸರ್ಕಾರಕ್ಕೆ ಅಭಿನಂದನೆಗಳು.

ಬಹಳ ಹಿಂದೆಯೇ ಬರಬೇಕಿದ್ದ ಈ ಪ್ರಶಸ್ತಿ ಇಂದಾದರೂ ಬಂದಿತ್ತಲ್ಲಾ ಎಂಬ ಸಮಾಧಾನ ಕೇವಲ ವಿಷ್ಣುವರ್ಧನ್ ಅಭಿಮಾನಿಗಳು ಅಷ್ಟೇ ಅಲ್ಲದೆ ಕನ್ನಡ ಚಿತ್ರರಂಗದ ಎಲ್ಲಾ ಅಭಿಮಾನಿಗಳಿಗೆ ಅನಿಸಿದೆ. ಕನ್ನಡ ಸಿನಿಮಾ ರಂಗದಲ್ಲಿ ಡಾ.ರಾಜಕುಮಾರ್ ನಂತರ ಕನ್ನಡ ಚಿತ್ರರಂಗ ಕಂಡ ಅತ್ಯಂತ ಯಶಸ್ವಿ ನಟ ವಿಷ್ಣುವರ್ಧನ್.. ಹಾಗೆಯೇ ಅಷ್ಟೇ ತೊಂದರೆಯನ್ನು ಕೆಲವರಿಂದ ತಮ್ಮದಲ್ಲದ ತಪ್ಪಿಗೆ ಅವರು ಅನುಭವಿಸಿದ್ದು ದುರಂತವೂ ಹೌದು.

ಡಾ. ವಿಷ್ಣುವರ್ಧನ್ ನಟಿಸಿದ್ದ ಎಷ್ಟೋ ಚಲನಚಿತ್ರಗಳು ಇಂದಿಗೂ ಕನ್ನಡ ಚಿತ್ರರಂಗದಲ್ಲಿ ಮೈಲಿಗಲ್ಲಾಗಿ ಉಳಿದಿವೆ. ವಿಷ್ಣುವರ್ಧನ್ ನಿಧನರಾಗಿ ಹದಿನಾರು ವರ್ಷದ ನಂತರ ಅವರಿಗೆ ಮರಣೋತ್ತರವಾಗಿ ಪ್ರಶಸ್ತಿ ನೀಡಿದ್ದು ಸಿದ್ದರಾಮಯ್ಯ ಸರ್ಕಾರ ಮಾಡಿದ ಅಪರೂಪದ ಒಳ್ಳೆಯ ಕೆಲಸಗಳಲ್ಲಿ ಇದೂ ಒಂದಾಗಿದೆ. ಕಡೆಗೂ ಭಾರತೀ ವಿಷ್ಣುವರ್ಧನ್, ಅನಿರುದ್ಧ ವಿಷ್ಣುವರ್ಧನ್, ವಿಷ್ಣುವರ್ಧನ್ ಕುಟುಂಬ ಹಾಗೂ ಅವರ ಲಕ್ಷಾಂತರ ಅಭಿಮಾನಿಗಳು, ಅಂತೆಯೇ ಕನ್ನಡ ಚಿತ್ರ ಅಭಿಮಾನಿಗಳಿಗೆ ಸಂತಸದ ಕ್ಷಣವಾಗಿದೆ. ಇನ್ನೋರ್ವ ಅಭಿಜಾತ ಕಲಾವಿದೆ ಬಿ.ಸರೋಜಾದೇವಿಯವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ಸಿಕ್ಕಿರುವುದು ಸಹ ಸಂತಸದ ವಿಚಾರ. ಕಿತ್ತೂರು ಚೆನ್ನಮ್ಮ, ನ್ಯಾಯವೇ ದೇವರು, ಬಬ್ರುವಾಹನ, ಭಾಗ್ಯವಂತರು, ಯಾರಿವನು ಹಾಗೆಯೇ ಸಾಕಷ್ಟು ಚಿತ್ರಗಳು ಅವರ ಅಭಿನಯವನ್ನು ಇಂದಿಗೂ ನೆನಪಿಗೆ ತರುತ್ತದೆ. ಅತ್ಯಂತ ಯೋಗ್ಯ ವ್ಯಕ್ತಿಗಳಿಗೆ ಸಿಕ್ಕ ಕರ್ನಾಟಕ ರತ್ನ ಪ್ರಶಸ್ತಿ ತನ್ನ ಮೌಲ್ಯವನ್ನು ಹೆಚ್ಚಿಸಿಕೊಂಡಿದೆ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು.

ಓ ಮನುಜ ಮೊದಲು ವಿಶ್ವ ಮಾನವನಾಗು...

ಮಾನ್ಯರೆ,

ಉಸಿರಾಡುವುದೊಂದೇ ಗಾಳಿ...
ವಾಸಿಸುವುದೊಂದೇ ಭೂಮಿ..
ಕುಡಿಯುವುದೊಂದೇ ಜಲ...
ಕಣಕಣದಲ್ಲೂ ಹರಿಯುವುದೊಂದೇ ಕೆಂಪು ರಕ್ತ..
ಎಲ್ಲರಿಗಿರುವುದೊಂದೇ ಸೂರ್ಯ..
ಸುಡುವುದೊಂದೇ ಬೆಂಕಿ..
ಹುಳುವುದೊಂದೇ ಭುವಿ..
ಬೆಳೆಯುವುದೊಂದೇ ಭೂಮಿ...
ಎಲ್ಲರ ದೇಹದ ರಚನೆ ಮೂಳೆ ಮಾಂಸಗಳಿಂದ...
ಧರಿಸುವುದೊಂದೇ ನೂಲಿನ ಬಟ್ಟೆ...

ಇರುವ ಮೂರು ದಿನಗಳ ಜೀವನದ ಸಂತೆಯಲ್ಲಿ ನಾನು ನನ್ನದು ಎಂಬ ಅಹಂಕಾರವನ್ನು ಬಿಟ್ಟು ದ್ವೇಷ, ಅಸೂಯೆ, ಕೋಪ, ತಾಪ, ಹೊಡೆದಾಟ, ಬಡಿದಾಟ, ಕೊಲೆ, ಸುಲಿಗೆ, ಕೋಮುಗಲಭೆ, ರಕ್ತಪಾತಗಳಿಂದ ದೂರವಿದ್ದು, ಜಾತಿ ಧರ್ಮ ಭೇದವನ್ನು ಮರೆತು ಪ್ರೀತಿ, ವಿಶ್ವಾಸ, ಸಹಬಾಳ್ವೆ, ಸಹಕಾರ, ಮಾನವೀಯತೆ, ಸಹಾನುಭೂತಿಯೇ ದಿವ್ಯ ಔಷಧವಾಗಿದ್ದು, ಸರ್ವ ಧರ್ಮಗಳ ತತ್ವ ಸಿದ್ಧಾಂತ ಒಂದೇ ಅದೇ ಶಾಂತಿ, ಸಹಬಾಳ್ವೆಯ ಮಂತ್ರ. ಇವೆಲ್ಲವುಗಳನ್ನು ಅರಿತು ಯೋಚಿಸಿ ಚಿಂತಿಸಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುತ್ತ ಸಾರ್ಥಕ ಜೀವನವನ್ನು ನಡೆಸೋಣ.... **–ಪರಶಿವಮೂರ್ತಿ ಎನ್‌ಪಿ. ನಂಜೀಪುರ. ಸರಗೂರು ತಾ.**



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಅಲ್ಲಿ ಸ್ವರ್ಗ ಸೇರಲು ಸಾಯಬೇಕು... ಇಲ್ಲಿ ಸ್ವರ್ಗ ಕಾಣಲು ಬದುಕಬೇಕು...!



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದ ಮಂಡ್ಯ ಜಿಲ್ಲೆಯ ಕೆ.ಎಸ್.ರಾಜಣ್ಣ

> "ಹುಟ್ಟಿನಿಂದಲೇ ದಿವ್ಯಾಂಗರಾಗಿರುವ ಅನೇಕರು ಸಾಧನೆ ಮಾಡಿ ಬದುಕನ್ನು ಸ್ವರ್ಗ ಮಾಡಿಕೊಂಡಿದ್ದಾರೆ. ಆಸ್ಟ್ರೇಲಿಯಾ ದೇಶದ ನಿಕ್ ಉಜಿಸಿಕ್ ಅವರ ಜೀವನ ಸಾಧನೆ ಎಲ್ಲರ ಒಳಗಣ್ಣನ್ನು ತೆರೆಸುತ್ತದೆ. ಹುಟ್ಟಿನಿಂದಲೇ ಕೈ ಹಾಗೂ ಕಾಲುಗಳನ್ನು ಹೊಂದಿರದ ಇವರು ಈಜು ಪಟು ಎಂದರೆ ನಂಬಲು ಸಾಧ್ಯವೇ? ಚಿತ್ರ ಕಲಾವಿದ, ಸ್ಕೈಡೈವರ್, ಪ್ರೇರಣಾತ್ಮಕ ಉಪನ್ಯಾಸಕ, ಅಷ್ಟೇ ಅಲ್ಲ ಎರಡು ಕಂಪನಿಗಳ ಮುಖ್ಯಸ್ಥ. ನಮ್ಮ ಕರ್ನಾಟಕದವರೇ ಆದ ಮಾಲತಿ ಹೊಳ್ಳ ಅವರು ಪೋಲಿಯೋಗೆ ತುತ್ತಾಗಿದ್ದರೂ ಕ್ರೀಡಾ ಕ್ಷೇತ್ರದಲ್ಲಿ 400 ಮೆಡಲ್‌ಗಳನ್ನು ಗಳಿಸಿ, ಅರ್ಜುನ ಹಾಗೂ ಪದ್ಮಶ್ರೀ ಪುರಸ್ಕಾರಕ್ಕೆ ಭಾಜನರಾದವರು. ಹಾಗೆಯೇ ಮಂಡ್ಯ ಜಿಲ್ಲೆಯವರಾದ ಕೆ.ಎಸ್.ರಾಜಣ್ಣ ಅವರು ಸಹ ಪೋಲಿಯೋದಿಂದ ಎರಡು ಕೈ ಹಾಗೂ ಕಾಲುಗಳನ್ನು ಕಳೆದುಕೊಂಡಿದ್ದರೂ, ಕ್ರೀಡಾ ಕ್ಷೇತ್ರ ಹಾಗೂ ಉದ್ಯಮ ಕ್ಷೇತ್ರದಲ್ಲಿ ಸಾಧನೆ ಮಾಡಿ ಪದ್ಮಶ್ರೀ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಎರಡು ಕೈಗಳಿಲ್ಲದ ಬಾಲೆ ಶೀತಲ್ ದೇವಿ ಪ್ಯಾರ ಒಲಂಪಿಕ್ಸ್‌ನಲ್ಲಿ ಆರ್ಚರಿಯಲ್ಲಿ ಪದಕ ಗಳಿಸಿ ನಮ್ಮ ದೇಶಕ್ಕೆ ಕೀರ್ತಿ ತಂದಿದ್ದಾಳೆ. ಅಂಗವೈಕಲ್ಯವು ನರಕದ ಬದುಕನ್ನು ತೋರುವುದಿಲ್ಲ. ಮನಸ್ಸಿದ್ದರೆ ಸ್ವರ್ಗಮಾರ್ಗವನ್ನು ಇಲ್ಲಿಯೇ ಕಾಣಬಹುದು ಎಂಬುದಕ್ಕೆ ಇವರು ಉತ್ತಮ ನಿದರ್ಶನ. ಎಲ್ಲಾ ಅಂಗಗಳು ಸರಿಯಾಗಿದ್ದರೂ, ಯಾವುದೇ ಕಾಯಕ ಮಾಡದೆ, ಅದೃಷ್ಟ ಸರಿಯಿಲ್ಲ ಎಂದು ಗೊಣಗುವ ಸೋಮಾರಿಗಳಿಗೆ ಬದುಕು ನರಕವಾಗದೆ ಸ್ವರ್ಗವಾಗಲು ಸಾಧ್ಯವೇ?

ಇಡೀ ಪ್ರಪಂಚದಲ್ಲಿ ಬಹುತೇಕ ಜನರು ಸ್ವರ್ಗ ಹಾಗು ನರಕದ ಬಗ್ಗೆ ನಂಬಿಕೆ ಹೊಂದಿದ್ದಾರೆ. ನಾವು ಬದುಕಿದ್ದಾಗ ಮಾಡುವ ಪಾಪಪುಣ್ಯಗಳ ಲೆಕ್ಕಾಚಾರದ ಮೇಲೆ ಸತ್ತಾಗ ದೊರಕುವ ಸ್ವರ್ಗವೆಂಬ ಸುಖದ ಸುಪ್ಪತ್ತಿಗೆ ಅಥವಾ ನರಕವೆಂಬ ಶಿಕ್ಷೆಯ ಲೋಕವು ಲಭ್ಯವಾಗುತ್ತದೆ ಎಂಬುದನ್ನು ನಂಬಲಾಗಿದೆ. ಅನೇಕರು ಸ್ವರ್ಗಸುಖ ಕಾಣಬೇಕೆಂದರೆ ಸಾಯಲೇಬೇಕು ಎಂದು ಭಾವಿಸಿದ್ದಾರೆ, ಆದರೆ ನರಕ ಮಾತ್ರ ಭೂಮಿಯ ಮೇಲೆಯೇ ಇದೆ ಎಂದು ಭ್ರಮಿಸಿದ್ದಾರೆ. ಭೂಮಿಯ ಮೇಲೆ ಸ್ವರ್ಗಸುಖವನ್ನು ಕಾಣಲು ಸಾಧ್ಯವೇ ಇಲ್ಲ ಎಂದು ತಪ್ಪಾಗಿ ಭಾವಿಸಿದ್ದಾರೆ. ಸ್ವರ್ಗ ಎಂದರೆ ಸದಾ ಸುಖದ ಕ್ಷಣಗಳ ಗುಚ್ಛ ಎಂದು ನಂಬಿದ್ದಾರೆ. ಸುಖದ ಅರಿವು ಆಗಬೇಕೆಂದರೆ ಕಷ್ಟದ ನೋವು ಅನುಭವಕ್ಕೆ ಬಂದಿರಬೇಕು. ಸ್ವರ್ಗದ ಸುಖ ಅನುಭವ ಆಗಬೇಕೆಂದರೆ ನರಕದ ದರ್ಶನವಾದರೂ ಆಗಿರಬೇಕು ಎಂಬ ಸಾಮಾನ್ಯ ಜ್ಞಾನವೂ ಇಲ್ಲದೇ ಇರುವುದು ದುರದೃಷ್ಟಕರ.

ಸತ್ತು ಸ್ವರ್ಗ ಪಡೆಯಬೇಕು ಎಂಬ ಹಠವೇಕೆ? ಭೂಮಿಯ ಮೇಲೆ ಸ್ವರ್ಗ ಸದೃಶ ದಿನಗಳು ಕಣ್ಣ ಮುಂದೆ ಇದ್ದರೂ ಅವುಗಳನ್ನು ಕಡೆಗಣಿಸಿ ಕಾಣದೇ ಇರುವ ಸ್ವರ್ಗಕ್ಕೆ ಹಂಬಲಿಸುವುದು ಮೂರ್ಖತನವಲ್ಲವೆ? ಮನುಷ್ಯ ಸುಖವನ್ನು ಸುಖಾಸುಮ್ಮನೆ ಅನುಭವಿಸದೆ ಕಷ್ಟವ ನೆನೆದು ಸುಖಕ್ಕೆ ಭಂಗ ತೆಗೆದುಕೊಳ್ಳುವುದು ಹಾಸ್ಯಾಸ್ಪದ ಅಲ್ಲವೇ? ಬೆಚ್ಚನೆ ಮನೆ ಇರಲು, ವೆಚ್ಚಕ್ಕೆ ಹೊನ್ನಿರಲು, ಇಚ್ಛೆಯನರಿವ ಸತಿಯಿರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ ಎಂದು ಸರ್ವಜ್ಞರು ಹೇಳಿರುವ ಮಾತು ಅಕ್ಷರಶಃ ನಿಜವಲ್ಲವೇ? ಸರ್ವಜ್ಞರು ಹೇಳಿರುವಂತೆ ಎಲ್ಲವನ್ನೂ ಹೊಂದಿದ್ದರೂ ಸ್ವರ್ಗಸುಖವನ್ನು ಅನುಭವಿಸಿದೆ ಇಲ್ಲಸಲ್ಲದಕ್ಕೆ ಆಸೆ ಪಟ್ಟು ತಮ್ಮ ಬದುಕನ್ನು ನರಕ ಮಾಡಿಕೊಳ್ಳುತ್ತಿರುವವರು ಕಡಿಮೆ ಏನಿಲ್ಲ!

ಮನುಷ್ಯ ವಾಸ್ತವದಲ್ಲಿ ಸುಖ ಪಡುವುದಕ್ಕಿಂತ ಭ್ರಮೆಯಲ್ಲಿ ಸುಖ ಪಡುತ್ತಾನೆ. ಅನೇಕರು ಕಣ್ಣ ಮುಂದೆ ಸಕಲವೂ ಇದ್ದರೂ, ಇಲ್ಲದೇ ಇರುವ, ಅನಾವಶ್ಯಕವಾದ ಯಾವುದೋ ಸಂಗತಿಗಳಿಗೆ ಆಸೆಪಟ್ಟು ತನ್ನ ಕೈಯಲ್ಲಿರುವುದನ್ನು ಅನುಭವಿಸುವ ಅವಕಾಶವನ್ನೇ ಕಳೆದುಕೊಳ್ಳುತ್ತಾರೆ. ಇರುವ ಸ್ವರ್ಗವ ತ್ಯಜಿಸಿ ಇಲ್ಲದ ಸ್ವರ್ಗಕ್ಕಾಗಿ ಹಾತೊರೆದು ಅಮೂಲ್ಯ ಬದುಕನ್ನು ಹಾಳು ಮಾಡಿಕೊಳ್ಳುತ್ತಾರೆ. ಆರ್ಥಿಕ ಭದ್ರತೆ ಎಷ್ಟೇ ಇದ್ದರೂ, ಎಲ್ಲಾ ರೀತಿಯ ಸೌಲಭ್ಯಗಳಿದ್ದರೂ ಸಮಾಧಾನ ಹೊಂದಿರುವುದಿಲ್ಲ. ಮನುಷ್ಯನಿಗೆ ಅಸಮಾಧಾನಕ್ಕೆ ಎರಡು ಅಂಶಗಳು ಕಾರಣವಾಗುತ್ತವೆ. ಒಂದು ಹೋಲಿಕೆ,

ಮತ್ತೊಂದು ಸದಾ ಮತ್ತೊಬ್ಬರನ್ನು ಮೆಚ್ಚಿಸಲು ಇಚ್ಛಿಸುವ ಗುಣ. ಹೋಲಿಕೆ ಮನುಷ್ಯನ ಸಂತೋಷವನ್ನು ಹಾಳುಮಾಡುವ ಸಂಗತಿ. ಅನಗತ್ಯವಾಗಿ ತನ್ನನ್ನು ಇತರರೊಂದಿಗೆ ಹೋಲಿಸಿಕೊಂಡು, ತಾನು ಅವರಿಗಿಂತ ಕಡಿಮೆ ಎಂದು ಕೀಳರಿಮೆ ಅನುಭವಿಸಿ, ಇರುವ ಸಂಗತಿ ಗಳಲ್ಲಿ ಸಿಗಬಹುದಾದ ಆನಂದದಿಂದ ವಂಚಿತರಾಗುತ್ತಾರೆ. ಇನ್ನೂ ಕೆಲವರು ಬದುಕನ್ನು ಒಂದು ಸ್ಪರ್ಧೆ ಎಂದು ಭಾವಿಸಿ, ತಮ್ಮ ಸಹವರ್ತಿಗಳೊಂದಿಗೆ ಅನವಶ್ಯಕವಾಗಿ ಸ್ಪರ್ಧೆಗೆ ಬಿದ್ದು, ಸಂಪತ್ತು ಕ್ರೋಢೀಕರಣದಲ್ಲಿಯೇ ತಮ್ಮ ಜೀವಮಾನವನ್ನು ಕಳೆದುಬಿಡುತ್ತಾರೆ. ನಿತ್ಯವೂ ಹಣಗಳಿಕೆ, ಉಳಿಕೆಯೇ ಅವರ ಬೀಜಮಂತ್ರವಾಗಿರುತ್ತದೆ. ತನ್ನ ಬದುಕಿಗೆ ಅಷ್ಟೇ ಅಲ್ಲದೇ ಮುಂದಿನ ಪೀಳಿಗೆಗೆ ಸಂಪತ್ತು ಗಳಿಸಿಡುತ್ತಾರೆ. ಆದರೆ ಗಳಿಸಿದ ತಾವು ಸಂಪತ್ತನ್ನು ಅನುಭವಿಸುವ ಯೋಗ್ಯತೆ ಇದ್ದರೂ ಅಯೋಗ್ಯರಂತೆ ವರ್ತಿಸಿಬಿಡುತ್ತಾರೆ.

ನಮ್ಮ ಬದುಕು ನಮಗೆ ಮೆಚ್ಚುಗೆಯಾದರೆ ಸಾಕು. ಆದರೆ ಕೆಲವರಿಗೆ ನಿತ್ಯವೂ ತಮ್ಮ ಬದುಕನ್ನು ಬೇರೆಯವರು ಮೆಚ್ಚಿಕೊಳ್ಳಬೇಕು ಎಂದು ಪರಿಭಾವಿಸುತ್ತಾರೆ. ಅಷ್ಟೇ ಅಲ್ಲ ತಮ್ಮ ಸಂಪತ್ತು ಹಾಗೂ ಜೀವನ ಶೈಲಿಯನ್ನು ಕಂಡು ಇತರರು ಮೆಚ್ಚುವುದಷ್ಟೇ ಅಲ್ಲ, ಬೆಚ್ಚುವಂತೆ ಬದುಕಬೇಕು ಎಂದು ಭಾವಿಸುತ್ತಾರೆ. ಇದಂತೂ ಅತ್ಯಂತ ಅನಗತ್ಯ ಸಂಗತಿ. ಎಲ್ಲರನ್ನೂ ಎಲ್ಲಾ ಸಮಯದಲ್ಲಿ ಮೆಚ್ಚಿಸಲು ಸಾಧ್ಯವಿಲ್ಲ. ನಮ್ಮೊಟ್ಟಿಗಿರುವವರಲ್ಲಿ ಅನೇಕರು ಸ್ವಾರ್ಥಿಗಳಿರುತ್ತಾರೆ. ಅವರಿಗೆ ನಮ್ಮಿಂದ ಅನುಕೂಲವಾದರೆ ಮಾತ್ರ ನಮ್ಮನ್ನು ಮೆಚ್ಚುತ್ತಾರೆ. ಇಲ್ಲವಾದಲ್ಲಿ ಅವರು ಹೊಟ್ಟೆಕಿಚ್ಚಿನಿಂದ ಇಲ್ಲಸಲ್ಲದ ಪುಕಾರು ಹಬ್ಬಿಸಿ ರಂಜನೆ ಪಡೆಯುತ್ತಾರೆ. ಬೇರೆಯವರು ನಮ್ಮ ಬದುಕನ್ನು ಮೆಚ್ಚಲಿ ಎಂದು ಭಾವಿಸುವುದು ನರಕ ಜೀವನವೇ ಸರಿ. ನಮ್ಮ ಬದುಕು ನಮಗೆ ತೃಪ್ತಿ, ಸಮಾಧಾನ ತಂದರೆ ಸಾಕು ಎಂದು ಭಾವಿಸುವವರಿಗೆ ಮತ್ತೆ ಬೇರೆ ಸ್ವರ್ಗ ಬೇಕಿಲ್ಲ.

ಸುಖ, ಶಾಂತಿ ಹಾಗೂ ನೆಮ್ಮದಿಯಿಂದ ಬದುಕಲು ಮನುಷ್ಯನಿಗೆ ಏನು ಬೇಕು? ಎಷ್ಟು ಬೇಕು? ಎಂಬ ಅರಿವು ಅನೇಕರಿಗೆ ಇಲ್ಲ. ಕೋಟಿ ರೂಪಾಯಿ ಇದ್ದರೆ ಬದುಕು ಸುಂದರ ಎಂದು ಭಾವಿಸುತ್ತಾರೆ. ಲೂಟಿ ಮಾಡಿದರೂ ಸರಿ ಕೋಟಿ ರೂಪಾಯಿ ಸಂಪಾದಿಸಿಬಿಡೋಣ ಎಂದು ಭಾವಿಸುತ್ತಾರೆ. ಆದರೆ ಕೋಟಿವೀರರು ಸಹ ನೆಮ್ಮದಿಯಾಗಿಲ್ಲ ಎಂಬ ಸತ್ಯವನ್ನೇ ಮರೆತುಬಿಡುತ್ತಾರೆ. ದೂರದ ಬೆಟ್ಟ ನುಣ್ಣಗೆ ಎಂಬ ನಾಣ್ಣುಡಿಯಂತೆ ಎಲ್ಲಾ ಶ್ರೀಮಂತರ ಬದುಕು ಮೇಲ್ನೋಟಕ್ಕೆ ಹಸನಾದಂತೆ ಕಾಣುವಂತೆ ವಾಸ್ತವದಲ್ಲಿ ಇರುವುದಿಲ್ಲ. ಕೋಟಿ ರೂಪಾಯಿಗಳ ಸಂಪತ್ತು ಇರುವ ನೆಮ್ಮದಿಯನ್ನು ಕಸಿದಿರುತ್ತದೆ. ತಮ್ಮ ಪ್ರತಿಸ್ಪರ್ಧಿಯ ಏಳ್ಗೆಯು ನಿದ್ರೆಯನ್ನು ಕದ್ದಿರುತ್ತದೆ. ಅನಾರೋಗ್ಯಕರ ಸ್ಪರ್ಧೆಗೆ ಬಿದ್ದು, ಒತ್ತಡದಿಂದ ಆರೋಗ್ಯವನ್ನು ಹಾಳು ಮಾಡಿಕೊಂಡ ಜನ ಅನೇಕರಿದ್ದಾರೆ. ಹಾಳಾದ ಆರೋಗ್ಯವನ್ನು ಸರಿಪಡಿಸಿಕೊಳ್ಳಲು ಪರಿತಪಿಸುತ್ತಿರುವರ ಸಂಖ್ಯೆಯೇನು ಕಡಿಮೆ ಇಲ್ಲ.

ದುಡಿಮೆಯಲ್ಲಿಯೂ ಸುಖವಿದೆ. ಅದನ್ನು ಕಂಡುಕೊಂಡವರಿಗೆ ಬದುಕು ಕಷ್ಟವಿಲ್ಲ. ಅದಕ್ಕೆ ಶರಣರು ಕಾಯಕವೇ ಕೈಲಾಸ ಎಂದು ಹೇಳಿರುವುದು. ಬದುಕಿಗೆ ಒಂದು ಸಾರ್ಥಕತೆ, ಅರ್ಥ ಇರಬೇಕು. ಹಣಬೇಕು ನಿಜ. ಆದರೆ ಹಣವೇ ಸುಖದ ಅಥವಾ ಸ್ವರ್ಗದ ಮೂಲವಲ್ಲ. ಸ್ವರ್ಗದ ಬದುಕಿಗೆ ಯಾವುದೇ ಸಿದ್ಧ ಸೂತ್ರಗಳಿಲ್ಲ. ಆದರೆ ಎಲ್ಲಾ ಸೂತ್ರಗಳಿಗೂ ಸಿದ್ಧರಿರಬೇಕು ಅಷ್ಟೆ.

ಹೌದು, ಆಸೆಗಳಿಲ್ಲದೆ ಸಾದಾ ಸೀದ ಬದುಕಲು ಎಲ್ಲರೂ ಸಂತರಲ್ಲ. ಎಲ್ಲವೂ ಇದ್ದೂ ಸಂತಸವಿಲ್ಲದಿದ್ದರೆ ಏನು ಫಲ? ದಕ್ಕಿದಷ್ಟನ್ನು ಪೂರ್ಣ ಪ್ರಮಾಣದಲ್ಲಿ ಅನುಭವಿಸುವ ಮನೋಭಾವ ಹೆಚ್ಚಾಗಬೇಕು ಅಷ್ಟೆ. ಇರುವುದನ್ನು ಅನುಭವಿಸದೆ, ಸುಖಿಸದೆ, ಬರುವುದರಲ್ಲಿ ಸುಖವಿದೆ ಎಂದು ಭ್ರಮೆ ಹೊಂದುವುದು ಪೆದ್ದತನ. ತಮಗಿರುವಷ್ಟು ಕಷ್ಟ ಬೇರೆ ಯಾರಿಗೂ ಇಲ್ಲ ಎಂದು ಭಾವಿಸುವ ಜನ, ಎಷ್ಟೇ ಸುಖ–ಸಂಪತ್ತು ಇದ್ದರೂ, ತಮಗಿರುವಷ್ಟು ಸುಖ ಯಾರಿಗೂ ಇಲ್ಲ ಎಂದು ಭಾವಿಸುವುದೇ ಇಲ್ಲ. ಸ್ವರ್ಗ ಅಥವಾ ನರಕವನ್ನು ಸೃಷ್ಟಿಸುವುದು ನಮ್ಮ ಕೈಯಲ್ಲಿಯೇ ಇದೆ. ಕುಟುಂಬದಲ್ಲಿ ಕೆಲವು ಅನಿರೀಕ್ಷಿತ/ಅಕಾಲಿಕ ಸಾವುಗಳು ಕೊಡುವ ನೋವನ್ನು ಹೊರತು ಪಡಿಸಿದರೆ ಇನ್ನುಳಿದಂತೆ ಬೇರೆ ಯಾವ ಸಂಗತಿಯೂ ನರಕ ಅನುಭವಿಸುವಷ್ಟು ಕಷ್ಟದ ಸಂಗತಿಗಳಲ್ಲ.


ಹುಟ್ಟಿನಿಂದಲೇ ದಿವ್ಯಾಂಗರಾಗಿರುವ ಅನೇಕರು ಸಾಧನೆ ಮಾಡಿ ಬದುಕನ್ನು ಸ್ವರ್ಗ ಮಾಡಿಕೊಂಡಿದ್ದಾರೆ. ಆಸ್ಟ್ರೇಲಿಯಾ ದೇಶದ ನಿಕ್ ಉಜಿಸಿಕ್ ಅವರ ಜೀವನ ಸಾಧನೆ ಎಲ್ಲರ ಒಳಗಣ್ಣನ್ನು ತೆರೆಸುತ್ತದೆ. ಹುಟ್ಟಿನಿಂದಲೇ ಕೈ ಹಾಗೂ ಕಾಲುಗಳನ್ನು ಹೊಂದಿರದ ಇವರು ಈಜುಪಟು ಎಂದರೆ ನಂಬಲು ಸಾಧ್ಯವೇ? ಚಿತ್ರ ಕಲಾವಿದ, ಸ್ಕೈಡೈವರ್, ಪ್ರೇರಣಾತ್ಮಕ ಉಪನ್ಯಾಸಕ, ಅಷ್ಟೇ ಅಲ್ಲ ಎರಡು ಕಂಪನಿಗಳ ಮುಖ್ಯಸ್ಥ. ನಮ್ಮ ಕರ್ನಾಟಕದವರೇ ಆದ ಮಾಲತಿ ಹೊಳ್ಳ ಅವರು ಪೋಲಿಯೋಗೆ ತುತ್ತಾಗಿದ್ದರೂ ಕ್ರೀಡಾ ಕ್ಷೇತ್ರದಲ್ಲಿ 400 ಮೆಡಲ್‌ಗಳನ್ನು ಗಳಿಸಿ, ಅರ್ಜುನ ಹಾಗೂ ಪದ್ಮಶ್ರೀ ಪುರಸ್ಕಾರಕ್ಕೆ ಭಾಜನರಾದವರು. ಹಾಗೆಯೇ ಮಂಡ್ಯ ಜಿಲ್ಲೆಯವರಾದ ಕೆ.ಎಸ್.ರಾಜಣ್ಣ ಅವರು ಸಹ ಪೋಲಿಯೋದಿಂದ ಎರಡು ಕೈ ಹಾಗೂ ಕಾಲುಗಳನ್ನು ಕಳೆದುಕೊಂಡಿದ್ದರೂ, ಕ್ರೀಡಾ ಕ್ಷೇತ್ರ ಹಾಗೂ ಉದ್ಯಮ ಕ್ಷೇತ್ರದಲ್ಲಿ ಸಾಧನೆ ಮಾಡಿ ಪದ್ಮಶ್ರೀ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಎರಡು ಕೈಗಳಿಲ್ಲದ ಬಾಲೆ ಶೀತಲ್ ದೇವಿ ಪ್ಯಾರ ಒಲಂಪಿಕ್ಸ್‌ನಲ್ಲಿ ಆರ್ಚರಿಯಲ್ಲಿ ಪದಕ ಗಳಿಸಿ ನಮ್ಮ ದೇಶಕ್ಕೆ ಕೀರ್ತಿ ತಂದಿದ್ದಾಳೆ. ಅಂಗವೈಕಲ್ಯವು ನರಕದ ಬದುಕನ್ನು ತೋರುವುದಿಲ್ಲ. ಮನಸ್ಸಿದ್ದರೆ ಸ್ವರ್ಗ ಮಾರ್ಗವನ್ನು ಇಲ್ಲಿಯೇ ಕಾಣಬಹುದು ಎಂಬುದಕ್ಕೆ ಇವರು ಉತ್ತಮ ನಿದರ್ಶನ. ಎಲ್ಲಾ ಅಂಗಗಳು ಸರಿಯಾಗಿದ್ದರೂ, ಯಾವುದೇ ಕಾಯಕ ಮಾಡದೆ, ಅದೃಷ್ಟ ಸರಿಯಿಲ್ಲ ಎಂದು ಗೊಣಗುವ ಸೋಮಾರಿಗಳಿಗೆ ಬದುಕು ನರಕವಾಗದೆ ಸ್ವರ್ಗವಾಗಲು ಸಾಧ್ಯವೇ?

ಸ್ವರ್ಗ ಎಂದರೆ ಅಪ್ಸರೆಗಳು ಇರಬೇಕೆಂದೇನಿಲ್ಲ, ಸ್ವರ್ಗ ಎಂದರೆ ಸೇವಕರು ಇರಬೇಕೆಂದೇನಿಲ್ಲ, ಸ್ವರ್ಗ ಎಂದರೆ ನಿದ್ರಿಸಲು ಸುಪ್ಪತ್ತಿಗೆಯೇ ಇರಬೇಕು ಎಂದೇನಿಲ್ಲ, ಸ್ವರ್ಗ ಎಂದರೆ ಬಯಸಿದ್ದು ಕಣ್ಣೆದುರಿಗೆ ಪ್ರತ್ಯಕ್ಷವಾಗಬೇಕು ಅಂತೇನಿಲ್ಲ. ಸ್ವರ್ಗ ಎಂದರೆ ಮಾಡಲು ಒಂದು ಕಾಯಕ, ಸಮಯಕ್ಕೆ ಸರಿಯಾಗಿ ಊಟ–ತಿಂಡಿ, ಸ್ವರ್ಗ ಎಂದರೆ ಅಗತ್ಯವಿರುವಷ್ಟು ನಿದ್ರಿಸುವ ವಾತಾವರಣ, ಸ್ವರ್ಗ ಎಂದರೆ ಉತ್ತಮ ಆರೋಗ್ಯ, ಸ್ವರ್ಗ ಎಂದರೆ ಅರ್ಥಮಾಡಿಕೊಳ್ಳುವ ಕುಟುಂಬ, ಕಷ್ಟಕ್ಕೆ ಹೆಗಲಾಗುವ ಸ್ನೇಹಿತರು–ಬಂಧುಬಳಗ. ಸ್ವರ್ಗ ಎಂದರೆ ಬೇಸರವಾದಾಗ ಒಂದಷ್ಟು ಪ್ರವಾಸ, ಆಗಾಗ್ಗ ಬಂಧುಬಳಗದ ಜೊತೆ ಒಂದು ಕೂಟ. ನಿತ್ಯ ನಗುವ ಹರಿಸುವ ಒಂದಷ್ಟು ಹಾಸ್ಯ ಚಟಾಕಿಗಳು..... ಹೀಗೆ ಭೂಮಿಯ ಮೇಲಿನ ಸ್ವರ್ಗ ಸದೃಶ ಸಂಗತಿಗಳ ಪಟ್ಟಿ ಮಾಡುತ್ತಲೇ ಇರಬಹುದು. ಅವೆಲ್ಲವನ್ನೂ ಬಿಟ್ಟು, ಕಾಣದೆ ಇರುವ ಸ್ವರ್ಗಕ್ಕೆ ಏಣಿ ಹಾಕು ವುದು ಎಷ್ಟು ಸರಿ? ಏನಂತೀರಿ?

ಹೂರಣ: ನಮಗೆ ಮೆಚ್ಚುಗೆಯಾಗುವಂತೆ
ಬದುಕಿದರೆ ಬದುಕು ಸ್ವರ್ಗ,
ಅನ್ಯರನ್ನು ಮೆಚ್ಚಿಸಲು
ಬದುಕ ಹೊರಟರೆ ಬದುಕು ನರಕ!

ಮೈಸೂರು ವಿವಿ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆ ಆರೋಪ

ಪ್ರಕ್ರಿಯೆ ಸ್ಥಗಿತಕ್ಕೆ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್.ಚಂದ್ರಶೇಖರ್ ಮನವಿ



ಚಂದ್ರಶೇಖರ್

ಮೈಸೂರು, ಸೆ.14– ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘಿಸಲಾಗಿದೆ ಎಂದು ಆರೋಪಿಸಿರುವ ವಿವಿಯ ಸಿಂಡಿಕೇಟ್ ಸದಸ್ಯ ಡಾ.ಟಿ. ಆರ್.ಚಂದ್ರಶೇಖರ್, ಟೆಂಡರ್ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸುವಂತೆ ಮನವಿ ಮಾಡಿದ್ದಾರೆ.

ಈ ಸಂಬಂಧ ಮೈಸೂರು ವಿವಿ ಕುಲಪತಿ ಹಾಗೂ ಕುಲಸಚಿವರಿಗೆ ಪತ್ರ ಬರೆದಿರುವ ಅವರು, 2023ರಿಂದ ಟೆಂಡರ್ ನೀಡುವಲ್ಲಿ ಸತತವಾಗಿ ಕೆಟಿಟಿಪಿ ಕಾಯ್ದೆ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಯಲ್ಲಿನ ನಿಯಮಗಳನ್ನು ಉಲ್ಲಂಘನೆ ಮಾಡಲಾಗಿದೆ. ಟೆಂಡರ್ ಹೆಸರಿನಲ್ಲಿ ವಸ್ತುಗಳ ಖರೀದಿ ಮತ್ತು ಕಾಮಗಾರಿಗಳನ್ನು ನಡೆಸುವ ಮೂಲಕ ಆರ್ಥಿಕ ಸಂಕಷ್ಟದಲ್ಲಿರುವ ವಿವಿಯ ಹಣಕಾಸು ನಿಧಿಗಳ ದುರುಪಯೋಗವಾಗಿರುವುದು ಸ್ಪಷ್ಟವಾಗಿದೆ. ಈ ಅಕ್ರಮಗಳ ಬಗ್ಗೆ ಅನೇಕ ಸಿಂಡಿಕೇಟ್ ಸಭೆಗಳಲ್ಲಿ ನಾನು ಆಕ್ಷೇಪ ವ್ಯಕ್ತಪಡಿಸಿದ್ದೇನೆ.

ಆದಾಗ್ಯೂ ಕಳೆದ ಆಗಸ್ಟ್ 5ರಂದು ವಿವಿಯ 'ಮೌಲ್ಯಭವನ'ಕ್ಕೆ ಐಟಿ ಮೂಲ ಸೌಕರ್ಯ ಒದಗಿಸುವುದು ಸೇರಿದಂತೆ ವಿವಿಧ ಕಾಮಗಾರಿಗಳಿಗೆ ರಾಜ್ಯ ಸಾರ್ವಜನಿಕ ಖರೀದಿ ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಿ, ಮುಂದಿನ ಪ್ರಕ್ರಿಯೆ ನಡೆಸಲಾಗಿದೆ. ಈ ಹಿನ್ನೆಲೆಯಲ್ಲಿ ಆ.20ರಂದು ಪತ್ರದ ಮೂಲಕ 2023ರಿಂದ ನಡೆದಿರುವ ಟೆಂಡರ್ ಸಂಬಂಧಿತ ನಿಯಮ ಉಲ್ಲಂಘನೆ ಬಗ್ಗೆ ಪುನಃ ಗಮನಕ್ಕೆ ತಂದಿದ್ದೇನೆ.

ಆದರೂ ಯಾವುದೇ ಕ್ರಮ ವಹಿಸಿರುವ ಬಗ್ಗೆ ಮಾಹಿತಿ ಇಲ್ಲದಿರುವುದರಿಂದ ಜವಾಬ್ದಾರಿಯುತ ಸಿಂಡಿಕೇಟ್ ಸದಸ್ಯನಾಗಿ ನೂತನ ಟೆಂಡರ್‌ಗೆ ಸಂಬಂಧಿಸಿದ ವಿವರ ಹಾಗೂ ದಾಖಲೆ ಒದಗಿಸುವಂತೆ ಹಾಗೂ ನಿಯಮ ಬಾಹಿರವಾದ ಪ್ರಸ್ತುತ ಟೆಂಡರ್ ಪ್ರಕ್ರಿಯೆ ಮತ್ತು ಟೆಂಡರ್ ರಹಿತವಾಗಿ ಮಾಡಿಕೊಂಡಿರುವ ಎಲ್ಲಾ ಕರಾರುಗಳನ್ನು ತಕ್ಷಣವೇ ರದ್ದುಗೊಳಿಸಲು ಮನವಿ ಮಾಡುತ್ತಿದ್ದೇನೆ. ಇದನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಕಾನೂನು ಬಾಹಿರ ಆಡಳಿತ, ಹಣಕಾಸು ದುರುಪಯೋಗ ಮತ್ತು ಭ್ರಷ್ಟಾಚಾರದ ಬಗ್ಗೆ ವಿಶೇಷ ತನಿಖೆಗೆ ಆಗ್ರಹಿಸಿ, ರಾಜ್ಯಪಾಲರು, ಮುಖ್ಯಮಂತ್ರಿಗಳು, ಉನ್ನತ ಶಿಕ್ಷಣ ಸಚಿವರು, ಸಾರ್ವಜನಿಕ ಲೆಕ್ಕ ಪರಿಶೋಧನಾ ಸಮಿತಿ ಅಧ್ಯಕ್ಷರು, ರಾಜ್ಯ ಹಾಗೂ ಕೇಂದ್ರ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಶಾಸ್ತ್ರ ಇಲಾಖೆಗಳನ್ನು ಒತ್ತಾಯಿಸುವುದಾಗಿ ಪತ್ರದಲ್ಲಿ ಎಚ್ಚರಿಸಿದ್ದಾರೆ.

ಶ್ರೀ ವೇಣುಗೋಪಾಲಸ್ವಾಮಿಗೆ ವಿಶೇಷ ಪೂಜೆ



ಶ್ರೀಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಇಟ್ಟುವಳ್ಳಿ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಅಲಂಕಾರದೊಂದಿಗೆ ದೇವರ ಉತ್ಸವ, ಅಭಿಷೇಕ, ಪೂಜೆ ಹಾಗೂ ಭಕ್ತರಿಗೆ ಪ್ರಸಾದ ವಿನಿಯೋಗ ಕೈಂಕರ್ಯಗಳು ವಿಜೃಂಭಣೆಯಿಂದ ಜರುಗಿದವು. ದೇವಸ್ಥಾನದ ಪ್ರಧಾನ ಆರಾಧಕ ಟಿ.ಎನ್.ಅಭಿಜಿತ್, ಟಿ.ಎ.ಶ್ರೀಧರ್, ನಾಗಮಣಿ ನಾಗರಾಜ್, ಅಜಯ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಜಂಟಿ ಕಾರ್ಯದರ್ಶಿ ಟಿ.ಎಸ್.ಅರುಣ್ ಹಾಗೂ ನೂರಾರು ಭಕ್ತರು ಕೃಷ್ಣ ಜನ್ಮಾಷ್ಟಮಿಯಲ್ಲಿ ಪಾಲ್ಗೊಂಡಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮಾವುತರ ಮಕ್ಕಳಿಗೆ ಜೀವನ ಕೌಶಲ ತರಬೇತಿ



ಮಾವುತರ ಮಕ್ಕಳಿಗೆ ವಿಶಿಷ್ಟ ಜೀವನ ಕೌಶಲ ತರಬೇತಿ ನೀಡಲಾಯಿತು.

ಮೈಸೂರು, ಸೆ. 14– ಸಮೃದ್ಧಿ ಟ್ರಸ್ಟ್ ವತಿಯಿಂದ ಮಾವುತರ ಮಕ್ಕಳಿಗಾಗಿ ವಿಶಿಷ್ಟ ಜೀವನ ಕೌಶಲ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ದೇಶ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು, ಜೀವನ ನಿರ್ವಹಣಾ ಕೌಶಲಗಳನ್ನು ಅಭಿವೃದ್ಧಿಪಡಿ ಸಲು ಮತ್ತು ಅವರನ್ನು ಸಾಮಾಜಿಕ ವಾಗಿ ಸಬಲಗೊಳಿಸುವುದು.

ಕಾರ್ಯಕ್ರಮದಲ್ಲಿ ಖ್ಯಾತ ಮನೋ ವಿಜ್ಞಾನಿ ಡಾ.ರೇಖಾ, ಮನಃಶಾಂತಿ ಬಗ್ಗೆ ಮಕ್ಕಳಿಗೆ ಮಾರ್ಗದರ್ಶನ ನೀಡಿದರು. ಜೀವನ ಕೌಶಲಗಳ ಮಹತ್ವವನ್ನು ವಿವರಿಸಿ, ಮಕ್ಕಳೊಂದಿಗೆ ಆಟಗಳ ಮೂಲಕ ಆಸಕ್ತಿದಾಯಕ ತರಬೇತಿ ನೀಡಿದರು. ಜೀವನವನ್ನು ಹೇಗೆ ನಡೆಸಬೇಕು, ಭಾವನಾತ್ಮಕ ಸಮತೋಲನ ಹೇಗೆ ಸಾಧಿಸಬೇಕು ಎಂಬುದರ ಬಗ್ಗೆ ಸಹ ಪ್ರಾಯೋಗಿಕವಾಗಿ ಬೋಧನೆ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಮಕ್ಕಳು ಉತ್ಸಾಹದಿಂದ ಭಾಗವಹಿಸಿದ್ದರು.

ಸುಮಾರು 50 ಮಕ್ಕಳಿಗೆ ಅಧ್ಯಯನ ಸಾಮಗ್ರಿಗಳನ್ನು ವಿತರಿಸಲಾಯಿತು. ಜೊತೆಗೆ ಮಾವುತರು, ಕಾವಾಡಿಗರಿಗೆ ಹೊದಿಕೆಗಳನ್ನೂ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸಮೃದ್ಧಿ ಟ್ರಸ್ಟ್ ಅಧ್ಯಕ್ಷೆ ಸಹನಾ ಗೌಡ, ಯೋಗ ತಜ್ಞೆ ಡಾ.ಸೌಮ್ಯಾ, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಸ್ಥಾಪಕ ವಿಕ್ರಮ್ ಆಯಂಗಾರ್, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಸಿಬ್ಬಂದಿ, ಶ್ರೀರಂಗ, ಅನಿಲ್ ಹಾಗೂ ಶಿಕ್ಷಕರು ಪಾಲ್ಗೊಂಡಿದ್ದರು.

ಮ್ಯಾನೇಜ್‌ಮೆಂಟ್ ಪ್ರೀಮಿಯರ್ ಲೀಗ್ ಸೀಸನ್–2 ಚಾಂಪಿಯನ್ಸ್



ಮೈಸೂರಿನ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಎಂಐಟಿ ಮ್ಯಾನೇಜ್‌ಮೆಂಟ್ ಪ್ರೀಮಿಯರ್ ಲೀಗ್ ಸೀಸನ್–2ನಲ್ಲಿ ಚಾಂಪಿಯನ್ಸ್ ಆಗಿದ್ದಾರೆ. ಎಂಡಿಇಎಸ್‌ನ ಕಾರ್ಯದರ್ಶಿ ರೆ. ಫಾ. ಎಡ್ವರ್ಡ್ ವಿಲಿಯಂ ಸಲ್ಡಾನ್ಹಾ, ಖಜಾಂಚಿ ರೆ. ಫಾ. ನವೀನ್‌ಕುಮಾರ್, ಪ್ರಾಂಶುಪಾಲ ಹೆಚ್.ಎನ್. ಚಂದ್ರಶೇಖರ, ದೈಹಿಕ ಶಿಕ್ಷಣ ನಿರ್ದೇಶಕ ವೆಂಕಟೇಶ್, ವಿದ್ಯಾರ್ಥಿಗಳು ಇದ್ದರು.

ಸೆ.17, ಉಚಿತ ಹೃದಯ ರೋಗ ತಪಾಸಣಾ ಶಿಬಿರ

ಬನ್ನೂರು, ಸೆ.14– ಇಲ್ಲಿನ ಲಯನ್ಸ್ ಕ್ಲಬ್ ಮೈಸೂರಿನ ನಾರಾಯಣ ಹೆಲ್ತ್ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಉಚಿತ ಹೃದಯ ರೋಗ ತಪಾಸಣಾ ಶಿಬಿರವನ್ನು ಸೆ.17 ರಂದು ಆಯೋಜಿಸಿದೆ.

ಬೆಳಿಗ್ಗೆ 9.30ರಿಂದ ಮಧ್ಯಾಹ್ನ 3ರವರೆಗೆ ನಡೆಯಲಿರುವ ಶಿಬಿರವನ್ನು ಜಿಲ್ಲಾ ರಾಜ್ಯಪಾಲ ಲ. ಕೆ.ಎಲ್. ರಾಜಶೇಖರ್ ಉದ್ಘಾಟಿಸುವರು ವಿಶೇಷ ಆಹ್ವಾನಿತರಾಗಿ ಜಿಲ್ಲಾ ಸಂಪುಟ ಕಾರ್ಯದರ್ಶಿ ಲ. ಸಿದ್ದೇಗೌಡ, ವಲಯ ಅಧ್ಯಕ್ಷ ಲ. ಪಿ. ಹೊನ್ನರಾಜು, ಜೋನ್ ಚೇರ್ಮನ್ ಲ. ಶಿವಣ್ಣ ವಿಶೇಷ ಆಹ್ವಾನಿತರಾಗಿ ಆಗಮಿಸುವರೆಂದು ಲ. ಬಿ.ಎನ್. ಬಸವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಮ್ಮದೆ ದೇಶದ ಶಾಲೆಗಳ ಮೇಲೆ ಮ್ಯಾನ್ಮಾರ್ ಸೇನೆ ವಾಯುದಾಳಿ: 19 ವಿದ್ಯಾರ್ಥಿಗಳು ಸಾವು

ಮ್ಯಾನ್ಮಾರ್: ಭಾರತದ ನೆರೆಯ ರಾಷ್ಟ್ರವಾದ ಮ್ಯಾನ್ಮಾರ್‌ನ ರಾಖೈನ್ ಪ್ರಾಂತ್ಯದ ಎರಡು ಶಾಲೆಗಳ ಮೇಲೆ ಮ್ಯಾನ್ಮಾರ್ ಸೇನೆಯು ವಾಯುದಾಳಿ ನಡೆಸಿದೆ. ಈ ದಾಳಿಯಲ್ಲಿ 19 ವಿದ್ಯಾರ್ಥಿಗಳು ಸಾವನ್ನಪ್ಪಿದ್ದು, 22 ಜನರು ಗಾಯಗೊಂಡಿದ್ದಾರೆ ಎಂದು ವರದಿಯಾಗಿದೆ.

ಈ ಘಟನೆಯ ಬಗ್ಗೆ ಮಾಹಿತಿ ಪಡೆದ ಅರಾಕನ್ ಸೇನೆಯು ದುಃಖ ವ್ಯಕ್ತಪಡಿಸಿದೆ. ಮುಗ್ಧ ವಿದ್ಯಾರ್ಥಿಗಳ ಸಾವಿನಿಂದ ನಾವು ದುಃಖಿತರಾಗಿದ್ದೇವೆ ಎಂದು ಹೇಳಿಕೆ ತಿಳಿಸಿದೆ. ವಿದ್ಯಾರ್ಥಿಗಳು ಮಲಗಿದ್ದಾಗ ಮಿಲಿಟರಿ ಜುಂಟಾ ವಿಮಾನವು ಶಾಲೆಯ ಮೇಲೆ ಎರಡು ಬಾಂಬ್‌ಗಳನ್ನು ಬೀಳಿಸಿದೆ ಎಂದು ಸ್ಥಳೀಯ ಮಾಧ್ಯಮ ಸಂಸ್ಥೆ ಮ್ಯಾನ್ಮಾರ್ ನೌ ವರದಿ ಮಾಡಿದೆ. ದೇಶದ ಸೇನೆಯಿಂದ ಇನ್ನೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ವಿಶ್ವಸಂಸ್ಥೆಯ ಮಕ್ಕಳ ಸಂಸ್ಥೆ UNICEF ಈ ದಾಳಿಯನ್ನು ತೀವ್ರವಾಗಿ ಖಂಡಿಸಿದ್ದು, ರಖೈನ್ ರಾಜ್ಯದಲ್ಲಿ ಹೆಚ್ಚುತ್ತಿರುವ ವಿನಾಶಕಾರಿ ಹಿಂಸಾಚಾರದ ಮಾದರಿಗೆ ಇದು ಸೇರ್ಪಡೆಯಾಗಿದೆ ಎಂದು ಹೇಳಿದೆ. ಇದರ ಬೆಲೆಯನ್ನು ಈಗ ಮಕ್ಕಳು ಮತ್ತು ಅವರ ಕುಟುಂಬಗಳು ಪಾವತಿಸುತ್ತಿದ್ದಾರೆ. ಅರಾಕನ್ ಸೈನ್ಯವು ಹೆಚ್ಚಿನ ಭಾಗವನ್ನು ಆಕ್ರಮಿಸಿಕೊಂಡಿರುವ ರಖೈನ್‌ನಲ್ಲಿ ಇತ್ತೀಚಿನ ತಿಂಗಳುಗಳಲ್ಲಿ ಹಿಂಸಾಚಾರ ಮತ್ತೆ ಹೆಚ್ಚಾಗಿದೆ.

ಬೊಂಬೆ ಜೋಡಣೆ ಸ್ಪರ್ಧೆ

ಮೈಸೂರು, ಸೆ.14–ಬಡಗನಾಡು ಬಳಗದ ವತಿಯಿಂದ ಸೆ.22ರಿಂದ ಅ.2ರವರೆಗೆ ದಸರಾ ಹಬ್ಬದ ಅಂಗವಾಗಿ ಸಾರ್ವಜನಿಕರಿಗಾಗಿ ಬೊಂಬೆ ಜೋಡಣೆ ಸ್ಪರ್ಧೆ ಆಯೋಜಿಸಲಾಗಿದೆ. ಭಾಗವಹಿಸಲು ಇಚ್ಛಿಸುವವರು ಮೊ.9986197263, 9731803845 ಸಂಪರ್ಕಿಸಬಹುದು. ನೋಂದಣಿಗೆ ಸೆ.20 ಕಡೆ ದಿನಾಂಕವಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮಳಿಗೆ ಬೇಕಾಗಿದೆ
ಕಾಫಿ ಗುರು ಕೆಫೆ, T.K. ಲೇಔಟ್, ಮೈಸೂರು ಫೆಬ್ರವರಿ 25 ರಲ್ಲಿ ಆರಂಭವಾದ ಕೆಫೆಯು ಬಾರೀ ಜನಮನ್ನಣೆ ಗಳಿಸಿದೆ. ಪ್ರಸ್ತುತ ನಾವು ಫ್ರಾಂಚಿಸಿ ಕೊಡಲು ತೀರ್ಮಾನಿಸಿದ್ದೇವೆ. ಮೈಸೂರಿನ ಜನನಿಬಿಡ ಯಾವುದೇ ಪ್ರದೇಶದಲ್ಲಿ 600-1000 sqft ನ ವಾಣಿಜ್ಯ ಮಳಿಗೆ ಕೆಫೆ ನಡೆಸಲು ಬೇಕಾಗಿದೆ. ಅಂತಹ ಮಳಿಗೆ ಹೊಂದಿರುವ ಮಾಲೀಕರು ಇದ್ದರೆ ತಕ್ಷಣ ಕರೆಮಾಡಿ.
Mob: 9035501219

We are in need of staff for
1. Grinding ; 2. Waiters (should read English). 3. Stall in charge (male or female candidates) (should read English), (with basic skills & knowledge about restaurant is must). 4. Captain post (full time or part time) (should know English). (Male & female candidates are welcome. UDUPI RAJ BHAVANS (Pure Veg Restaurant) Address - No. 819, Devaraja Mohalla, Ring Road, Vijaynagar 4th Stage- 570030 (available on Google map)
Mob: 8867872569

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

ಜಾಗ ಅಥವಾ ಸೈಟು ಬೇಕಾಗಿದೆ
ಜನ್‌ಧನ್ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಮೈಸೂರಿನಿಂದ ಸುಮಾರು ಹದಿನೈದು ಕಿಲೋಮೀಟರ್ ವ್ಯಾಪ್ತಿ ಒಳಗಡೆ ಸೈಟುಗಳು ಮತ್ತು ಜಾಗ ಬೇಕಾಗಿದೆ. ಆಸಕ್ತರು ಸಂಪರ್ಕಿಸಿ:
80500-52444 / 99809-59598
ಮಧ್ಯವರ್ತಿಗಳಿಗೆ ಅವಕಾಶವಿಲ್ಲ

ಸೋಲಾರ್ ಸರ್ವೀಸ್
ಅನ್ನು ಕಂಪನಿ ಕಡೆಯಿಂದ 700 ರೂ.ಗೆ 1-9-2025ರಿಂದ 15-09-2025 ರವರೆಗೆ ಮಾಡಿಕೊಡಲಾಗುತ್ತದೆ.
Mob : 9008711654

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

SHILPA MAKEUP STUDIO & ACADEMY
Special Offer : ~~30,000/-~~ 25,000/-
1. HD Makeup, 2. Waterproof Makeup 3. Glassy Makeup, 4. Self Makeup 5. 15+ Hairstyles, 6. Saree Dropping 7. Mehendi, 8. Nailart, 9. Portfolio Shoot 10. Social Media Handling
9148979194
Ramakrishna Nagar, E&F Block, Dakshineshwara Road, Near Ruby Bakery, No-#1489, Mysore.

ಮನೆ ಕಟ್ಟಿಸುವವರ ಗಮನಕ್ಕೆ
ಚದುರಡಿಗೆ 1900/- ರಂತೆ ಉತ್ತಮ ಗುಣಮಟ್ಟವುಳ್ಳ ಸಾಮಗ್ರಿಗಳನ್ನು ಬಳಸಿ ನಮ್ಮ ಕನಸಿನ ಮನೆಯನ್ನು ಕಟ್ಟಿಕೊಡಲಾಗುವುದು.
ಸಂಪರ್ಕಿಸಿ : S.R. Constructions ದಿವಾನ್ಸ್ ರಸ್ತೆ, ಮೈಸೂರು-570024
6364281689

SBIT TRAVELS
Group Tour
ODISHA TOUR 4 DAYS
OCTOBER 4TH
All tours and transfers
9343524127
(Saraswathipuram, Mysuru)

SITES for SALE
JP Nagar Ring Road
20x30 - 22 Lakhs
30x40 - 42 Lakhs
Near Gurur Bus Stop, Near JP Nagar Ring Road, Mysore. DTCP approved
(Corporation limits with E Katha)
8660105902

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ 10,000 (24 CT)
Mob: 9108146123

ಉದ್ಯೋಗ ಅವಕಾಶ
Palli Developers & Consultants LLP
ಪಲ್ಲಿ ಡೆವಲಪರ್ಸ್
ಟೆಲಿಕಾಲರ್ಸ್
(ಹೊಸಬರಿಗೂ ಕೂಡ ಅವಕಾಶವಿದೆ)
ಕರೆ ಮಾಡಿ 97420 55560 0821-3551296

ಮೂಡಲಧ್ವನಿ ಆಶ್ರಮ
ಸಾರ್ವಜನಿಕರಲ್ಲಿ ವಿನಂತಿಸುವುದೇನೆಂದರೆ ಮೂಡಲಧ್ವನಿ ವೃದ್ಧಾಶ್ರಮವನ್ನು ಮೈಸೂರಿನಲ್ಲಿ ಪ್ರಾರಂಭಿಸಲಾಗಿದೆ. ಉತ್ತಮವಾದ, ಶುಚಿತ್ವ, ಸ್ವಚ್ಛತೆ, ವಸತಿ, ಊಟ, ತಿಂಡಿ, ವೈದ್ಯಕೀಯ ತಪಾಸಣೆ, ಮನೋರಂಜನೆ ಒಳಗೊಂಡಿರುವ ಮೂಡಲಧ್ವನಿ ಆಶ್ರಮಕ್ಕೆ ಆಸಕ್ತಿವುಳ್ಳವರು ಸಂಪರ್ಕಿಸಿ: ವಿಳಾಸ: ನಂ. 906, 3ನೇ ಮುಖ್ಯರಸ್ತೆ, ಅಪೋಲೋ ಸಿಗ್ನಲ್ ಹತ್ತಿರ, ಸರಸ್ವತಿಪುರಂ, ಮೈಸೂರು.
9731270828, 9449226216

Solar Water Heaters


SUNZONE SOLAR SYSTEM
VM Double Road, Kuvempunagar, Mysuru
9845175443

WANTED
- Telecallers
- Marketing Manager
- TV Anchors
- PigMe Collection Boy
- Office Assistant

9980 95 95 98

ಶ್ರೀ ಲಕ್ಷ್ಮೀದೇವಿ ಸರ್ವೀಸ್
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8296341145

ಸೈಟು ಮಾರಾಟಕ್ಕಿದೆ
30x40 North Face
ಉರ್ದು ಟೀಚರ್ಸ್ ಬಡಾವಣೆ ದೇವೇಗೌಡ ಸರ್ಕಲ್ ಹತ್ತಿರ
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9343274266

ಸಂಪು ಮತ್ತು ಟ್ಯಾಂಕ್
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಕೆಲಸಕ್ಕೆ ಬೇಕಾಗಿದ್ದಾರೆ
ರೂಂ ಬಾಯ್ ಕೆಲಸಕ್ಕೆ ಹೌಸ್‌ಕೀಪಿಂಗ್ ಅನುಭವ ಇರುವವರು ಬೇಕಾಗಿದ್ದಾರೆ.
Mob: 99012 22852

ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನಲ್ಲಿ ಕೆಲಸ ಮಾಡಲು ಜಂಬೋ ಟ್ರಕ್‌ಗೆ ಡ್ರೈವರ್ಸ್ ಬೇಕಾಗಿದ್ದಾರೆ. ಪಿಎಫ್ & ಇಎಸ್‌ಐ ಸೌಲಭ್ಯವಿದೆ.
Mob: 9341623350

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು, ವಯೋಮಿತಿ 18–30, ವಿದ್ಯಾರ್ಹತೆ: ಪಿ.ಯು.ಸಿ, ಯಾವುದೇ ಡಿಗ್ರಿ. ಸೆರಾಕೇರ್ ಮೈಸೂರು ಹೆಲ್ತ್ ಸೆಂಟರ್, ನ್ಯೂ ಕಾಂತರಾಜು ಅರಸು ರಸ್ತೆ, ಕೆ.ಜಿ. ಕೊಪ್ಪಲು, ಮೈಸೂರು.
9980623130, 8296366894

ತಕ್ಷಣ ಬೇಕಾಗಿದ್ದಾರೆ
ಟಿ.ನರಸೀಪುರ ರಸ್ತೆ, ಚಿಕ್ಕಳ್ಳಿ ಹಾಗೂ ಮೈಸೂರು ಸಿಟಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಸೆಕ್ಯೂರಿಟಿ ಗಾರ್ಡ್‌ಗಳು ಹಾಗೂ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಇಎಸ್‌ಐ & ಪಿಎಫ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
Mob: 8971367078

ಬೇಕಾಗಿದ್ದಾರೆ
ಆಫೀಸ್ ಸ್ಟಾಫ್, ಕಂಪ್ಯೂಟರ್ ಆಪರೇಟರ್, ಡೆಲಿವರಿ ಬಾಯ್ಸ್ ಯಶಸ್ವಿನಿ ಭಾರತ್ ಗ್ಯಾಸ್ ಡಿಸ್ಟ್ರಿಬ್ಯೂಟರ್‌ಗಳು, #501, 2ನೇ ಸ್ಟೇಜ್, ರಾಜೀವ್ ನಗರ, ಮೈಸೂರು.
Mob: 73378 11144

House for Rent
3 BHK Duplex house in SBM Layout, Bogadi, Mysuru. Rs. 35000 / Month (Negotiable).
Mob: 9945251143

ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ, ಹೂಟಗಳ್ಳಿ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶಗಳಿಗೆ ಅಭ್ಯರ್ಥಿಗಳು ಬೇಕಾಗಿದ್ದಾರೆ ವಿದ್ಯಾ ಅರ್ಹತೆ, Diploma Mech. ITI, 8th to 2nd PUC ವರೆಗೆ. ಊಟ, ವಸತಿ, ವಾಹನ ಸೌಲಭ್ಯ ESI, PF ಸೌಲಭ್ಯ ಸಂಬಳ 11,500 ರಿಂದ 20,000 ಇರುತ್ತದೆ.
8951869646 / 9902645646

FOR SALE
1. 20x30 Old Houses @ Kuvempunagar, RK Nagar
2. 20x30 New Duplex House Near Utthanahalli, MUDA Approved
3. 30x40, 40x60@ Srinagar, Shardha Layout, JP Nagar
4. 30x40 Sites Near RT Nagar BSNL Layout @ Just 22 Lakhs

Newly Constructing Apartments. Commercial Properties Available.
PRAKRUTHI PROPERTIES
95386 90359, 90359 90359

ನಿವೇಶನ ಮಾರಾಟಕ್ಕಿದೆ
30x40 ಪೂರ್ವ, MUDA ಯು.ಬಿ. ಸಿಟಿ, ಬೋಗಾದಿ ಪಟ್ಟಣ ಪಂಚಾಯಿತಿ ಹಿಂಭಾಗ, ವಿಜಯನಗರ 4ನೇ ಹಂತ.
Call: 8660726140

ವರುಣ, ಸುತ್ತೂರು ರೋಡ್
ಸೈಟ್ ಸೇಲ್, ದಂಡಿಕೆರೆ ಪಕ್ಕ. ಕ್ಯಾಲಿಬರ್ ಪ್ರಾಪರ್ಟೀಸ್ ಹಿಂಭಾಗ ಬರುತ್ತದೆ. ಆದಿಶಕ್ತಿ ಲೇಔಟ್.
Mob: 9591408308

ಲೇಡಿ ಸ್ಟಾಫ್ ಬೇಕಾಗಿದ್ದಾರೆ (2nd PUC)
ಸಂಪರ್ಕಿಸಿ:
ಮೂನ್ ವಾಲ್ ಪೇಪರ್ಸ್
ಇರ್ವಿನ್ ರೋಡ್, ಮೈಸೂರು
Mob: 9945256241

SITE FOR SALE
48x64 E/F
Near Rainbow Public School, Bogadi Road.
Mob: 8050821108

SITES FOR SALE
1) Nithyananada Sagara 40x60 W/F Phase-1
2) Vijayanagar 4th Stage, 2nd Phase.
Mob: 8050821108

ಈ ತಕ್ಷಣ ಬೇಕಾಗಿದ್ದಾರೆ
ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು, ವೆಲ್ಡರ್‌ಗಳು ಡ್ರೈವರ್ Com ಮಾರ್ಕೆಟಿಂಗ್ ಮತ್ತು ಟೈಲರುಗಳು, ಹೆಲ್ಪರುಗಳು ಹಾಗೂ CNC ಮೆಷಿನ್ ಆಪರೇಟರುಗಳು ಬೇಕಾಗಿದ್ದಾರೆ.
8105249880, 7795285485

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಮತ್ತು ಕೆ.ಜಿ.ಕೊಪ್ಪಲ್ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಮತ್ತು TT ಡ್ರೈವರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು ಸಂಬಳ : 21000+ W/o (8 hrs) ಊಟ ತಿಂಡಿ ಸೌಲಭ್ಯವಿರುತ್ತದೆ.
9880727819, 9620667819

ತಕ್ಷಣ ಬೇಕಾಗಿದ್ದಾರೆ
(Consultancy ಅಲ್ಲ) ಮೈಸೂರಿನ BMC ಕಂಪನಿಯಲ್ಲಿ ಖಾಲಿಯಿರುವ ಪರ್ಮನೆಂಟ್ ಹುದ್ದೆಳಿಗೆ Freshers =169, Experience = 63 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC, PUC, ITI, Diploma any Degree etc. ವಯೋಮಿತಿ : 18-32 Years, ತಿಂಗಳಿಗೆ : 20,000–25000 (ಉಚಿತ ಊಟ + ವಸತಿ + Promotion) ದಯಾನ :
7349699460, 7406821955

ಬೇಕಾಗಿದ್ದಾರೆ
ಮೈಸೂರಿನ ಬಂಡಿಪಾಳ್ಯ (ನಂಜನಗೂಡು ರಸ್ತೆ)ಯಲ್ಲಿ ಗೋಡೋನ್ ನೋಡಿಕೊಳ್ಳಲು, ದ್ವಿಚಕ್ರ ವಾಹನ ಉಳ್ಳ ವ್ಯಕ್ತಿ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ
Ph: 9739816440

ಬೇಕಾಗಿದ್ದಾರೆ
ಬೇಕರಿಯೊಂದರಲ್ಲಿ ಸೇಲ್ಸ್ ಮಾಡಲು ಇಚ್ಛೆಯುಳ್ಳ ಮಹಿಳೆಯರು ಬೇಕಾಗಿದ್ದಾರೆ ಸಂಪರ್ಕಿಸಿ, ಕೆಲಸದ ವೇಳೆ : 6pm to 9pm ಕರ್ನಾಟಕ ಬ್ಯಾಂಕ ಹತ್ತಿರ, ನಜರ್‌ಬಾದ್
Ph: 9739816440

20x30 House For Sale
* 20x30 West facing house for sale at Vijayanagar 4th Stage, 3rd Phase. * 40x50 West facing site for sale at Teachers Layout, Off Rajkumar Road
Contact: Vishwanath Gowda
Mob: 9590911111

OLD NEWS PAPER WE BY FOR RS.15/-
ನಿಮ್ಮಲ್ಲಿರುವ ಹಳೆಯ ನ್ಯೂಸ್ ಪೇಪರ್‌ನ್ನು ನಾವು Rs.15/ kg ಗೆ ತೆಗೆದುಕೊಳ್ಳುತ್ತೇವೆ.
Door Service
Call: 9972098064

ಹೊಸಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ.,
ಹೊಸಹುಂಡಿ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು.
ಕ್ರಸಂ : ಸಿಆರ್.41/... ನೋಂದಣಿ : 42826 : 2012-13 ದಿನಾಂಕ : 22-11-2012
ಪ್ರಕಟಣೆ
ದಿನಾಂಕ: 16–09–2025ರ ಮಂಗಳವಾರ ಬೆಳಿಗ್ಗೆ 10.30ಗಂಟೆಗೆ ಸಂಘದ ಆವರಣದಲ್ಲಿ ಹೊಸಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು ಆಯೋಜಿಸಲಾಗಿದೆ. ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ರವಾನಿಸಲಾಗಿದ್ದು ಅನಿವಾರ್ಯ ಕಾರಣದಿಂದ ಸ್ವೀಕೃತವಾಗದಿದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ಸದರಿ ಸಭೆಗೆ ಸದಸ್ಯರು ಹಾಜರಾಗಿ ಸಭೆಯನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಕೋರಿದೆ.
ಸಹಿ/– ಸಂತೋಷ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ

LOST
I, Harish Sadhuram Sharoff., son of Sri. Sadhuram Sharoff, residing at No.182/A, New Layout, Indira Nagar, Ittigegudu, Mysuru-570010, had lost the CITB Allotment Letter, Possession Certificate, MCC Khatha Copy, Ledger Extract, and Other related Original Documents in respect of Site No. 182, situated at Ittigegudu, Nazarbad Mohalla, Mysuru. I have also registered an online Police Complaint on 11-09-2025, its Lost Report No. 1796395/2025. Finder will be rewarded. Please Contact: 9606744641

30X40 SITE FOR SALE
30x40 SITE FOR SALE, EAST FACING PARUSHURAM LAYOUT, NEAR BY VIDYAVIKAS COLLEGE. 25x55 SITE FOR SALE, EAST FACING VINAYAKA LAYOUT, VIJAYANAGAR 4TH STAGE, MYSORE.
CONTACT DINESH KUMAR
7022910042

CHANGE OF NAME
I Yashwanth Kumar S/o Mohan Kumar, residing at # 171, Ground floor, Near Nyayabele Angadi, Sahukarhundi Village, Martikyathanahalli, Mysore-570026, in My Passport Number T6563717 My Wife name has been wrongly mentioned as Manjula Hongeri Dyavaiyah, I do swear that my Wife correct Name is Manjula Hongere Dyavaiah Sworn in front of notary Umesh N.R. Dated 13-9-2025
Sd/- Yashwanth Kumar M

ಮನೆ ಮಾರಾಟಕ್ಕಿದೆ
ಮೈಸೂರು–ಕುಶಾಲನಗರ NH 275ಕ್ಕೆ ಹೊಂದಿಕೊಂಡಂತೆ ಇರುವ Herbal Paradise Layoutನಲ್ಲಿ 20x30ರಲ್ಲಿ ಕಟ್ಟಿರುವ G+2 ಮನೆ ಮಾರಾಟಕ್ಕಿದೆ. ಸ್ಥಳ : ಯಲಚನಹಳ್ಳಿ, ಇಲವಾಲ ಹೋಬಳಿ,
ಆಸಕ್ತರು ಸಂಪರ್ಕಿಸಿ
9964979899

HOUSE FOR SALE (30X40)
New 3 BHK Independent House, East Face Door @ Lalithadri Nagar Near Ring Road, Behind Indian Oil Petrol Bunk
MOBILE
9110696752, 9663452259

ಕಳೆದಿದೆ
ಶ್ರೀಮತಿ ಚಾಮುಂಡಮ್ಮ ಕೋಂ ಲೇಟ್ ಪಾಪಣ್ಣ ನಂ 1307, ಕೆ.ಆರ್. ಹಾಸ್ಪಿಟಲ್ ರೋಡ್, ಲಷ್ಕರ್ ಮೊಹಲ್ಲಾ, ಮೈಸೂರು, ನನ್ನ ತಾಯಿ ಶ್ರೀಮತಿ ಲೇಟ್ ಸುಬ್ಬಮ್ಮ ಕೋಂ ಲೇಟ್ ಜವರಪ್ಪರವರಿಗೆ ಸೇರಿದ ಖಾಲಿ ನಿವೇಶನದ ಸಂಖ್ಯೆ 3028 ಎರಡನೇ ಫೇಸ್, ನಾಲ್ಕನೆಯ ಹಂತ, ವಿಜಯನಗರ ಮೈಸೂರು, ಇದರ ಮೂಲ ದಾಖಲಾತಿಗಳು ವಿಜಯನಗರ ಎರಡನೇ ಹಂತ, ಯೂನಿಯನ್ ಬ್ಯಾಂಕ್ ಎ.ಟಿ.ಎಂ ಬಳಿ ಕಳೆದು ಹೋಗಿದೆ. ಸಿಕ್ಕಿದವರು ಸಂಪರ್ಕಿಸಿ.
9448705515, 9844105142

ಬೇಕಾಗಿದ್ದಾರೆ
ಮೈಸೂರಿನ Zoo ಹತ್ತಿರ ದಿನಸಿ ಡೋರ ಡಿಲಿವರಿ ಮಾಡಲು Ape ಆಟೋ ಓಡಿಸುವ ಮಹಿಳೆಯರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
9886664687

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

SITE FOR SALE
30x40 West Face Brahmanandasagar Phase 2, Opp St Joseph Central School, Ilwala
9972399939
Direct Owner

30x45 House For Sale
30x45 West facing North door 5 portions 2 BHK house for sale at Kuvempunagar, near Pooja Bakery.
Contact: MYSORE ESTATES Vishwanath Gowda
Mob: 9590911111

WANTED
Drivers & Bikers Two Wheeler & Four Wheeler
Salary 25000 to 30000
Ph. 8310381391, 7892156457

ಸಪ್ತ ಪದಿ
ಹಿಂದೂ ವಧು-ವರರ ಮಾಹಿತಿ ಕೇಂದ್ರ BE/MBA/M.TECH/MCA/MBBS/MD/ MS And Any Degree ಯ INDIA/USA/UK/GERMANY/CANADA/ AUSTRALIA/Bangalore/Mysore ನ ವಧು-ವರರ ಮಾಹಿತಿ/ನೋಂದಣಿಗೆ ಸಂಪರ್ಕಿಸಿ
9663199511

ಬೇಕಾಗಿದ್ದಾರೆ
ಜ್ಯೂಸ್, ಕಾಫಿ, ಟೀ ಪಾನಿಪೂರಿ ಗೋಲ್‌ಗಪ್ಪ, ಚಾಟ್ ಕೆಲಸಕ್ಕೆ ಬೇಕಾಗಿದ್ದಾರೆ
7975755792

ಲಿಂಗಾಯಿತ ವರ ಬೇಕಾಗಿದ್ದಾರೆ
30 ವರ್ಷದ ಒಂದು 5 ವರ್ಷದ ಗಂಡು ಮಗುವಿರುವ ವಿಚ್ಛೇದಿತ ಸುಂದರ ಹುಡುಗಿಗೆ ಉತ್ತಮ/ ಗುಣವಂತ/ ಹೃದಯವಂತ/ ಅನುಕೂಲಸ್ಥ ವರ ಬೇಕಾಗಿದೆ. ಆಸಕ್ತರು ಸಂಪರ್ಕಿಸಿ :
8660126710

WE ARE HIRING
Urgent Requirement for Architect and Interior Designer (Freshers /Experienced)
9980617254, 9886804783

ಬೇಕಾಗಿದ್ದಾರೆ
ತಕ್ಷಣ ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಸಂಬಳ 10000) + Incentive) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, Field Executives ಬೇಕಾಗಿದ್ದಾರೆ (ಸಂಬಳ 15000) ಸ್ಥಳ – ಮಂಡ್ಯ ಮತ್ತು ಹಾಸನ ಮತ್ತು ಮೈಸೂರು
8150005111

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕಿನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು/ ಹುಡುಗರು ಬೇಕಾಗಿದ್ದಾರೆ. ಸಂಬಳ : 15000/–
7899754149

2 ಸೈಟುಗಳು ಮಾರಾಟಕ್ಕಿವೆ
1) ಸೈಟ್ ಬೆಲೆ 333333 ರೂ ಮಾತ್ರ
2) ಸೈಟ್ ಬೆಲೆ 722222 ರೂ ಮಾತ್ರ
DTCP Approved Layout
ಇಲವಾಲದ ನಂತರ ಹುಣಸೂರು ರಸ್ತೆ
9448958332

ಬೇಕಾಗಿದ್ದಾರೆ
ಕೌಂಟರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಹಾಗೂ ಕುಕ್ ಅಸಿಸ್ಟೆಂಟ್ ಬೇಕಾಗಿದ್ದಾರೆ ಸ್ಥಳ: ಹೋಟೆಲ್ ಹನುಮಂತು ಸರಸ್ವತಿಪುರಂ, ಮೈಸೂರು
9738405038

ಕೆಲಸಕ್ಕೆ ಬೇಕಾಗಿದ್ದಾರೆ
ತುಮಕೂರಿನ ಪ್ರಸಿದ್ಧ MNC ಕಂಪನಿಗಳಿಗೆ 7TH, 9TH, 10TH, PUC,ANY DEGREE, M.COM, BE, B.COM, BBM, ಆದವರಿಗೆ PACKING, PICKING, Q/C CHECKING, DRIVERS, MACHIN OPERATORS, DATA ENTRY, TELECALLING, CASHIR, BILLING ADMIN, HR ಇತ್ಯಾದಿ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ. ಸಂಬಳ 18000/– ರಿಂದ 45000/– + ESI, PF, OT ನೊಂದಿಗೆ
9036559663, 9964977103

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ ಸೋಮವಾರ 15 ಸೆಪ್ಟೆಂಬರ್ 2025

ಸಹಕಾರಿ ಸಂಘಗಳಲ್ಲಿ ಠೇವಣಿ ಹೆಚ್ಚು ಮಾಡಬೇಕು




ಬೃಹತ್ ಆರೋಗ್ಯ ಶಿಬಿರ, ಸಸಿ ವಿತರಣಾ ಕಾರ್ಯಕ್ರಮವನ್ನು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಉದ್ಘಾಟಿಸಿದರು.

ಭಾರತೀನಗರ, ಸೆ.14– ಸಹಕಾರಿ ಸಂಘಗಳಲ್ಲಿ ಠೇವಣಿ ಹೆಚ್ಚು ಮಾಡಿದಾಗ ಮಾತ್ರ ಅವುಗಳ ಉಳಿವು ಸಾಧ್ಯ ಎಂದು ಬೆಂಗಳೂರು ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ ತಿಳಿಸಿದರು.

ಇಲ್ಲಿಯ ಸ್ಫೂರ್ತಿ ಪತ್ತಿನ ಸಹಕಾರ ಸಂಘ ಬೆಳ್ಳಿ ಹಬ್ಬದ ಅಂಗವಾಗಿ ಶನಿವಾರ ಪ್ರಶಾಂತ್ ಸ್ಕೂಲ್ ಆವರಣದಲ್ಲಿ ಏರ್ಪಡಿಸಲಾಗಿದ್ದ ಉಚಿತ ಆರೋಗ್ಯ ಶಿಬಿರ, ಸಸಿ ವಿತರಣಾ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದ ಅವರು, ಸಹಕಾರಿ ತತ್ವದಡಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಆರಂಭವಾದ ಸಹಕಾರಿ ಸಂಘಗಳು ಹಣ ಕಾಸಿನ ನೆರವನ್ನು ಸಾಲದ ಮೂಲಕ ಒದಗಿಸಿ ಜನರ ಕಷ್ಟಸುಖಗಳಿಗೆ ನೆರವಾಗಿದ್ದವು. ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಉದ್ಘಾಟಿಸಿ ಕ್ರಿ.ಶ 1905 ಇಸವಿಯಲ್ಲಿ ಸಹಕಾರಿ ಧುರೀಣ ಸಿದ್ದನಗೌಡ ಸಣ್ಣರಾಮೇಗೌಡ ಪಾಟೀಲ್ ಸಹಕಾರಿ ತತ್ವಕ್ಕೆ ಮುನ್ನುಡಿ ಬರೆದರು. ನಂತರ ಸಹಕಾರಿ ಸಂಘಗಳ ಸ್ಥಾಪನೆ ರಾಜ್ಯಾದ್ಯಂತ ವಿಸ್ತರಣೆಗೊಂಡಿತ್ತೆಂದು ಹೇಳಿದರು. ಕೊಮ್ಮೇರಹಳ್ಳಿ ವಿಶ್ವ ಮಾನವ ಕ್ಷೇತ್ರದ ಕೀರ್ತಿಶೇಷ ಸ್ವಾಮೀಜಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದರು. ಸ್ಮರಣ ಸಂಚಿಕೆ ಸಂಪಾದಕರಾದ ಎಂ. ಮಾಯಪ್ಪ, ಬಿ.ಎಸ್.ಬೋರೇಗೌಡ, ಚಂದ್ರಶೇಖರ್, ಪುಟ್ಟರಾಮರಾಜೇ ಅರಸ್, ಚಿಕ್ಕಹನುಮಯ್ಯ, ಶಿಬಿರದಲ್ಲಿ ಉಸ್ತುವಾರಿ ವಹಿಸಿದ್ದ ವೈದ್ಯರುಗಳನ್ನು ಅಭಿನಂದಿಸಲಾಯಿತು.

ಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗೀಗೌಡ, ನಿರ್ದೇಶಕ ಕಾಳೇಗೌಡ, ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ಚಿಕ್ಕತಿಮ್ಮೇಗೌಡ, ಕಾರ್ಯಾಧ್ಯಕ್ಷ ಮಾದನಾಯಕನಹಳ್ಳಿ ರಾಜಣ್ಣ, ರಾಜು ಮಾಜಿ ಉಪಾಧ್ಯಕ್ಷ ಬಿಳಿಯಪ್ಪ, ಮುಖಂಡರಾದ ಕೆಸ್ತೂರು ರಾಜಣ್ಣ, ಕೂಳಗೆರೆ ಶೇಖರ್, ಪ್ರಶಾಂತ್ ಸ್ಕೂಲ್ ಡಾ.ಜಯಪ್ರಕಾಶ್, ಭಾರ್ಗವಿ, ದಿವ್ಯಪ್ರಶಾಂತ್, ರಾಯಲ್ ಓಕ್ಸ್ ಶಾಲೆಯ ಮುಖ್ಯಸ್ಥ ಸುಮಂತ್, ರಾಜಣ್ಣ, ಅಣ್ಣೂರು ಗ್ರಾ.ಪಂ ಅಧ್ಯಕ್ಷೆ ಅಶ್ವಿನಿ ಆನಂದ್, ಸಮಾಜ ಸೇವಕ ಮಂಡ್ಯ ಮಲ್ಲೇಶ್, ಸ್ಫೂರ್ತಿ ಸಂಘದ ಅಧ್ಯಕ್ಷ ಕೆ.ಎಲ್.ಶಿವರಾಮು ಮತ್ತಿತರರು ಉಪಸ್ಥಿತರಿದ್ದರು.

ಖಾಸಗಿ ಶಾಲೆಗಳಲ್ಲಿ ಕನ್ನಡ ಕಡ್ಡಾಯವಾಗಲಿ



ಕೆಆರ್‌ಎಸ್ ಕಥನ ಪುಸ್ತಕವನ್ನು ಪುರುಷೋತ್ತಮ ಬಿಳಿಮಲೆ ಬಿಡುಗಡೆ ಮಾಡಿದರು

ಮಂಡ್ಯ, ಸೆ.14– ಮಾತೃ ಭಾಷೆ ಬಳಸುವ ವಿದ್ಯಾರ್ಥಿಗಳ ವಿರುದ್ಧ ಬೆಂಗಳೂರಿನ ಕೆಲ ಖಾಸಗಿ ಶಾಲೆಗಳಲ್ಲಿ ದಂಡ ವಿಧಿಸುತ್ತಿರುವುದು ಆತಂಕಕಾರಿ ವಿಚಾರವಾಗಿದೆ. ಇದರ ವಿರುದ್ಧ ಸರ್ಕಾರಗಳು ಎಷ್ಟೇ ಕಾನೂನು ಗಳನ್ನು ತಂದರೂ ಏನು ಪ್ರಯೋಜನವಿಲ್ಲ. ಬದಲಾಗಿ ಖಾಸಗಿ ಶಾಲೆಗಳ ಮುಖ್ಯಸ್ಥರೇ ಕನ್ನಡವನ್ನು ಕಡ್ಡಾಯವಾಗಿ ಬಳಕೆ ಮಾಡಬೇಕೆಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟಿದ್ದಾರೆ.

ನಗರದ ಕರ್ನಾಟಕ ಸಂಘದ ಕೆ.ವಿ. ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪತ್ರಕರ್ತ ಗಣಂಗೂರು ನಂಜೇಗೌಡರ ಕೆಆರ್‌ಎಸ್ ಕಥನ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ನಾಗರೀಕ ಸಮಾಜ ಸ್ವಯಂಪ್ರೇರಿತವಾಗಿ ಕನ್ನಡ ಉಳಿಸಲು ಮುಂದಾಗಿಲ್ಲವೆಂದರೆ ಭಾಷೆ ರಾಜ್ಯದಲ್ಲಿ ಬೆಳೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಸಾಹಿತಿ ನಂಜೇಗೌಡ ಉತ್ತಮ ಪುಸ್ತಕವನ್ನು ಬರೆದಿದ್ದಾರೆ. ಕೆಆರ್‌ಎಸ್‌ನ ನೀರು ಬಳಸುವವರು ಅದರ ಚರಿತ್ರೆಯನ್ನು ತಿಳಿದುಕೊಂಡಿರಬೇಕು. ಜೊತೆಗೆ ಜಲ ಸಂಕಷ್ಟದ ಬಗ್ಗೆ ಇಂದಿನ ಪೀಳಿಗೆಗೆ ಅರಿವು ಮೂಡಿಸುವ ಕೆಲಸಗಳಾಗಬೇಕು. ಇಲ್ಲದ್ದರೆ ಭವಿಷ್ಯದಲ್ಲಿ ನಮ್ಮ ಪೀಳಿಗೆ ನೀರಿಗಾಗಿ ಯುದ್ಧ ಮಾಡಿದರೂ ಅಚ್ಚರಿ ಇಲ್ಲ ಎಂದು ಎಚ್ಚರಿಸಿದರು.

ಹಿಂದಿನಿಂದಲೂ ಕನ್ನಂಬಾಡಿ ಅಣೆಕಟ್ಟೆ ಮತ್ತು ಈ ಭಾಗದ ರೈತರೊಂದಿಗೆ ಭಾವನಾತ್ಮಕ ಸಂಬಂಧವಿದೆ. ಅದಕ್ಕಾಗಿ ಗ್ರಾಮೀಣ ಜನರು ಈಗಲೂ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್ ಎಂ.ವಿಶ್ವೇಶ್ವರಯ್ಯ ಅವರನ್ನು ಪೂಜ್ಯಭಾವದಿಂದ ನೋಡುತ್ತಾರೆ ಎಂದು ಕಾರ್ಯಕ್ರಮ ಉದ್ಘಾಟಿಸಿದ ಹಿರಿಯ ಸಾಹಿತಿ ತೈಲೂರು ವೆಂಕಟಕೃಷ್ಣ, ತಿಳಿಸಿದರು. ಹಿಂದೆ ಕೆಆರ್‌ಎಸ್ ಅಣೆಕಟ್ಟೆಯ ನೀರು ರೈತರಿಗೆ ಸಮೃದ್ಧವಾಗಿ ಸಿಗುತ್ತಿದ್ದ ಪರಿಣಾಮ ಕಬ್ಬು ಬೆಳೆದ ರೈತ ಚೀಲದಲ್ಲಿ ಹಣವನ್ನು ತುಂಬಿ ಕೊಂಡು ಹೋಗುತ್ತಿದ್ದ. ಆದರೆ ಈಗ ಅಂತಹ ಪರಿಸ್ಥಿತಿಯೇ ಇಲ್ಲ. ಕೆಆರ್‌ಎಸ್‌ನ ನೀರು ಇಡೀ ಜಿಲ್ಲೆ ತಲುಪುತ್ತಿಲ್ಲ. ಕೆಲವೇ ಭಾಗಕ್ಕಷ್ಟೇ ಸೀಮಿತವಾಗಿದೆ. ಅಲ್ಲೂ ಸಹ ಡ್ಯಾಂ ನೀರನ್ನೇ ನಂಬಿ ಬೆಳೆ ಬೆಳೆಯಲು ಆಗುತ್ತಿಲ್ಲ. ಹೆಚ್ಚುವರಿಯಾಗಿ ಮಳೆ ಅಥವಾ ಇನ್ನಿತರ ಕೃತಕ ನೀರನ್ನು ಬಳಸಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ವೇದಿಕೆಯಲ್ಲಿ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡ, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶಗೌಡ, ಉಪಸ್ಥಿತರಿದ್ದರು.

ಅಕ್ಕಿಹೆಬ್ಬಾಳು ಗ್ರಾಮದಲ್ಲಿ ವಿಷ್ಣುವರ್ಧನ್ ಪುತ್ಥಳಿ ಅನಾವರಣ



ವಿಷ್ಣುವರ್ಧನ್ ಪುತ್ಥಳಿಯನ್ನು ಶಾಸಕ ಹೆಚ್.ಟಿ.ಮಂಜು ಅನಾವರಣ ಮಾಡಿದರು.

ಕೆಆರ್‌ಪೇಟೆ, ಸೆ.14– ತಾಲೂಕು ವಿಷ್ಣುಸೇನಾ ಸಮಿತಿಯು ಅಕ್ಕಿಹೆಬ್ಬಾಳು ಗ್ರಾಮದಲ್ಲಿ ಪ್ರತಿಷ್ಠಾಪಿಸಿರುವ ಡಾ.ವಿಷ್ಣುವರ್ಧನ್ ಪುತ್ಥಳಿಯನ್ನು ಶಾಸಕ ಹೆಚ್.ಟಿ.ಮಂಜು ಅನಾವರಣ ಮಾಡಿದರು.

ಕನ್ನಡ, ತೆಲುಗು, ತಮಿಳು, ಹಿಂದಿ, ಮಲಯಾಳಂ ಸೇರಿದಂತೆ ವಿವಿಧ ಭಾಷೆಗಳಲ್ಲಿ ಸುಮಾರು 220ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸುವ ಮೂಲಕ ಸದಭಿರುಚಿ ಹಾಗೂ ಇಡೀ ಕುಟುಂಬ ಕುಳಿತು ನೋಡುವಂತಹ ಅತ್ಯುತ್ತಮ ಚಿತ್ರಗಳನ್ನು ನೀಡಿದ ಕೀರ್ತಿ ವಿಷ್ಣುವರ್ಧನ್ ಅವರಿಗೆ ಸಲ್ಲುತ್ತದೆ. ಇಂತಹ ಶ್ರೇಷ್ಠ ಕಲಾವಿದನಿಗೆ ರಾಜ್ಯ ಸರ್ಕಾರವು ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆ ಮಾಡಿರುವುದು ಶ್ಲಾಘನೀಯವಾಗಿದೆ. ಈ ದಿಸೆಯಲ್ಲಿ ವಿಷ್ಣು ಸೇನಾ ಸಮಿತಿಯು 16 ವರ್ಷಗಳಿಂದ ನಿರಂತರವಾಗಿ ಜನ್ಮದಿನಾಚರಣೆಯನ್ನು ಆಚರಿಸಿಕೊಂಡು ಬರುತ್ತಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ವಿಷ್ಣುವರ್ಧನ್ ಉದ್ಯಾನವನ ನಿರ್ಮಿಸಲು ಸ್ಥಳಾವಕಾಶ ಕಲ್ಪಿಸುವಂತೆ ಹಾಗೂ ಆಸ್ಪತ್ರೆಯ ವೃತ್ತಕ್ಕೆ ವಿಷ್ಣುವರ್ದನ್ ವೃತ್ತ ಎಂದು ನಾಮಕರಣ ಮಾಡಲು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದರು.

ತಾಲೂಕು ಪಿ.ಎಲ್.ಡಿ. ಬ್ಯಾಂಕ್ ಮಾಜಿ ನಿರ್ದೇಶಕ ಎ.ಆರ್.ರಘು, ಗ್ರಾಮ ಪಂಚಾಯಿತಿ ಅಧ್ಯಕ್ಷ ಹರೀಶ್, ದಿಶಾ ಸಮಿತಿ ಸದಸ್ಯ ನರಸನಾಯಕ್, ಗ್ರಾ.ಪಂ.ಮಾಜಿ ಉಪಾಧ್ಯಕ್ಷ ಜಮೀರ್ ಅಹಮದ್, ಅಕ್ಕಿಹೆಬ್ಬಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ವಾಸು.ಆರ್.ಗೌಡ, ವಿಷ್ಣು ಸೇನಾ ಸಮಿತಿ ತಾಲೂಕು ಅಧ್ಯಕ್ಷ ಜಯಶಂಕರ್, ವಿಷ್ಣು ಸೇನಾ ಸಮಿತಿ ಅಕ್ಕಿಹೆಬ್ಬಾಳು ಘಟಕದ ಅಧ್ಯಕ್ಷ ರಾಜು, ಪ್ರಧಾನ ಕಾರ್ಯದರ್ಶಿ ಪ್ರದೀಪ್, ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಗರ್ಭಿಣಿಯರಿಗೆ ಪೌಷ್ಠಿಕ ಆಹಾರ ನೀಡಿ



ಕಾರ್ಯಕ್ರಮದಲ್ಲಿ ಗರ್ಭಿಣಿಯರಿಗೆ ಸೀಮಂತ ಶಾಸ್ತ್ರ ನಡೆಸಲಾಯಿತು.

ಪಾಂಡವಪುರ, ಸೆ.14–ಮಕ್ಕಳು, ಗರ್ಭಿಣಿ, ಬಾಣಂತಿಯರಿಗೆ ಪೌಷ್ಠಿಕಾಂಶದ ಆಹಾರ ನೀಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ಪಟ್ಟಣದ ಕಸಾಪ ಭವನದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣಾಭಿವೃದ್ಧಿ ಇಲಾಖೆ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಹಾಗೂ ಬನ್ನಂಗಾಡಿ, ಅರಳಕುಪ್ಪೆ, ಕೆರೆತೊಣ್ಣೂರು, ಚಿಕ್ಕಬ್ಯಾಡರಹಳ್ಳಿ ವೃತ್ತದ ಅಂಗನವಾಡಿ ಕಾರ್ಯಕರ್ತೆಯರು ಹಮ್ಮಿಕೊಂಡಿದ್ದ ಪೋಷಣ್ ಅಭಿಯಾನ ಮಾಸಾಚರಣೆ, ಬಾಲ್ಯವಿವಾಹ ನಿಷೇಧ ಕಾಯ್ದೆ, ಹೆಣ್ಣುಭ್ರೂಣ ಹತ್ಯೆ ತಡೆ, ಭ್ರೂಣ ಲಿಂಗ ಪತ್ತೆ ನಿಷೇಧ ಜಾಗೃತಿ ಅಭಿಯಾನವನ್ನು ಉದ್ಘಾಟಿಸಿ, ಪ್ರತಿಯೊಬ್ಬರಿಗೂ ಪೌಷ್ಠಿಕಾಂಶ ಆಹಾರ ನೀಡಬೇಕು, ಜತೆಗೆ ಪೌಷ್ಠಿಕಾಂಶದ ಆಹಾರ ಸೇವನೆ ಬಗ್ಗೆ ಅರಿವು ಮೂಡಿ ಸಬೇಕು ಎಂದರು.

ಸಿಡಿಪಿಓ ಕೆ.ಆರ್.ಪೂರ್ಣಿಮಾ ಮಾತನಾಡಿ, ಬಾಲ್ಯ ವಿವಾಹ, ಹೆಣ್ಣು ಭ್ರೂಣ ಹತ್ಯೆಯ ಬಗ್ಗೆ ಪ್ರತಿಯೊಬ್ಬರಿಗೂ ಅರಿವು ಮೂಡಿಸಬೇಕು, ಬಾಲ್ಯ ವಿವಾಹ ಮಾಡಿಕೊಳ್ಳುವ ಹೆಣ್ಣುಮಕ್ಕಳು ಮುಂದೆ ಸಾಕಷ್ಟು ಆರೋಗ್ಯ ಸಮಸ್ಯೆಗಳನ್ನು ಎದುರಿಸಲಿದ್ದಾರೆ, ಹಾಗಾಗಿ ಬಾಲ್ಯ ವಿವಾಹದಿಂದ ದೂರವಿರಬೇಕು ಎಂದು ತಿಳಿಸಿದರು. ಪೌಷ್ಠಿಕಾಂಶದ ಆಹಾರಗಳ ಬಗ್ಗೆ ಪ್ರಾತ್ಯಕ್ಷಿಕೆ ನೀಡಲಾಯಿತು. ಐದು ಮಂದಿ ಗರ್ಭಿಣಿಯರಿಗೆ ಫಲತಾಂಬೂಲ ನೀಡಿ ಸೀಮಂತ ಶಾಸ್ತ್ರ ಮಾಡಲಾಯಿತು, ಮಕ್ಕಳಿಗೆ ಪೌಷ್ಠಿಕ ಆಹಾರ ವಿತರಿಸಿದರು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಬಸವರೆಡ್ಡಪ್ಪ ರೋಣದ, ಪುರಸಭೆ ಅಧ್ಯಕ್ಷೆ ಜ್ಯೋತಿಲಕ್ಷ್ಮಿ, ಉಪಾಧ್ಯಕ್ಷ ಅಶೋಕ್, ಸದಸ್ಯ ಎಂ.ಗಿರೀಶ್, ಸಾಹಿತಿ ಚಂದ್ರಶೇಖರಯ್ಯ, ಸ್ಮಿತಪುಟ್ಟಣ್ಣಯ್ಯ, ಆರೋಗ್ಯ ಇಲಾಖೆ ಶಿವಮ್ಮ, ಮೇಲ್ವಿಚಾರಕಿಯರಾದ ಲಕ್ಷ್ಮಿ, ಜಕೀಯಬಾನು, ಪೋಷಣ್ ಸಂಯೋಜಕರಾದ ಅನುಷ, ಮೇರಿ, ಶೋಭಾ, ಅಂಬುಜ, ಶೀಲ, ರುಕ್ಮಣಿ, ಅಜೀಂಪ್ರೇಮ್‌ಜೀ ಫೌಂಡೇಷನ್ ಸಂಯೋಜಕರಾದ ಮಾರುತಿ, ತಿಪ್ಪೇಸ್, ರಾಧ ಸೇರಿದಂತೆ ಹಲವರು ಇದ್ದರು.

ಸೆ.17ರಂದು ಜನ ಸಂಪರ್ಕ ಸಭೆ

ಮಂಡ್ಯ, ಸೆ.14– ಮಂಡ್ಯ ವಿಭಾಗ ವ್ಯಾಪ್ತಿಯಲ್ಲಿರುವ ಮಂಡ್ಯ ಉಪ ವಿಭಾಗ, ಕೊತ್ತತ್ತಿ ಉಪ ವಿಭಾಗ ಮತ್ತು ಕೆರಗೋಡು ಉಪ–ವಿಭಾಗದ ವ್ಯಾಪ್ತಿಯ ವಿದ್ಯುತ್ ಸಮಸ್ಯೆಗಳ ಕುರಿತು ಚರ್ಚಿಸಲು ವಿದ್ಯುತ್ ಗ್ರಾಹಕರ ಕುಂದು ಕೊರತೆ ವಿಚಾರಣೆಯ ಜನ ಸಂಪರ್ಕ ಸಭೆಯನ್ನು ಮಂಡ್ಯ ವೃತ್ತದ ಇಂಜಿನಿಯರ್ ಅಧೀಕ್ಷಕರ ಅಧ್ಯಕ್ಷತೆಯಲ್ಲಿ ಸೆ.17ರ ಬೆಳಿಗ್ಗೆ 11 ಗಂಟೆಗೆ ವಿಭಾಗ ಕಚೇರಿ ಆವರಣದಲ್ಲಿ ಆಯೋಜಿಸಲಾಗಿದೆ. ಮಂಡ್ಯ ತಾಲೂಕು ವ್ಯಾಪ್ತಿಯಲ್ಲಿ ಬರುವ ಗ್ರಾಹಕರು / ಸಾರ್ವಜನಿಕರು ಈ ಸಭೆಯಲ್ಲಿ ಭಾಗವಹಿಸಲು ಚಾವಿಸನಿನಿ, ಕಾ ಮತ್ತು ಪಾ ವಿಭಾಗ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಶ್ರೀರಂಗಪಟ್ಟಣ ದಸರಾ ಲೋಗೊ ಬಿಡುಗಡೆ



ದಸರಾ ಲೋಗೊವನ್ನು ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಬಿಡುಗಡೆ ಮಾಡಿದರು.

ಮಂಡ್ಯ, ಸೆ.14–ಈ ಬಾರಿಯ ಶ್ರೀರಂಗಪಟ್ಟಣ ದಸರಾ ಕಾರ್ಯಕ್ರಮವು ಸೆ. 25ರಿಂದ 28ರವರೆಗೆ ಮೂರು ದಿನಗಳ ಕಾಲ ನಡೆಯಲಿದ್ದು, ಹಿರಿಯ ಚಲನಚಿತ್ರ ನಿರ್ದೇಶಕ ಹಾಗೂ ರಂಗಭೂಮಿ ಕಲಾವಿದ ಟಿ.ಎಸ್.ನಾಗಾಭರಣ ಉದ್ಘಾಟನೆ ಮಾಡಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ದಸರಾ ಲೋಗೊ ಬಿಡುಗಡೆ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಾರಿಯ ಕಾರ್ಯಕ್ರಮಗಳನ್ನು ಉತ್ತಮವಾಗಿ ಸಂಘಟಿಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದರು.

ಅಪರ ಪೊಲೀಸ್ ಮಹಾನಿರ್ದೇಶಕ ಅಧಿಕಾರಿ ತಿಮ್ಮಯ್ಯ ಅವರ ವರ್ಗಾವಣೆಗೂ ಗಣೇಶ ವಿಸರ್ಜನೆ ಸಮಯದಲ್ಲಿ ಉಂಟಾದ ಗಲಭೆಗೂ ಸಂಬಂಧವಿಲ್ಲ. ಆರು ತಿಂಗಳ ಹಿಂದೆಯೇ ಅವರ ಅವಧಿ ಮುಕ್ತಾಯಗೊಂಡಿತ್ತು ಸ್ವತಃ ನಾನೇ ಗೃಹ ಮಂತ್ರಿಗಳ ಜೊತೆ ಅವರನ್ನು ಮುಂದುವರಿಸಲು ಬೇಡಿಕೆ ಇಟ್ಟಿದ್ದೆ. ಅಧಿಕಾರಿಗಳ ವರ್ಗಾವಣೆ ಸಹಜ ಪ್ರಕ್ರಿಯೆಯಾದ್ದರಿಂದ ಅವರ ವರ್ಗಾವಣೆಯಾಗಿದೆಯಷ್ಟೆ ಎಂದರು.

ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ರವಿಕುಮಾರ್, ಡಿಸಿ ಡಾ.ಕುಮಾರ, ಜಿ.ಪಂ. ಸಿಇಓ ಕೆ.ಆರ್.ನಂದಿನಿ, ಎಡಿಸಿ ಶಿವಾನಂದ ಮೂರ್ತಿ ಇನ್ನಿತರರಿದ್ದರು.

ಎಸ್.ಎನ್.ನರಸಿಂಹಮೂರ್ತಿ ನಿಧನ




ಪಾಂಡವಪುರ: ಪಟ್ಟಣದ ನಿವಾಸಿ ಎಸ್.ಎನ್.ನರಸಿಂಹ ಮೂರ್ತಿ(82) ಅವರು ನಿಧನ ಹೊಂದಿದರು. ಕುಂತಿ ಬೆಟ್ಟದ ಐನೋರು ಎಂದೇ ಅವರು ಗುರುತಿಸಿಕೊಂಡಿದ್ದರು.

ಮೃತರು ಪತ್ನಿ, ಓರ್ವ ಪುತ್ರ, ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಪಟ್ಟಣದ ರುದ್ರಭೂಮಿಯಲ್ಲಿ ಜರುಗಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಒಂದನೇ ಪುಟದಿಂದ

ನಿಲ್ಲಿಸಲು ಯಾರಿಂದಲೂ ಸಾಧ್ಯವಿಲ್ಲ



ಮಾಡಲಾಗಿದೆ. ಪ್ರವಾಸೋದ್ಯಮದಲ್ಲಿ ಪ್ರಗತಿ ಸಾಧಿಸಲಾಗಿದೆ ಇತಿಹಾಸದಲ್ಲೇ ಎರಡು ವರ್ಷದ ಅವಧಿಯಲ್ಲಿ ಇಡೀ ರಾಜ್ಯದ ಇತಿಹಾಸದಲ್ಲೇ ಮಂಡ್ಯ ಜಿಲ್ಲೆಯ ಕಾಮಗಾರಿಗಳಿಗೆ 2 ಸಾವಿರ ಕೋಟಿ ರೂ. ಅನುದಾನ ನೀಡಲಾಗಿದೆ. ನಾನಾ ಕಾಮಗಾರಿಗಳಿಗೆ 1970 ಕೋಟಿ ರೂ. ಅನುದಾನ ಮಂಜೂರು ಮಾಡಲಾಗಿದೆ. ಇದು ಸುಳ್ಳಾದರೆ ಪ್ರತಿಪಕ್ಷದವರು ಪರಿಶೀಲಿಸಬಹುದು ಎಂದು ಹೇಳಿದರು.

ಕರ್ನಾಟಕದಲ್ಲಿವೆ 544 ಜಲಪಾತಗಳು: ಕಾವೇರಿ ನಮ್ಮೆಲ್ಲರ ಪುಣ್ಯ ಮಾತೆ. ಅನ್ನ, ಜನ್ಮ, ಬದುಕು ನೀಡಿದ್ದಾಳೆ. ಕೊಡಗಿನಿಂದ ಹರಿದು ಅರಬ್ಬಿ ಸಮುದ್ರದವರೆಗೂ ಎಲ್ಲರ ಬದುಕು, ಕುಡಿಯುವ ನೀರು, ವ್ಯವಸಾಯ, ವಿದ್ಯುತ್ ಉತ್ಪಾದನೆ, ಮೀನುಗಾರಿಕೆ ಸೇರಿದಂತೆ ನಾನಾ ರೀತಿಯಲ್ಲಿ ಸಹಾಯ ಮಾಡುತ್ತಿದ್ದಾಳೆ. ಗಗನಚುಕ್ಕಿಯಲ್ಲಿ 300 ಅಡಿ ಎತ್ತರದಿಂದ ಕೆಳಕ್ಕೆ ನೀರು ಬೀಳುತ್ತಿದೆ. ರಾಜ್ಯದಲ್ಲಿ 544 ಚಿಕ್ಕ ಹಾಗೂ ದೊಡ್ಡ ಜಲಪಾತಗಳಿವೆ. ಶಿವಮೊಗ್ಗದಲ್ಲಿ ಬಹಳ ಎತ್ತರದ ಜಲಪಾತ ಇದೆ. ಪ್ರಕೃತಿಯ ವೈಭವ ಕಣ್ತುಂಬಿಕೊಂಡು ಪೂಜಿಸಿದರೆ ಸಂಸ್ಕೃತಿಯಾಗಲಿದೆ ಡಿಕೆಶಿ ಎಂದರು.

ಮೊದಲ ವಿದ್ಯುತ್ ದೀಪ ಬೆಳಗಿದ್ದು ಇಲ್ಲೇ: ಮೇಕೆದಾಟು ಯೋಜನೆ ಜಾರಿಗೆಗಾಗಿ ಹೋರಾಟ ಮಾಡಿದ್ದೇವೆ. ಇಡೀ ದೇಶದಲ್ಲಿ ದೊಡ್ಡ ಜಲಪಾತದ ಜಾಗವಾಗಿ ಗಗನಚುಕ್ಕಿ ಗುರುತಿಸಿಕೊಳ್ಳಬೇಕು. 1904ರಲ್ಲಿ ಇಲ್ಲಿಂದಲೇ ಕೆಜಿಎಫ್‌ಗೆ ವಿದ್ಯುತ್‌ಶಕ್ತಿ ತೆಗೆದುಕೊಂಡು ಹೋಗಲು ವಿದ್ಯುತ್ ಉತ್ಪಾದನೆ ಪ್ರಾರಂಭ ಮಾಡಲಾಯಿತು. ಮೊದಲ ದೀಪ ಇಲ್ಲಿಯೇ ಉರಿಯಿತು. ನಂತರ ಮೈಸೂರು, ಬೆಂಗಳೂರಿಗೂ ಬಂದಿತು. ಕರೆಂಟ್ ಇಲ್ಲದಿದ್ದರೆ ನಮ್ಮ ಬದುಕು ಏನಾಗುತ್ತಿತ್ತು? ಇಡೀ ಏಷ್ಯಾಗೆ ಕರೆಂಟ್ ಕೊಟ್ಟ ಪುಣ್ಯ ಭೂಮಿ ಇದು. ಅಲ್ಲಿಯವರೆಗೆ ಸಿಂಗಾಪುರ್, ಚೈನಾ, ದೆಹಲಿ, ಪಾಕಿಸ್ತಾನ, ಮಲೇಷ್ಯಾದಲ್ಲೂ ಸಹ ಇರಲಿಲ್ಲ ಎಂದು ಇತಿಹಾಸ ಮೆಲುಕು ಹಾಕಿದರು. ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಮಾತನಾಡಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನೀರಾವರಿ ಸಚಿವರಾಗಿ ಕೆ.ಆರ್.ಎಸ್. ಡ್ಯಾಂ ಸೇರಿದಂತೆ ರಾಜ್ಯದ ಎಲ್ಲಾ ಡ್ಯಾಂಗಳ ಸಂರಕ್ಷಣೆ ಹಾಗೂ ನೀರಿಗೆ ಅಭಾವವಾಗದಂತೆ ನೋಡಿಕೊಳ್ಳುತ್ತಿದ್ದು, ಬೆಂಗಳೂರು ನಗರಾಭಿವೃದ್ಧಿ ಸಚಿವರಾಗಿಯೂ ಬೆಂಗಳೂರು ಅಭಿವೃದ್ಧಿಗೆ ಕಂಕಣ ಬದ್ಧರಾಗಿದ್ದಾರೆ ಎಂದರು.

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಗಗನಚುಕ್ಕಿ ಉತ್ಸವ ಕೇವಲ ಉತ್ಸವವಾಗದೇ ಪ್ರವಾಸಿಗರ ಆಕರ್ಷಣೆಯಾಗಿದೆ. ಈ ಪ್ರವಾಸಿ ತಾಣವನ್ನು ಮತ್ತಷ್ಟು ಅಭಿವೃದ್ಧಿ ಮಾಡಬೇಕೆಂಬುದು ನನ್ನ ಗುರಿಯಾಗಿದೆ. ಮಳವಳ್ಳಿಯಲ್ಲಿ ಗ್ಯಾರಂಟಿ ಜೊತೆಗೆ ಅಭಿವೃದ್ಧಿ ಸಹ ಉತ್ತಮವಾಗುತ್ತಿದೆ ಎಂದು ಹೇಳಿದರು.

ವೇದಿಕೆಯಲ್ಲಿ ಶಾಸಕ ರವಿಕುಮಾರ್ ಗಣಿಗ, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ, ಶಿವಕುಮಾರ್, ಗ್ಯಾರಂಟಿ ಯೋಜನೆಗಳ ಜಿಲ್ಲಾ ಉಪಾಧ್ಯಕ್ಷ ಸ್ಟಾರ್ ಚಂದ್ರು (ವೆಂಕಟರಮಣೇಗೌಡ), ಪುರಸಭೆ ಅಧ್ಯಕ್ಷ ಪುಟ್ಟಸ್ವಾಮಿ, ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಕೆ.ಆರ್.ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಕಾವೇರಿ ನೀರಾವರಿ ನಿಗಮದ ಅಭಿಯಂತರ ಮಹೇಶ್, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದ ಮೂರ್ತಿ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಬೆಳಿಗ್ಗೆಯಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಂಜೆ ನಡೆದ ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್, ಸಂಗೀತ ನಿರ್ದೇಶಕ ಗುರುಕಿರಣ್, ನಟಿಯರಾದ ಹರ್ಷಿಕಾ ಪೂಣಚ್ಚ, ಭಾವನಾ ರಾವ್ ಹಾಗೂ ಖ್ಯಾತ ನಟ ರವಿಚಂದ್ರನ್ ಅವರ ಕಾರ್ಯಕ್ರಮ ಆಕರ್ಷಣೀಯವಾಗಿತ್ತು. ಒಟ್ಟಾರೆ ಎರಡು ದಿನಗಳ ವೈಭವೋಪೇರಿತ ಜಲಪಾತೋತ್ಸವಕ್ಕೆ ತೆರೆ ಬಿದ್ದಿತು.

ವರ್ಣರಂಜಿತ ಯುವ ದಸರಾ

ಮೆರವಣಿಗೆ ಸಾಗುವ ವೇಳೆ ದಸರಾ ಉಪ ಸಮಿತಿ ಪದಾಧಿಕಾರಿಗಳು ಹೋಗಲು ಅವಕಾಶ ನಿರ್ಬಂಧಿಸಲಾಗಿದೆ. ಯಾವುದೇ ರೀತಿಯ ನೂಕು ನುಗ್ಗಲು ಇಲ್ಲದೆ ವ್ಯವಸ್ಥಿತವಾಗಿ ಜಂಬೂ ಸವಾರಿ ಮೆರವಣಿಗೆ ಹೋಗಲು ಎಲ್ಲಾ ರೀತಿಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ ಎಂದರು. ಕೆಆರ್.ಸರ್ಕಲ್ ಬಳಿಯ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಸೇರಿದಂತೆ ಇತರೆ ಅಪಾಯಕಾರಿ ಕಟ್ಟಡಗಳ ಮೇಲೆ ನಿಂತು ಜಂಬೂ ಸವಾರಿ ವೀಕ್ಷಣೆ ಮಾಡದಂತೆ ಎಲ್ಲಾ ರೀತಿಯ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಅಪಾಯಕಾರಿ ಕಟ್ಟಡಗಳ ಪ್ರವೇಶ ದ್ವಾರವನ್ನೆ ಮುಚ್ಚಲಾಗುವುದು ಎಂದು ಹೇಳಿದರು. ಸಂವಿಧಾನದ ಆಶಯದಂತೆ ದಸರಾ ತನ್ನದೇ ಆದ ಸಾಂಸ್ಕೃತಿಕ ಹಾಗೂ ಪಾರಂಪರಿಕ ವೈಭವವನ್ನು ಹೊಂದಿದೆ. ಭೂತಕಾಲ, ವರ್ತಮಾನ ಹಾಗೂ ಭವಿಷ್ಯತ್ತಿನಲ್ಲೂ ಕೂಡ ದಸರಾ ತನ್ನ ವೈಭವ ಕಾಪಾಡಿಕೊಳ್ಳಲಿದೆ. ಈ ತನಕ ನಡೆದ ದಸರಾದಲ್ಲಿ ಯಾವುದೇ ತಂಟೆ, ತಕರಾರು ಇಲ್ಲ. ಈ ಬಾರಿ ಕೂಡ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದೆ ಸೂಸೂತ್ರವಾಗಿ ದಸರಾ ನಡೆಯಲಿದೆ ಎಂದು ಡಾ.ಮಹದೇವಪ್ಪ ಅವರು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಈ ಬಾರಿಯ ದಸರಾ ಥೀಮ್

ಈ ಮೂಲಕ ದೇಶ ವಿದೇಶದ ಜನರಿಗೆ ದಸರಾ ಮಹೋತ್ಸವದ ಸಾಂಸ್ಕೃತಿಕ ಪರಂಪರೆಯನ್ನು ಅನಾವರಣಗೊಳಿಸಲಾಗುವುದು ಎಂದು ಡಾ.ಮಹದೇವಪ್ಪ ತಿಳಿಸಿದರು. ದಸರಾ ಕಾರ್ಯಕ್ರಮದಲ್ಲಿ ಎಲ್ಲರನ್ನು ಸಂಘಟಿತಗೊಳಿಸಿ ಆಚರಣೆ ಮಾಡುವ ಸಂಬಂಧ ಉಪ ಸಮಿತಿ ಗಳನ್ನು ರಚನೆ ಮಾಡಲಾಗುವುದು. ಅಧಿಕಾರರೇತರ ಉಪ ಸಮಿತಿಗಳ ಸದಸ್ಯರನ್ನು ಶೀಘ್ರವೇ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು. ಸೆಪ್ಟಂಬರ್ 22 ರಿಂದ ಅಕ್ಟೋಬರ್ 2 ರವರೆಗೆ ದಸರಾ ನಡೆಯಲಿದ್ದು, ಸೆಪ್ಟಂಬರ್ 22 ರಂದು ಬೆಳಿಗ್ಗೆ ಚಾಮುಂಡಿಬೆಟ್ಟದಲ್ಲಿ ದಸರಾ ಉದ್ಘಾಟನೆ ನೆರವೇರಲಿದೆ. ಅಕ್ಟೋಬರ್ 2 ರಂದು ಮಧ್ಯಾಹ್ನ 1.10 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಂದಿ ಧ್ವಜ ಪೂಜೆ ನೆರವೇರಿಸು ವರು. ತರುವಾಯ 4.30 ಗಂಟೆಗೆ ಜಂಬೂ ಸವಾರಿ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು.

ದಸರಾ ಆಹಾರ ಮೇಳದಲ್ಲಿ ಶುಚಿ, ರುಚಿಯನ್ನು ಕಾಪಾಡಿಕೊಳ್ಳಲಾಗುವುದು. ಸೀಮಿತ ಅಂಗಡಿಗಳಿಗೆ ಅವಕಾಶ ಕಲ್ಪಿಸಲಾಗುವುದು. ಇತರೆ ಜಿಲ್ಲೆಯ ತಿಂಡಿ ತಿನಿಸುಗಳ ಅಂಗಡಿಗಳಿಗೆ ಅವಕಾಶ ನೀಡಲಾಗುವುದು ಎಂದು ಡಾ.ಮಹದೇವಪ್ಪ ವಿವರಿಸಿದರು.

7 ಕೋಟಿ ವೆಚ್ಚ: 2.57 ಲಕ್ಷ ಯೂನಿಟ್ ಬಳಕೆ

80 ಪ್ರತಿಕೃತಿಗಳು ವರ್ಣರಂಜಿತವಾಗಿ ಬೆಳಗಲಿದೆ. ಈ ಬಾರಿ ಸಯ್ಯಾಜಿರಾವ್ ರಸ್ತೆಯಲ್ಲಿ ಹಸಿರು ಚಪ್ಪರ, ಚಾಮುಂಡಿಬೆಟ್ಟ ಹಾಗೂ ನಗರದಲ್ಲಿ ಸುಸ್ವಾಗತ, ವಿವಿಧ ಕಮಾನುಗಳು, ಸರ್ಕಾರಿ ಕಚೇರಿಗಳಲ್ಲಿ ದೀಪಲಂಕಾರ ಮಾಡಲಾಗುತ್ತಿದೆ.

ಸುಮಾರು 7 ಕೋಟಿ ವೆಚ್ಚದಲ್ಲಿ ಮೈಸೂರು ನಗರದಲ್ಲಿ ವಿದ್ಯುತ್ ದೀಪಲಂಕಾರ ಮಾಡಲಾಗುತ್ತಿದ್ದು, ದೀಪಲಂಕಾರಕ್ಕೆ 2,57,520 ಯೂನಿಟ್ ಬಳಕೆಯಾಗಲಿದೆ.

ಯಾವುದೇ ರೀತಿಯ ವಿದ್ಯುತ್ ಅವಘಡ ಸಂಭವಿಸದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ. ಆದರೂ ಜನರು ವಿದ್ಯುತ್ ದೀಪಲಂಕಾರದ ಕಂಬಗಳಿಂದ ಅಂತರ ಕಾಯ್ದುಕೊಳ್ಳಬೇಕು, ದೀಪಲಂಕಾರದ ಹತ್ತಿರ ಹೋಗಿ ವಿಡಿಯೋ ಹಾಗೂ ಫೋಟೋ ತೆಗೆಯಬಾರದು, ವಾಹನ ಸವಾರರು ವಿದ್ಯುತ್ ದೀಪಲಂಕಾರದ ಬಳಿ ಅಂತರ ಕಾಯ್ದುಕೊಳ್ಳಬೇಕು. ವಿದ್ಯುತ್ ದೀಪಾಲಂಕಾರ ಸಂಬಂಧಿತ ದೂರುಗಳಿಗೆ ಸಹಾಯವಾಣಿ 1912 ಸಂಪರ್ಕಿಸಬಹುದು ಎಂದು ಚೆಸ್ಕಾಂ ತಿಳಿಸಿದೆ.

ಜಿಲ್ಲಾಡಳಿತದಿಂದ ಸಾಂಪ್ರದಾಯಕ ಆಹ್ವಾನ

ಜಂಬೂ ಸವಾರಿ ವೀಕ್ಷಣೆಗೆ ಕಳೆದ ಬಾರಿ ಹೆಚ್ಚು ಆಸನಗಳ ವ್ಯವಸ್ಥೆ ಮಾಡಲಾಗಿತ್ತು. ಇದರಿಂದ ಬಹಳಷ್ಟು ಜನರು ಆನೆಗೆ ಅಂಬಾರಿ ಕಟ್ಟುವ ಸ್ಥಳದತ್ತ ದಾವಿಸಿದರು. ಈ ಸಮಸ್ಯೆ ಪರಿಹಾರ ಮಾಡಬೇಕು ಎಂದು ಸಲಹೆ ನೀಡಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಿದ್ದೇವೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವನಾಗಿ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವಂತೆ ಪ್ರಮೋದಾದೇವಿ ಒಡೆಯರ್ ಅವರಿಗೆ ನಾನು ಏಳೆಂಟು ಬಾರಿ ಸ್ವಾಗತ ಕೋರಿದ್ದೇನೆ. ಅವರು ಎಂದೂ ನಮಗೆ ತಕರಾರು ಮಾಡಿಲ್ಲ. ನಮ್ಮೊಡನೆ ಸಕರಾತ್ಮಕವಾಗಿ ಸ್ಪಂದಿಸಿದ್ದಾರೆ. ದಸರಾ ಕಾರ್ಯಕ್ರಮಗಳನ್ನು ಚೆನ್ನಾಗಿ ಮಾಡಿ ಎಂದು ಸಲಹೆ ನೀಡಿದ್ದಾರೆ ಎಂದು ಡಾ.ಮಹದೇವಪ್ಪ ತಿಳಿಸಿದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಅಪರ ಜಿಲ್ಲಾಧಿಕಾರಿ ಡಾ.ಶಿವರಾಜ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ನಗರ ಪಾಲಿಕೆ ಆಯುಕ್ತ ಷೇಕ್ ಆಸೀಫ್ ತನ್ವೀರ್, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ದಸರಾ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷೆ ರೂಪ, ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಸುಬ್ರಹ್ಮಣ್ಯ ಸೇರಿದಂತೆ ಇತರೆ ಅಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.

ಗೆಲುವು: ಸೂಪರ್–4ಗೆ ಭಾರತ ಲಗ್ಗೆ



ಆದರೆ ತಿಲಕ್ ವರ್ಮಾ 2 ಬೌಂಡರಿ, 1 ಸಿಕ್ಸರ್ ಒಳಗೊಂಡ 31 ರನ್ ಗಳಿಸಿ ಸಯಿಮ್ ಅಯೂಬ್ ಗೆ ಮೂರನೇ ಬಲಿಯಾದರು.

ಉಳಿದಂತೆ ನಾಯಕ ಸೂರ್ಯ ಕುಮಾರ್ ಯಾದವ್ ಹಾಗೂ ಶಿವಂ ದುಬೆ ಗೆಲುವಿನ ಔಪಚಾರಿಕತೆಯನ್ನು ಮುಗಿಸಿದರು. ಸೂರ್ಯ ಕುಮಾರ್ 37 ಎಸೆತಗಳಲ್ಲಿ 5 ಬೌಂಡರಿ ಮತ್ತು 1 ಸಿಕ್ಸರ್ ಒಳಗೊಂಡ ಅಜೇಯ 47 ರನ್, ಶಿವಂ ದುಬೆ 7 ಎಸೆತಗಳಲ್ಲಿ 1 ಭರ್ಜರಿ ಸಿಕ್ಸರ್ ಒಳಗೊಂಡ 10 ರನ್ ಗಳಿಸಿ ನಾಟೌಟ್ ಆಗಿ ಉಳಿದರು. ಪಾಕಿಸ್ತಾನದ ಪರ ಸಯೀವ್ ಅಯೂಬ್ 3 ವಿಕೆಟ್ ಗಳಿಸಿದರು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನಕ್ಕೆ ಹಾರ್ದಿಕ್ ಪಾಂಡ್ಯ ಮೊದಲ ಎಸೆತದಲ್ಲಿಯೇ ಆಘಾತ ನೀಡಿದರು. ಸಯೀವ್ ಅಯೂಬ್ ಶೂನ್ಯಕ್ಕೆ ನಿರ್ಗಮಿಸಿದರು. ನಂತರ ಬಂದ ಮೊಹಮ್ಮದ್ ಹ್ಯಾರಿಸ್ 3 ರನ್ ಗಳಿಸಿ ಬೂಮ್ರಾ ಬೌಲಿಂಗ್‌ನಲ್ಲಿ ಹಾರ್ದಿಕ್ ಪಾಂಡ್ಯಗೆ ಕ್ಯಾಚ್ ನೀಡಿ ನಿರ್ಗಮಿಸಿದರು.

ನಂತರ ಬಂದ ಫಕರ್ ಜಮಾನ್ 17 ರನ್ ಗಳಿಸಿ ಔಟಾದರು. ಇವರ ಹಿಂದೆಯೇ ನಾಯಕ ಸಲ್ಮಾನ್ ಆಘಾ 3, ಹಸನ್ ನವಾಜ್ 5, ಮೊಹಮ್ಮದ್ ನವಾಜ್ ಡಕೌಟ್ ಆದರು. ಪಾಕಿಸ್ತಾನ 60 ರನ್‌ಗಳಿಗೆ ಪ್ರಮುಖ 6 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಒಂದೆಡೆ ವಿಕೆಟ್ ಬೀಳುತ್ತಿದ್ದರೂ ಮತ್ತೊಂದೆಡೆ ಭದ್ರವಾಗಿ ನಿಂತು ಬ್ಯಾಟ್ ಬೀಸಿದ ಫರ್ಹಾನ್ 40 ರನ್ ಗಳಿಸಿ ತಂಡದ ಮೊತ್ತವನ್ನು ನೂರರ ಗಡಿ ದಾಟಿಸಿದರು. ಕೊನೆಯಲ್ಲಿ ಅಬ್ಬರಿಸಿದ ಶಾಹೀನ್ ಶಾ ಅಫ್ರಿದಿ 16 ಎಸೆತಗಳಲ್ಲಿ 33 ರನ್ ಗಳಿಸಿ ಅಜೇಯವಾಗಿ ಉಳಿದರು. ಇವರಿಗೆ ಜೊತೆಯಾಗಿ ಫಾಯಿಮ್ ಅಶ್ರಫ್ 11, ಸೂಫಿ ಮುಖೀಮ್ 10 ರನ್ ಕಲೆಹಾಕಿದರು. ಅಬ್ರಾರ್ ಅಹ್ಮದ್ ಶೂನ್ಯ ಸಂಪಾದಿಸಿ ಔಟಾಗದೇ ಉಳಿದರು. ಭಾರತದ ಪರ ಕುಲ್ದೀಪ್ ಯಾದವ್ 3, ಅಕ್ಷರ್ ಪಟೇಲ್ ಮತ್ತು ಜಸ್ಪ್ರೀತ್ ಬುಮ್ರಾ ತಲಾ 2, ಹಾರ್ದಿಕ್ ಪಾಂಡ್ಯ, ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಹಂಚಿಕೊಂಡರು.

ವಿರೋಧದ ನಡುವೆ ಗೆದ್ದು ಬೀಗಿದ ಭಾರತ

ಪೆಹಲ್ಗಾಮ್‌ನಲ್ಲಿ ಘಟನೆ ಬಳಿಕ ಪಾಕಿಸ್ತಾನ ಮತ್ತು ಭಾರತದ ನಡುವೆ ಸಂಬಂಧ ಹದಗೆಟ್ಟ ಹಿನ್ನಲೆಯಲ್ಲಿ ಪಂದ್ಯಕ್ಕೆ ಹಲವರು ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಟೀಂ ಇಂಡಿಯಾ ಆಟಗಾರರು ಪಂದ್ಯ ಗೆಲ್ಲುವ ಮೂಲಕ ವಿರೋಧಿಗಳಿಗೆ ತಕ್ಕ ಉತ್ತರ ನೀಡಿದ್ದಾರೆ. ಇತ್ತ ಭಾರತ ಮತ್ತು ಪಾಕ್ ನಡುವಣ ಇಂದಿನ ಪಂದ್ಯ ಆರಂಭಕ್ಕೂ ಮುನ್ನಾ ಟಾಸ್ ವೇಳೆ ಉಭಯ ತಂಡಗಳ ನಾಯಕರು ಸಾಂಪ್ರದಾಯಿಕ ಹಸ್ತಲಾಘವ (ಹ್ಯಾಂಡ್ ಶೇಕ್) ಮಾಡದೇ ಹಿಂತಿರುಗಿದ್ದಾರೆ. ಅಲ್ಲದೇ ಮುಖಕ್ಕೆ ಮುಖ ತಿರುಗಿಸಿಯೂ ನೋಡಲಿಲ್ಲ. ಇದು ಎರಡು ತಂಡಗಳ ನಡುವಿನ ಶೀಥಲ ಸಮರಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಪಂದ್ಯ ಆರಂಭಕ್ಕೂ ಮುನ್ನಾ ಕ್ರೀಡಾಂಗಣದಲ್ಲಿ ರಾಷ್ಟ್ರಗೀತೆ ಹಾಕುವುದು ಪದ್ಧತಿ. ಆದರೆ ದುಬೈ ಕ್ರೀಡಾಂಗಣದಲ್ಲಿ ಪಾಕಿಸ್ತಾನ ರಾಷ್ಟ್ರಗೀತೆ ಬದಲು ಡಿಜೆ ಪ್ಲೇ ಆಗಿದ್ದು ನೆರೆದಿದ್ದವರನ್ನು, ಆಟಗಾರರನ್ನು ಕೆಲಕ್ಷಣ ಗೊಂದಲಕ್ಕೀಡು ಮಾಡಿತು. ತಪ್ಪನ್ನು ತಕ್ಷಣ ಸರಿಪಡಿಸಿಕೊಂಡ ಆಯೋಜಕರು ಪಾಕಿಸ್ತಾನದ ರಾಷ್ಟ್ರಗೀತೆ ಹಾಕಿದರು. ತಪ್ಪಾಗಿ ಹಾಡು ಹಾಕಿರುವುದನ್ನು ಕೆಲವರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದು, ಟ್ರೋಲ್ ಮಾಡುತ್ತಿದ್ದಾರೆ. ಪಾಕಿಸ್ತಾನ ರಾಷ್ಟ್ರಗೀತೆ ಬದಲು 'ಜಲೇಬಿ ಬೇಬಿ' ಹಾಡನ್ನು ಹಾಕಿದ್ದಾರೆ. ಇದು ಅವರ ರಾಷ್ಟ್ರಗೀತೆ ಎಂದು ನೆಟ್ಟಿಗರು ಅಪಹಾಸ್ಯ ಮಾಡಿದ್ದಾರೆ.

ಬೆಸ್ಕಾಂ ಪ್ರಸ್ತಾವನೆ

ಯೂನಿಟ್‌ಗೆ 1 ರೂಪಾಯಿಯಂತೆ ವಿದ್ಯುತ್ ದರ ಏರಿಕೆ ಮಾಡಬೇಕು ಎಂದು ಬೆಸ್ಕಾಂ ಮನವಿ ಮಾಡಿದೆ. ಈಗಾಗಲೇ ವಾಣಿಜ್ಯ, ಕೈಗಾರಿಕಾ ವಲಯಕ್ಕೆ ವಿದ್ಯುತ್ ದರ ಏರಿಕೆ ಮಾಡಿ ಶಾಕ್ ಕೊಟ್ಟಿರುವ ಬೆಸ್ಕಾಂ, ಇದೀಗ ಮತ್ತೆ ವಿದ್ಯುತ್ ದರ ಹೆಚ್ಚಳ ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಎಫ್‌ಕೆಸಿಸಿಐ ವಿರೋಧ: ಬೆಸ್ಕಾಂ ಪ್ರಸ್ತಾವನೆ ಬಗ್ಗೆ ಎಫ್ ಕೆಸಿಸಿಐ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. ರಾಜ್ಯದಲ್ಲಿ ಪ್ರತಿ ಯೂನಿಟ್‌ಗೆ 1 ರೂಪಾಯಿ ವಿದ್ಯುತ್ ದರ ಏರಿಕೆ ಮಾಡುವ ಪ್ರಸ್ತಾವನೆಗೆ ಸಾರ್ವಜನಿಕರು, ಉದ್ಯಮಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಲಂಡನ್‌ನಲ್ಲಿ ವಲಸೆ ವಿರೋಧಿ ಬೃಹತ್ ಪ್ರತಿಭಟನೆ

ಲಂಡನ್: ಬ್ರಿಟನ್ ಇತಿಹಾಸದಲ್ಲೇ ಅತೀ ದೊಡ್ಡ ಪ್ರತಿಭಟನಾ ರ್‍ಯಾಲಿ ನಡೆಯುತ್ತಿದ್ದು, ಈ ಬೃಹತ್ ರ್‍ಯಾಲಿಗೆ ವಲಸಿಗರು ಕಾರಣ ಎನ್ನಲಾಗಿದೆ ಬಲಪಂಥೀಯ ಕಾರ್ಯಕರ್ತ ಟಾಮಿ ರಾಬಿನ್ಸನ್ ನೇತೃತ್ವದಲ್ಲಿ ನಡೆದ ಬೃಹತ್ ವಲಸೆ ವಿರೋಧಿ ಮೆರವಣಿಗೆಯಲ್ಲಿ ಸುಮಾರು 1,00,000ಕ್ಕೂ ಹೆಚ್ಚು ಪ್ರತಿಭಟನಾಕಾರರು ಭಾಗವಹಿಸಿದ್ದಾರೆ.

ಸ್ಟ್ಯಾಂಡ್ ಅಪ್ ಟು ರೇಸಿಸಂ ಆಯೋಜಿಸಿದ್ದ ಪ್ರತಿಸ್ಪರ್ಧಿ ಫ್ಯಾಸಿಸಂ ವಿರುದ್ಧ ಮಾರ್ಚ್ ಪ್ರತಿಭಟನೆಯಲ್ಲಿ ಸುಮಾರು 5,000 ಜನರು ಭಾಗವಹಿಸಿದ್ದರು ಎನ್ನಲಾಗಿದೆ. ಈ ಪ್ರತಿಭಟನೆಯನ್ನು ಫಾರ್–ರೈಟ್ ಅಕ್ಟಿವಿಸ್ಟ್ ಟಾಮಿ ರಾಬಿನ್ಸನ್ (ಸ್ಟೀಫನ್ ಯ್ಯಾಕ್ಷಿ–ಲೆನ್ನನ್) ನೇತೃತ್ವದಲ್ಲಿ ಯುನೈಟ್ ದಿ ಕಿಂಗ್‌ಡಮ್ ಎಂಬ ಹೆಸರಿನಲ್ಲಿ ಆಯೋಜಿಸಲಾಗಿದ್ದು, ಇಂಗ್ಲಿಷ್ ಡಿಫೆನ್ಸ್ ಲೀಗ್ ಸಂಸ್ಥಾಪಕನಾದ ರಾಬಿನ್ಸನ್, ಬ್ರಿಟನ್‌ನ ಪ್ರಭಾವಶಾಲಿ ಬಲಪಂಥೀಯ ನಾಯಕರಲ್ಲಿ ಒಬ್ಬರಾಗಿದ್ದಾರೆ. ಪ್ರತಿಭಟನಾಕಾರರು ಇಂಗ್ಲೆಂಡ್ ಮತ್ತು ಬ್ರಿಟನ್ ಧ್ವಜಗಳನ್ನು ಹಿಡಿದು ವೆಸ್ಟ್‌ಮಿನ್‌ಸ್ಟರ್ ಕಡೆಗೆ ಮೆರವಣಿಗೆ ಹೊರಟಿದ್ದರು. ಇದೇ ವೇಳೆ ರಾಬಿನ್ಸನ್ ಪ್ರತಿಭಟನೆಗೆ ಪ್ರತಿಯಾಗಿ ಸ್ಟ್ಯಾಂಡ್ ಅಪ್ ಟು ರೇಸಿಸಂ ಗುಂಪು ನೇತೃತ್ವದಲ್ಲಿ 5,000 ಮಂದಿ ಪ್ರತಿಭಟನೆ ನಡೆಸಿದರು.

ಮೈಸೂರು ಮಿತ್ರ ಸೋಮವಾರ 15 ಸೆಪ್ಟೆಂಬರ್ 2025

ಹುಲಿ ದಾಳಿ : ಹಸು ಬಲಿ



ಮಡಿಕೇರಿ,ಸೆ.14– ಮೇಯಲು ಬಿಟ್ಟಿದ್ದ ಹಸುವಿನ ಮೇಲೆ ಹುಲಿ ದಾಳಿ ನಡೆಸಿ ಕೊಂದು ಹಾಕಿರುವ ಘಟನೆ ಪೊನ್ನಂಪೇಟೆ ತಾಲೂಕಿನ ತೆರಾಲು ಗ್ರಾಮದಲ್ಲಿ ನಡೆದಿದೆ.

ಅಲ್ಲಿನ ನಿವಾಸಿ ಬೊಟ್ಟಂಗಡ ಗಿರೀಶ್ ಪೆಮ್ಮಯ್ಯ ಎಂಬವರ ಹಸುವನ್ನು ಹುಲಿ ಕೊಂದು ಹಾಕಿದ್ದು, ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವ್ಯಾಘ್ರನ ಚಲನ–ವಲನ ವೀಕ್ಷಣೆಗೆ ಕ್ಯಾಮೆರಾ ಅಳವಡಿಸಲಾಗುವುದು ಎಂದು ಶ್ರೀಮಂಗಲ ವಲಯಾರಣ್ಯಾಧಿಕಾರಿ ಅರವಿಂದ್ ಮಾಹಿತಿ ನೀಡಿದ್ದಾರೆ. ಕೂಡಲೇ ತೆರಾಲು ಗ್ರಾಮದಲ್ಲಿ ಬೋನನ್ನು ಅಳವಡಿಸಿ ಹುಲಿಯನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸುವಂತೆ ಆ ಭಾಗದ ಕೃಷಿಕರು ಒತ್ತಾಯಿಸಿದ್ದಾರೆ. ಪೊನ್ನಂಪೇಟೆ ಪಶು ವೈದ್ಯಾಧಿಕಾರಿ ಗಿರೀಶ್ ಅವರು ಹಸುವಿನ ಮರಣೋತ್ತರ ಪರೀಕ್ಷೆ ನಡೆಸಿದರು.

ದಂತ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ದಂತ ವೈದ್ಯಕೀಯ ಕ್ಷೇತ್ರ ಹೊಸ ಆವಿಷ್ಕಾರಗಳನ್ನು ಹುಟ್ಟು ಹಾಕುತ್ತಿದೆ : ಯದುವೀರ್

ವಿರಾಜಪೇಟೆ, ಸೆ.14– ದಂತ ವೈದ್ಯಕೀಯ ಕ್ಷೇತ್ರ ಹೊಸ ಆವಿಷ್ಕಾರಗಳನ್ನು ಹುಟ್ಟು ಹಾಕುತ್ತಿದೆ. ಈ ನಿಟ್ಟಿನಲ್ಲಿ ಪದವಿ ಪಡೆದ ವಿದ್ಯಾರ್ಥಿಗಳು ತಂತ್ರಜ್ಞಾನದೊಂದಿಗೆ ಪ್ರಯೋಗಗಳನ್ನು ಮಾಡುವುದರತ್ತ ಗಮನ ಹರಿಸಬೇಕು ಎಂದು ಮೈಸೂರು ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಕೊಡಗು ದಂತ ವೈದ್ಯಕೀಯ ಮಹಾವಿದ್ಯಾಲಯ ವತಿಯಿಂದ ಕಾಲೇಜು ಸಭಾಂಗಣದಲ್ಲಿ ನಡೆದ 2025ನೇ ಸಾಲಿನ ಪದವಿ ಪ್ರದಾನ ಸಮಾರಂಭದಲ್ಲಿ ದಂತ ವೈದ್ಯಕೀಯ ಅಧ್ಯಯನ ಮುಗಿಸಿದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಮಾತನಾಡಿದ ಅವರು, ಪದವಿ ಮುಗಿಸಿದ ವಿದ್ಯಾರ್ಥಿಗಳು ಇನ್ಮುಂದೆ ವೈದ್ಯರಾಗಿ ಕಾರ್ಯನಿರ್ವಹಿಸಲಿದ್ದು, ಆತ್ಮ ವಿಶ್ವಾಸ ಮತ್ತು ಆತ್ಮಸ್ಥೈರ್ಯದ ಮೂಲಕ ಉದ್ಯೋಗ ಮಾಡಬೇಕಿದೆ. ಗ್ರಾಮೀಣ ಭಾಗದಲ್ಲಿ ಹೆಚ್ಚು ಒತ್ತು ನೀಡಿ ಬಡ ಜನತೆಗೆ ಅನುಕೂಲ ಆಗುವ ರೀತಿಯಲ್ಲಿ ಕಾರ್ಯ ನಿರ್ವಹಿಸಿ ಎಂದು ಕರೆ ನೀಡಿದರು.

ಗುಣಮಟ್ಟದ ಶಿಕ್ಷಣ ನೀಡುವ ಸಂಸ್ಥೆ ಎನ್ನುವ ಹೆಗ್ಗಳಿಕೆ ಸಂಸ್ಥೆಗಿದೆ. ಉತ್ತಮ ಬೋಧಕ ವರ್ಗವನ್ನು ಹೊಂದಿರುವ ಈ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಸಹ ಸಂಸ್ಥೆ ನೀಡುತ್ತಿರುವ ಗುಣಮಟ್ಟದ ಶಿಕ್ಷಣವನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು. ಮುಂದೆ ವೈದ್ಯರಾದ ಬಳಿಕ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡು ತಮ್ಮ ಪ್ರತಿಭೆಯನ್ನು ದಂತ ವೈದ್ಯಕೀಯ ಕ್ಷೇತ್ರಕ್ಕೆ ಕೊಡುಗೆಯಾಗಿ ನೀಡಬೇಕು ಎಂದರು.



ದಂತ ವೈದ್ಯಕೀಯ ಪದವಿ ಪ್ರದಾನ ಸಮಾರಂಭವನ್ನು ಸಂಸದ ಯದುವೀರ್ ಉದ್ಘಾಟಿಸಿದರು.

ಕೊಡಗು ದಂತ ವೈದ್ಯಕೀಯ ಮಾಹಾವಿದ್ಯಾಲಯ ಡೀನ್ ಡಾ.ಸುನೀಲ್ ಮುದ್ದಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, 25 ವರ್ಷಗಳ ಸಂಸ್ಥೆಯ ಗಮನಾರ್ಹ ಪ್ರಯಾಣವನ್ನು ಪ್ರತಿಬಿಂಬಿಸಿದರು. ಸಮಗ್ರ ಶಿಕ್ಷಣದ ಬದ್ಧತೆಯನ್ನು ಎತ್ತಿ ತೋರಿಸಿದರಲ್ಲದೆ ವಿದ್ಯಾರ್ಥಿಗಳನ್ನು ಅತ್ಯುತ್ತಮ ದಂತ ವೃತ್ತಿಪರರು ಮಾತ್ರವಲ್ಲದೆ ಸಾಮಾಜಿಕ ಜವಾಬ್ದಾರಿಯೊಂದಿಗೆ ಸಹಾನುಭೂತಿ ಹೊಂದಿರುವ ನಾಯಕರಾಗಿಯೂ ಬೆಳೆಸುತ್ತದೆ ಎಂದರು

ಇದೇ ಸಂದರ್ಭ ಸಂಸದ ಯದುವೀರ್ ಅವರನ್ನು ಕಾಲೇಜು ವತಿಯಿಂದ ಸನ್ಮಾನಿಸಲಾಯಿತು. ಕೊಡಗು ದಂತ ವೈದ್ಯಕೀಯ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಕೆ.ಸಿ.ಪೊನ್ನಪ್ಪ ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿದರು. ಉಪ ಪ್ರಾಂಶುಪಾಲ ಡಾ. ಜಿತೇಶ್ ಜೈನ್ ಮತ್ತು ವಿವಿಧ ವಿಭಾಗಗಳ ಉಪನ್ಯಾಸಕರು ವೇದಿಕೆಯಲ್ಲಿದ್ದರು. 30 ಮಂದಿಗೆ ಸ್ನಾತಕೋತ್ತರ ಪದವಿ ಪ್ರದಾನ ಮತ್ತು 40 ಮಂದಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಎಲ್ಲಾ ವಿಭಾಗಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಡಾ. ಗಾಯತ್ರಿ ಎಸ್.ಚಂದ್ರನ್ ಅವರಿಗೆ ಕಂಜಿತಂಡ ಎಂ. ಕುಶಾಲಪ್ಪ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ಕೆ.ಪೊನ್ನಮ್ಮ ಕುಶಾಲಪ್ಪ ಚಿನ್ನದ ಪದಕವನ್ನು ಶೈಕ್ಷಣಿಕ ಸಾಧನೆಗಾಗಿ ಡಾ. ರಜಿನಿ ಅವರು ಪಡೆದುಕೊಂಡರು. ಪದವಿ ಪ್ರತಿನಿಧಿ ಡಾ. ಅಲ್ಫಿನಾ ಹಾಗೂ ಸ್ನಾತಕೋತ್ತರ ಪ್ರತಿನಿಧಿ ಡಾ. ಸಮಂತಾ ಗಣಪತಿ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು. ಪೋಷಕರನ್ನು ಪ್ರತಿನಿಧಿಸಿದ ಡಾ. ದೊಡ್ಡಯ್ಯ ಸಂಸ್ಥೆಯ ವೈಯಕ್ತಿಕ ತರಬೇತಿ ಮತ್ತು ಮಾರ್ಗದರ್ಶನಕ್ಕಾಗಿ ಕೃತಜ್ಞತೆ ವ್ಯಕ್ತಪಡಿಸಿದರು.

ಭವಿತ್ ರೈ ಕರಾಟೆಯಲ್ಲಿ ಸಾಧನೆ



ನಾಪೋಕ್ಲು: ಚೆನ್ನೈನಲ್ಲಿ ನಡೆದ ಇಂಡಿಯಾ – ಶ್ರೀಲಂಕಾ ಇನ್ವಿಟೇಶನ್ ಕರಾಟೆ ಚಾಂಪಿಯನ್‌ಶಿಪ್ ಪಂದ್ಯದಲ್ಲಿ ಚೇರಂಬಾಣೆಯ ಭವಿತ್ ರೈ ಕಟ್ಟಾಸ್‌ನಲ್ಲಿ ತೃತೀಯ ಸ್ಥಾನ ಹಾಗೂ ಫೈಟಿಂಗ್‌ನಲ್ಲಿ ತೃತೀಯ ಸ್ಥಾನ ಪಡೆದು ಸಾಧನೆ ಮಾಡಿದ್ದಾರೆ.

ಅವರು ನಾಪೋಕ್ಲುವಿನ ಅಂಕುರ್ ಪಬ್ಲಿಕ್ ಶಾಲೆಯಲ್ಲಿ 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಇವರಿಗೆ ತರಬೇತುದಾರರಾಗಿ ಶಿಹಾನ್ ಮಹಮ್ಮದ್ ಇಕ್ಬಾಲ್ ಮಾರ್ಗದರ್ಶನ ನೀಡಿದ್ದಾರೆ. ಭವಿತ್ ರೈ ಚೇರಂಬಾಣೆ ಗ್ರಾಮದ ನಿವಾಸಿ ಪ್ರದೀಪ್ ರೈ ಹಾಗೂ ಪ್ರಮೀಳಾ ರೈ ದಂಪತಿಯ ಪುತ್ರ.

ಸೆ.20, ನಾಪೋಕ್ಲು ನಾಡು ಗ್ರಾಹಕರ ಸಹಕಾರ ಸಂಘ ಮಹಾಸಭೆ

ನಾಪೋಕ್ಲು: ನಾಡು ಗ್ರಾಹಕರ ಸಹಕಾರ ಸಂಘ ನಿಯಮಿತದ ವಾರ್ಷಿಕ ಮಹಾಸಭೆ ಸೆ.20ರಂದು ಸಂಘದ ಅಧ್ಯಕ್ಷ ಪಟ್ರಪಂಡ ಮೋಹನ್ ಮುದ್ದಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಜಾತಿ ಸಮೀಕ್ಷೆಯಲ್ಲಿ 'ಕೊಡವ ಮುಸ್ಲಿಂ' ಎಂದು ಬರೆಸಲು ಕೆಎಂಎ ಮನವಿ

ಪೊನ್ನಂಪೇಟೆ,ಸೆ.14– ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮೂಲಕ ರಾಜ್ಯದ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ನಡೆಸಲು ಮುಂದಾಗಿರುವುದು ಸ್ವಾಗತಾರ್ಹವಾಗಿದೆ. ಇದೇ ತಿಂಗಳ 22 ರಿಂದ ಆರಂಭಗೊಳ್ಳುವ ಈ ಸಮೀಕ್ಷೆಯಲ್ಲಿ ಕೊಡಗಿನ ಮೂಲ ನಿವಾಸಿಗರಾಗಿರುವ ಕೊಡವ ಮುಸ್ಲಿಮರು ಕಡ್ಡಾಯವಾಗಿ ಪಾಲ್ಗೊಳ್ಳಬೇಕು ಎಂದು ಕೊಡವ ಮುಸ್ಲಿಂ ಅಸೋಸಿಯೇಷನ್ (ಕೆಎಂಎ) ಮನವಿ ಮಾಡಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೆ.ಎಂ.ಎ. ಅಧ್ಯಕ್ಷ ದುದ್ದಿಯಂಡ ಹೆಚ್.ಸೂಫಿ ಹಾಜಿ, ಮೊಬೈಲ್ ಫೋನ್ ಬಳಸಿಕೊಂಡು ಡಿಜಿಟಲ್ ತಂತ್ರಜ್ಞಾನದ ಮೂಲಕ ಅ.7ರವರೆಗೆ ನಡೆಯಲಿರುವ ಈ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ, ಹಿಂದುಳಿದ ವರ್ಗಗಳ ಸಮುದಾಯದ ಶ್ರೇಯೋಭಿವೃದ್ಧಿಗಾಗಿ ಸರ್ಕಾರ ರೂಪಿಸಬೇಕಾದ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅಗತ್ಯವಿರುವ ಮಾಹಿತಿ ದತ್ತಾಂಶಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸುವುದು ತೀರಾ ಮಹತ್ವದಾಗಿದೆ ಎಂದು ಹೇಳಿದರು.

ಸಮೀಕ್ಷೆಯಲ್ಲಿ ಒಟ್ಟು 60 ಪ್ರಶ್ನೆಗಳ ಪಟ್ಟಿಯನ್ನು ತಯಾರಿಸಲಾಗಿದೆ. ಈ ಸಮೀಕ್ಷೆಯಲ್ಲಿ ಜನರ ಅಗತ್ಯ ಮಾಹಿತಿಗಳೂ ಸೇರಿದಂತೆ ಜಾತಿಯ ಹೆಸರನ್ನು ಸ್ಪಷ್ಟವಾಗಿ ನಮೂದಿಸಲು ಅವಕಾಶ ಕಲ್ಪಿಸಲಾಗಿದೆ. ಆದರಿಂದ ಕೊಡವ ಮುಸ್ಲಿಂ ಸಮುದಾಯದವರು ನಮೂನೆಯ ಕಾಲಂ ಸಂಖ್ಯೆ 8ರಲ್ಲಿರುವ 'ಧರ್ಮ' ಕಾಲಂನಲ್ಲಿ 'ಇಸ್ಲಾಂ' ಎಂದೂ, ಕಾಲಂ ಸಂಖ್ಯೆ 9ರಲ್ಲಿರುವ 'ಜಾತಿ' ಕಾಲಂನಲ್ಲಿ 'ಕೊಡವ ಮುಸ್ಲಿಂ' ಎಂದೇ ಬರೆಸಬೇಕು ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಉಪಸ್ಥಿತರಿದ್ದ ಕೆಎಂಎ ಹಿರಿಯ ಉಪಾಧ್ಯಕ್ಷ



ಕೆಎಂಎ ಅಧ್ಯಕ್ಷ ದುದ್ದಿಯಂಡ ಹೆಚ್.ಸೂಫಿ ಹಾಜಿ ಮಾತನಾಡಿದರು.

ಡಾ.ಜೋಯಿಪೆರ ಎ.ಕುಂಞಬ್ದುಲ್ಲಾ ಅವರು ಮಾತನಾಡಿ, ವಿಶೇಷ ವಾಗಿ ಸಣ್ಣ ಸಣ್ಣ ಸಮುದಾಯಗಳು ಮತ್ತು ಅಲ್ಪಸಂಖ್ಯಾತ– ಸೂಕ್ಷ್ಮ ಅಲ್ಪಸಂಖ್ಯಾತ ಸಮುದಾಯಗಳು ಸಾಮಾಜಿಕ ನ್ಯಾಯ ವನ್ನು ಪಡೆಯುವುದು ಅವರ ಹಕ್ಕಾಗಿದೆ. ಈ ಸಾಮಾಜಿಕ ನ್ಯಾಯ ಹಂಚಿಕೆಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗಳು ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಜೊತೆಗೆ ವಿವಿಧ ಭಾಗಗಳಲ್ಲಿ ವಾಸವಾಗಿರುವ ಹಾಗೂ ವಿಭಿನ್ನ ವೃತ್ತಿಗಳಲ್ಲಿ ತೊಡಗಿರುವ ವ್ಯಕ್ತಿಗಳು ಮತ್ತು ಜನಸಮುದಾಯಗಳಲ್ಲಿ ಇರುವ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವಲ್ಲಿ ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗಳ ಕುರಿತಂತೆ ವೈಜ್ಞಾನಿಕ ಅಧ್ಯಯನ ನಡೆಸಲು ಈ ಸಮೀಕ್ಷೆ ಹೆಚ್ಚು ಪ್ರಯೋಜನವಾಗಲಿದೆ. ಆದರಿಂದ, ಈ ಸಮೀಕ್ಷೆಯ ಕುರಿತಂತೆ ಕಲ್ಪಿತ ವ್ಯಾಖ್ಯಾನಗಳ ಮೂಲಕ ಜಾತಿ–ಜನಾಂಗಗಳ ಬಗ್ಗೆ ಸಮಾಜದಲ್ಲಿ ತಪ್ಪು ಸಂದೇಶ ನೀಡಲು ಯಾರೂ ಮುಂದಾಗಬಾರದು ಎಂದು ಹೇಳಿದರು. ಗೋಷ್ಠಿಯಲ್ಲಿ ಕೆ.ಎಂ.ಎ. ಉಪಾಧ್ಯಕ್ಷರಾದ ಅಕ್ಕಳತಂಡ ಎಸ್. ಮೊಯ್ದು ಉಪಸ್ಥಿತರಿದ್ದರು.

ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಸಂತ ಮೇರಿ ಆಂಗ್ಲ ಶಾಲೆ ವಿದ್ಯಾರ್ಥಿಗಳ ಸಾಧನೆ

ಸುಂಟಿಕೊಪ್ಪ: ಕೂಡಿಗೆಯ ಏಂಜಲ್ ಶಾಲೆಯಲ್ಲಿ ನಡೆದ ಜಿಲ್ಲಾ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಸುಂಟಿಕೊಪ್ಪದ ಸಂತ ಮೇರಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಸಾಧನೆ ಮಾಡಿದ್ದಾರೆ.

14 ವರ್ಷದ 60 ಕೆ.ಜಿ ಒಳಗಿನ ವಿಭಾಗದಲ್ಲಿ ಸ್ವಸ್ತಿಕ್ ಪ್ರಥಮ ಸ್ಥಾನ, 60 ಕೆ.ಜಿ ಮೇಲ್ಪಟ್ಟ ವಿಭಾಗದಲ್ಲಿ ಡಿ.ಎಂ. ಮನೀಶ್ ಪ್ರಥಮ ಸ್ಥಾನ ಹಾಗೂ 17ರ ವಯೋಮಿತಿ ಬಾಲಕರ 62 ಕೆ.ಜಿ ಒಳಗಿನ ವಿಭಾಗದಲ್ಲಿ ಎಂ.ಎಸ್. ದಿಗಂತ್ ಸಾಧನೆ ಮಾಡಿದ್ದಾರೆ. ಬಾಲಕಿಯರ ವಿಭಾಗದ 62 ಕೆ.ಜಿ ಒಳಗಿನ ವಿಭಾಗದಲ್ಲಿ ಸಂತ ಮೇರಿ ಶಾಲೆಯ ಆರ್.ಜೀವಿಕ ಪ್ರಥಮ, 48 ಕೆ.ಜಿ ವಿಭಾಗದಲ್ಲಿ ಯಾನ ಚಂಗಪ್ಪ ಪ್ರಥಮ, 44 ಕೆ.ಜಿ ಒಳಗಿನ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದರೆ, ಕೊಡಗರಹಳ್ಳಿ ಶಾಂತಿನಿಕೇತನ ಶಾಲೆಯ ಅಮೂಲ್ಯ 52 ಕೆ.ಜಿ ಒಳಗಿನ ವಿಭಾಗದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಕಾಲೇಜು ವಿಭಾಗದ 19ರ ವಯೋಮಿತಿಯ ಕರಾಟೆ ಸ್ಪರ್ಧೆಯಲ್ಲಿ ಕುಶಾಲನಗರ ವಿವೇಕಾನಂದ ಕಾಲೇಜಿನ ಹರಿಪ್ರಿಯಾ 48 ಕೆ.ಜಿ ಒಳಗಿನ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಈ ಎಲ್ಲ ಸ್ಪರ್ಧಿಗಳು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ ಎಂದು ಕರಾಟೆ ತರಬೇತುದಾರ ಬಿ.ಎಂ.ಮಣಿಮುಖೇಶ್ ತಿಳಿಸಿದ್ದಾರೆ.



ಕರಾಟೆಯಲ್ಲಿ ಸಾಧನೆಗೈದ ಸುಂಟಿಕೊಪ್ಪದ ಸಂತ ಮೇರಿ ಆಂಗ್ಲ ಮಾಧ್ಯಮ ಶಾಲೆ ವಿದ್ಯಾರ್ಥಿಗಳು

ಹುದಿಕೇರಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 8.74 ಲಕ್ಷ ರೂ. ನಿವ್ವಳ ಲಾಭ

ಮಡಿಕೇರಿ,ಸೆ.14– ಹುದಿಕೇರಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2024–2025ನೇ ಸಾಲಿನ ವಾರ್ಷಿಕ ಮಹಾಸಭೆ ಸಂಘದ ಅಧ್ಯಕ್ಷ ಅಜ್ಜಿಕುಟ್ಟೀರ ಎಂ.ಮುತ್ತಪ್ಪ ಅಧ್ಯಕ್ಷತೆಯಲ್ಲಿ ನಡೆಯಿತು.

ಸಂಘದಲ್ಲಿ 2700 ಕಾರ್ಯನಿರತ ಸದಸ್ಯರಿದ್ದು, ಈ ಸಾಲಿನಲ್ಲಿ ಸಂಘದ ಷೇರು ಬಂಡವಾಳ ಹೂಡಿಕೆ, ವಿವಿಧ ರೀತಿಯ ಸಾಲಗಳು, ಠೇವಣಿ ಯೋಜನೆ, ರಸಗೊಬ್ಬರ ಹಾಗೂ ಕೀಟನಾಶಕಗಳ ಮಾರಾಟ ಮಾಡುವ ಮೂಲಕ ಬ್ಯಾಂಕ್ ವ್ಯವಹಾರ ನಡೆಸಿ ಒಟ್ಟು 8.74 ಲಕ್ಷ ರೂ. ಲಾಭಾಂಶ ಗಳಿಸಿದೆ ಎಂದು ಅಜ್ಜಿಕುಟ್ಟೀರ ಯಂ.ಮುತ್ತಪ್ಪ ಮಾಹಿತಿ ನೀಡಿದರು. ಮುಂದಿನ ಸಾಲಿನಲ್ಲಿ ಸಂಘದ ವತಿಯಿಂದ ದೀರ್ಘಾವಧಿ ಸಾಲ ಹಾಗೂ ಆಸ್ತಿ ಅಡಮಾನ ಸಾಲ ಯೋಜನೆ ಜಾರಿಗೆ ತರುವ ಮೂಲಕ ಇನ್ನಷ್ಟು ಸದಸ್ಯರಿಗೆ ಕಾರ್ಯಕ್ರಮ ರೂಪಿಸಿ ಜಾರಿಗೆ ತರುವಲ್ಲಿ ನಮ್ಮ ಸಂಘ ಪ್ರಯತ್ನ ಪಡುತ್ತಿದೆ ಎಂದು ತಿಳಿಸಿದರು.

ಹಲವಾರು ವರ್ಷಗಳಿಂದ ನ್ಯಾಯಾಲಯದಲ್ಲಿದ್ದ ಆಸ್ತಿ ವ್ಯಾಜ್ಯಗಳನ್ನು ಯಾವುದೇ ರೀತಿಯ ಹಣಕಾಸು ಪಡೆಯದೆ ಸಂಘದ ಪರವಾಗಿ ವಕಾಲತ್ತು ವಹಿಸಿ ಸಂಘದ ಪರವಾಗಿ ತೀರ್ಪು ತರುವಲ್ಲಿ ಯಶಸ್ವಿಯಾದ ಹಿರಿಯ ವಕೀಲ ಬಲ್ಯಮಾಡ ಮಾದಪ್ಪ ಅವರನ್ನು ಸಂಘದ ಪರವಾಗಿ ಮಹಾಸಭೆಯಲ್ಲಿ ಸನ್ಮಾನಿಸಲಾಯಿತು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿದ ಸಂಘದ ಸದಸ್ಯರ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಮಹಾಸಭೆಯಲ್ಲಿ ಸಂಘದ ಸಿಇಒ ಮತ್ರಂಡ ಎಂ. ತಮ್ಮಯ್ಯ, ಆಡಳಿತ ಮಂಡಳಿ ಪದಾಧಿಕಾರಿಗಳು, ನಿರ್ದೇಶಕರು ಹಾಗೂ ಸಿಬ್ಬಂದಿವರ್ಗ ಮತ್ತು ಸಂಘದ ಸದಸ್ಯರು ಉಪಸ್ಥಿತರಿದ್ದರು.



ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ನಡೆದ ಬೈಕ್ ರ್‍ಯಾಲಿಗೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ

ಚಾ.ನಗರದಲ್ಲಿ 'ನನ್ನ ಮತ-ನನ್ನ ಹಕ್ಕು' ಬೈಕ್ ರ್‍ಯಾಲಿಗೆ ಶಾಸಕ ಪುಟ್ಟರಂಗಶೆಟ್ಟಿ ಚಾಲನೆ

ಚಾಮರಾಜನಗರ, ಸೆ.14–ಅಂತರ ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ 'ನನ್ನ ಮತ–ನನ್ನ ಹಕ್ಕು' ಎಂಬ ಮಹತ್ವ ಸಂದೇಶ ಸಾರುವ ಉದ್ದೇಶದೊಂದಿಗೆ ಚಾಮರಾಜನಗರ ಜಿಲ್ಲೆಯಿಂದ ಬೆಂಗಳೂರಿಗೆ ಹೊರಟ ಬೈಕ್ ರ್‍ಯಾಲಿಗೆ ನಗರದಲ್ಲಿಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ, ರೋಟರಿ ಸಿಲ್ಕ್ ಸಿಟಿ ಸಹಯೋಗದಲ್ಲಿ ಅಂತರ ರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಪ್ರಯುಕ್ತ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಾಶ್ಕರ್ ಅಕ್ಷಯ್ ಅಶೋಕ್ ನೇತೃತ್ವದ ಬೈಕ್ ರ್‍ಯಾಲಿ ತಂಡಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ನಿಶಾನೆ ತೋರಿ ಶುಭ ಹಾರೈಸಿದರು.

ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ. ಪುಟ್ಟರಂಗಶೆಟ್ಟಿ ಡಾ. ಬಿ.ಆರ್.ಅಂಬೇಡ್ಕರ್ ಹಾಗೂ ಸಂವಿಧಾನ ಪೀಠಿಕೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಬಳಿಕ ಮಾತನಾಡಿ, ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ 'ನನ್ನ ಮತ–ನನ್ನ ಹಕ್ಕು' ಘೋಷವಾಕ್ಯದೊಂದಿಗೆ ಬೆಂಗಳೂರಿನಲ್ಲಿ ನಡೆಯುವ ಜಾಗೃತಿ ಮೂಡಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಪ್ರತಿ ಜಿಲ್ಲೆಗಳಿಂದ 10 ಮಂದಿ ತಂಡವು ಹೊರಡುತ್ತಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಅವರು ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರ ಆಡಳಿತದ ಭಾರತದಲ್ಲಿ ಯಾವುದೇ ಮೂಲಸೌಲಭ್ಯಗಳಿಲ್ಲದೇ ಜನರ ಪರಿಸ್ಥಿತಿ ಸಂಕಷ್ಟದಲ್ಲಿತ್ತು. ಸ್ವಾತಂತ್ರ್ಯನಂತರದ ಭಾರತ ಸಾಮಾಜಿಕ, ಆರ್ಥಿಕ, ರಾಜಕೀಯ, ಸಮಾನತೆ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿ ಅಭಿವೃದ್ಧಿಶೀಲ ರಾಷ್ಟ್ರವಾಗಿದೆ. ಇದಕ್ಕೆ ನಮ್ಮ ಸುಭದ್ರ ಪ್ರಜಾಪ್ರಭುತ್ವ ಹಾಗೂ ಶ್ರೇಷ್ಠ ಸಂವಿಧಾನವೇ ಕಾರಣವಾಗಿದೆ. ಸರ್ವರಿಗೂ ಸಮಬಾಳು–ಸರ್ವರಿಗೂ ಸಮಪಾಲು ನೀಡಿರುವ ಸಂವಿಧಾನವವನ್ನು ಪ್ರತಿಯೊಬ್ಬರು ಗೌರವಿಸಬೇಕು. ರಾಷ್ಟ್ರಕವಿ ಕುವೆಂಪು ಹೇಳಿದಂತೆ ಸರ್ವ ಜನಾಂಗದ ಶಾಂತಿಯ ತೋಟವನ್ನು ಎಲ್ಲರೂ ಸೇರಿ ಕಟ್ಟೋಣ ಎಂದರು.

ಕಾವೇರಿ ಜಲಾನಯನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಿ. ಮರಿಸ್ವಾಮಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಜಿಪಂ ಸಿಇಓ ಮೋನಾರೋತ್, ಜಿಲ್ಲಾ ಎಸ್‌ಪಿ ಡಾ.ಬಿ.ಟಿ. ಕವಿತಾ, ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಾಶ್ಕರ್ ಅಕ್ಷಯ್ ಅಶೋಕ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಎಚ್.ಎಸ್. ಬಿಂದ್ಯಾ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರಾಶ್ಕರ್ ಅಕ್ಷಯ್ ಅಶೋಕ್ ನೇತೃತ್ವದ ಬೈಕ್ ರ್‍ಯಾಲಿ ತಂಡದಲ್ಲಿ ಪೊಲೀಸ್ ಇಲಾಖೆಯ ಮಹಮದ್ ಫಾರೂಖ್, ರೋಟರಿ ಸಿಲ್ಕ್ ಸಿಟಿ ಸಹಾಯಕ ಗೌರ್‍ನರ್ ಗಿರೀಶ್, ಸದಸ್ಯರಾದ ಶರತ್‌ಕುಮಾರ್, ಬಸವರಾಜು, ಮುರುಗೇಂದ್ರಸ್ವಾಮಿ, ಮಹೇಶ್‌ಕುಮಾರ್, ಕುಮಾರಸ್ವಾಮಿ, ಎಸ್.ಮಹೇಶ್, ಶರತ್ ಕುಮಾರ್ ಬೆಂಗಳೂರಿಗೆ ಹೊರಟರು. ಸುರಕ್ಷತೆಯ ಹಿತದೃಷ್ಟಿಯೊಂದಿಗೆ ಪೊಲೀಸ್ ಇಲಾಖೆಯ ಭದ್ರತಾ ವಾಹನ, ಸಿಬ್ಬಂದಿ, ಆರೋಗ್ಯ ಇಲಾಖೆಯ ವೈದ್ಯರು, ಸಹಾಯಕರು ಅಂಬುಲೆನ್ಸ್‌ನೊಂದಿಗೆ ಬೈಕ್ ರ್‍ಯಾಲಿ ಜೊತೆ ತೆರಳಿದರು.

ನಾಳೆ ಬ್ರಹ್ಮ ಶ್ರೀ ನಾರಾಯಣಗುರು ಜಯಂತಿ

ಚಾಮರಾಜನಗರ, ಸೆ.14– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬ್ರಹ್ಮ ಶ್ರೀ ನಾರಾಯಣಗುರು ಜಯಂತಿ ಕಾರ್ಯಕ್ರಮವನ್ನು ಸೆ.16ರಂದು ನಗರದಲ್ಲಿ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 9.30 ಗಂಟೆಗೆ ನಗರದ ಪ್ರವಾಸಿ ಮಂದಿರದ ಆವರಣದಲ್ಲಿ ಮೆರವಣಿಗೆಗೆ ಚಾಲನೆ ದೊರೆಯಲಿದೆ. ಬೆಳಿಗ್ಗೆ 11.30 ಗಂಟೆಗೆ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲೂಕು ಗರ್ತಿಕೆರೆ ನಿಟ್ಟೂರಿನ ಶ್ರೀ ನಾರಾಯಣಗುರು ಮಹಾಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ರೇಣುಕಾನಂದ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಿಕ್ಷಣ ಸಚಿವ ಮಧು ಬಂಗಾರಪ್ಪ ಗೌರವ ಉಪಸ್ಥಿತಿ ವಹಿಸುವರು.

ವಿಷ್ಣುವರ್ಧನ್‌ಗೆ ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆ: ಚಾ.ನಗರದಲ್ಲಿ ಸಂಭ್ರಮ



ಡಾ.ವಿಷ್ಣುವರ್ಧನ್ ಭಾವಚಿತ್ರಕ್ಕೆ ಅಭಿಮಾನಿ ಬಳಗದಿಂದ ಪುಷ್ಪಾರ್ಚನೆ ಮಾಡಲಾಯಿತು.

ಚಾಮರಾಜನಗರ : ರಾಜ್ಯ ಸರ್ಕಾರ ಮರಣೋತ್ತರವಾಗಿ ಡಾ.ವಿಷ್ಣುವರ್ಧನ್ ಅವರಿಗೆ ಕರ್ನಾಟಕ ಪ್ರಶಸ್ತಿ ಘೋಷಣೆ ಮಾಡಿದ ಹಿನ್ನೆಲೆಯಲ್ಲಿ ಕರುಣಾಮಯಿ ಡಾ.ವಿಷ್ಣುವರ್ಧನ್ ಅಭಿಮಾನಿ ಬಳಗದ ವತಿಯಿಂದ ನಗರದಲ್ಲಿ ಸಂಭ್ರಮಾಚರಣೆ ಮಾಡಲಾಯಿತು. ಬಳಗದ ಅಧ್ಯಕ್ಷ ರವಿಚಂದ್ರಪ್ರಸಾದ್ ನೇತೃತ್ವದಲ್ಲಿ ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಡಾ. ವಿಷ್ಣುವರ್ಧನ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ವಿಷ್ಣುವರ್ಧನ್ ಚಿತ್ರದ ಗೀತೆಗಳ ಗಾಯನ ಮಾಡಲಾಯಿತು.

ಬಳಗದ ಅಧ್ಯಕ್ಷ ರವಿಚಂದ್ರಪ್ರಸಾದ್ ಮಾತನಾಡಿ, ಕನ್ನಡದ ಕೋಟಿಗೊಬ್ಬ ವಿಷ್ಣುವರ್ಧನ್ ಅವರಿಗೆ ಮರಣೋತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ಆಯ್ಕೆ ಮಾಡಿರುವುದು ಅಭಿಮಾನಿಗಳಿಗೆ ಸಂತಸ ತಂದಿದೆ. ಚಾಮರಾಜನಗರಕ್ಕೂ ಡಾ.ವಿಷ್ಣುವರ್ಧನ್ ಅವರಿಗೂ ಅವಿನಾಭಾವ ಸಂಬಂಧವಿದ್ದು, ರಾಜ್ಯಾದ್ಯಂತ ಅಭಿಮಾನಿಗಳು ಹೊಂದಿದ್ದಾರೆ. ಸರ್ಕಾರಕ್ಕೆ ಈ ಮೂಲಕ ಅಭಿನಂದನೆ ಸಲ್ಲಿಸಲಾಗುವುದು ಎಂದರು. ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ಹಣ್ಯದಹುಂಡಿ ರಾಜು, ಮಹೇಶ್ ಗೌಡ, ಮಹದೇವ ನಾಯಕ, ಅಪ್ಪು ಮೆಲೋಡಿಸ್ ಕಾಗಲವಾಡಿ ರಂಗಸ್ವಾಮಿ, ಮೂರ್ತಿ, ಕುಂಚ ಕಲಾವಿದ ಗೌಸ್, ಗಾಯಕ ನಾಗರಾಜು, ವೀರಭದ್ರ ಇತರರು ಹಾಜರಿದ್ದರು.

ಆಲೂರಲ್ಲಿ ಶಿವರಾತ್ರಿ ರಾಜೇಂದ್ರ ಶ್ರೀಗಳ ಜಯಂತಿ ಆಚರಣೆ



ಆಲೂರು, ಸೆ.14– ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದಲ್ಲಿ ಇಂದು ಬಸವ ಭವನದಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 110ನೇ ಜಯಂತಿ ಮಹೋತ್ಸವ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಜೆಎಸ್‌ಎಸ್ ಸಂಸ್ಥೆಯ ನಿವೃತ ಪ್ರಾಧ್ಯಾಪಕ ಬಿ.ಶಿವಸ್ವಾಮಿ, ರಾಜೇಂದ್ರ ಸ್ವಾಮಿಗಳು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿ ಮಾಡಿ ಶಿಕ್ಷಣವೇ ಧರ್ಮ, ಶಿಕ್ಷಣವೇ ಆಚಾರ, ಶಿಕ್ಷಣವೇ ಸಮಾಜದ ಸುಧಾರಣೆ ಎಂದು ತಿಳಿಸಿಕೊಟ್ಟರು. ಜೆಎಸ್‌ಎಸ್ ಸಂಸ್ಥೆ ದೇಶವಲ್ಲದೆ ವಿದೇಶದಲ್ಲೂ ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಮಾಡಿದೆ ಎಂದರು.

1983ರಲ್ಲಿ ಚಾಮರಾಜನಗರದಲ್ಲಿ ಪ್ರಥಮ ಬಾರಿಗೆ ವಿದ್ಯಾ ಸಂಸ್ಥೆ ತೆರೆದು ಎಲ್ಲಾ ಸಮಾಜದ ಜನರಿಗೆ ಉನ್ನತ ಮಟ್ಟದ ಶಿಕ್ಷಣ ದೊರೆಯಲು ಶ್ರಮಿಸಿದರು ಎಂದರು.

ರೈತ ಮುಖಂಡ ಮಹೇಶ್ ಪ್ರಭು ಹಾಗೂ ಆಲೂರು ಮಲ್ಲು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದ ಆಲೂರು ಗ್ರಾಮದ ಎ.ಎಸ್. ಅಭಿಷೇಕ್ ಅವರನ್ನು ಸನ್ಮಾನಿಸಲಾಯಿತು.

ಜೆಎಸ್‌ಎಸ್ ಸಂಸ್ಥೆಯ ನೌಕರರ ವರ್ಗ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವೀರಶೈವ ಲಿಂಗಾಯಿತ ಸಮಾಜ ಬಾಂಧವರು, ಗ್ರಾಮಸ್ಥರು ಹಾಜರಿದ್ದರು.

ಅಮೃತ್ 2.0 ಯೋಜನೆಯ ಕಾಮಗಾರಿ ಪರಿಶೀಲನೆ



ಕುಡಿಯುವ ನೀರು ಪೂರೈಸುವ ಅಮೃತ್ 2.0 ಯೋಜನೆಯ ಕಾಮಗಾರಿಯನ್ನು ಪುರಸಭೆ ಅಧಿಕಾರಿಗಳು ಪರಿಶೀಲಿಸಿದರು.

ಗುಂಡ್ಲುಪೇಟೆ: ಕಬಿನಿ ನದಿಯಿಂದ ಪಟ್ಟಣಕ್ಕೆ ಕುಡಿಯುವ ನೀರು ಪೂರೈಸುವ ಅಮೃತ್ 2.0 ಯೋಜನೆಯ ಕಾಮಗಾರಿಯನ್ನು ಪುರಸಭೆ ಅಧಿಕಾರಿಗಳು ಪರಿಶೀಲಿಸಿದರು.

ಪುರಸಭೆ ಮುಖ್ಯ ಅಧಿಕಾರಿ ಸರವಣ ಹಾಗೂ ಇಂಜಿನಿಯರ್ ಮಂಜುನಾಥ್ ಯೋಜನೆಯ ಅನುಮೋದಿತ ಡಿಪಿಆರ್ ಪ್ರಕಾರ ಕಾಮಗಾರಿ ನಡೆದಿರುವ ಬಗ್ಗೆ ಒಳಚರಂಡಿ ಮಂಡಲಿಯ ಇಇ ಉಮೇಶ್, ಎಇಇ ಮಂಜುನಾಥ್, ನಟರಾಜು ಚೈತ್ರರೊಂದಿಗೆ ದೇಬೂರಿನ ಜಾಕ್‌ವೆಲ್ ಹಾಗೂ ಪಂಪ್ ಹೌಸ್‌ಗೆ ಭೇಟಿ ನೀಡಿ ನದಿಯಿಂದ ನೀರೆತ್ತುವ ಮೋಟಾರುಗಳು ಪ್ರತಿ ವರ್ಷ ಮುಂಗಾರು ಮಳೆ ಸಂದರ್ಭದಲ್ಲಿ ನೀರೆತ್ತುವ ಮೋಟರ್ ನೀರಿನಲ್ಲಿ ಮುಳುಗುತಿರುವುದನ್ನು ತಪ್ಪಿಸುವ ಬಗ್ಗೆ ಚರ್ಚಿಸಿದರು.

ಮೂರು ಮೀಟರ್ ಎತ್ತರಕ್ಕೆ ಮೋಟಾರ್ ಅಳವಡಿಸುವ ಕಾಮಗಾರಿ, ಹೊಸದಾಗಿ ಮೋಟಾರ್, ಎರಡು ಟ್ರಾನ್ಸ್‌ಫಾರ್ಮರ್ ಪ್ಯಾನೆಲ್ ಬೋರ್ಡ್ ಅಳವಡಿಕೆ, ದೇಬೂರಿನಿಂದ ಪಟ್ಟಣದ ಹೊರವಲಯದ ರಾಮದೇವರ ಗುಡ್ಡದ ಬಳಿ ನಿರ್ಮಿಸುತ್ತಿರುವ 45 ಕಿಮೀ ಪೈಪ್ ಲೈನ್ ಮುಂತಾದ ಕಾಮಗಾರಿಯನ್ನು ಪರಿಶೀಲನೆ ಮಾಡಿದರು.

ಪ್ರತಿಯೊಬ್ಬರಿಗೂ ಆರೋಗ್ಯ ಕಾಳಜಿ ಬಹಳ ಮುಖ್ಯ: ಜಿಲ್ಲಾ ಎಸ್ಪಿ ಡಾ.ಬಿ.ಟಿ.ಕವಿತ

ಚಾಮರಾಜನಗರ : ರೋಟರಿ ಸಂಸ್ಥೆ, ನಾರಾಯಣ ಹೃದ್ರೋಗ ಚಿಕಿತ್ಸಾಲಯ, ಮೈಸೂರು ವತಿಯಿಂದ ನಗರದಲ್ಲಿ ಬೃಹತ್ ಆರೋಗ್ಯ ಶಿಬಿರ, ಆರೋಗ್ಯ ಜಾಗೃತಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ನಗರದ ವರನಟ ಡಾ.ರಾಜ್‌ಕುಮಾರ್ ಕಲಾಮಂದಿರದಲ್ಲಿ ನಡೆದ ಬೃಹತ್ ಆರೋಗ್ಯ ಶಿಬಿರದಲ್ಲಿ 280 ಮಂದಿ ಭಾಗವಹಿಸಿ ಬಿಪಿ, ಶುಗರ್, ಇಸಿಜಿ, ಯುಕೋ ಪರೀಕ್ಷೆ ಮಾಡಿಸಿಕೊಂಡರು. ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತ ಮಾತನಾಡಿ, ಪ್ರತಿಯೊಬ್ಬರಿಗೂ ಆರೋಗ್ಯ ಬಹಳ ಮುಖ್ಯವಾಗಿದ್ದು, ಆರೋಗ್ಯ ಇಲ್ಲದಿದ್ದರೆ ಏನೇ ಇದ್ದರೂ ಎಲ್ಲ ಶೂನ್ಯವಾಗುತ್ತದೆ ಹಾಗಾಗಿ ಪ್ರತಿಯೊಬ್ಬರೂ ಆರೋಗ್ಯದ ಬಗ್ಗೆ ನಿಗಾವಹಿಸಿ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ರೋಟರಿ ಸಂಸ್ಥೆಯು ಪೊಲೀಸರಿಗೆ ಆರೋಗ್ಯ ಶಿಬಿರ ಆಯೋಜಿಸಿರುವುದು ತುಂಬಾ ಸಂತಸವಾಗಿದ್ದು, ಪೊಲೀಸ್ ಇಲಾಖೆಯೂ ರೋಟರಿ ಸಂಸ್ಥೆಗೆ ಈ ಮೂಲಕ ಅಭಿನಂದನೆ ಸಲ್ಲಿಸಲಾಗುವುದು ಎಂದರು.

ಮೈಸೂರು ನಾರಾಯಣ ಹೃದ್ರೋಗ ಆಸ್ಪತ್ರೆಯ ಹೃದಯ ತಜ್ಞ ಡಾ.ವಿ.ಕೇಶವ ಮೂರ್ತಿ ಮಾತನಾಡಿ, 30 ರಿಂದ 35 ವರ್ಷದೊಳಗಿನವರಲ್ಲಿ ಹೃದಯ ರೋಗ ಕಾಣಿಸಿಕೊಳ್ಳುತ್ತಿದ್ದು, ದೇಶದಲ್ಲಿ ಸಾವಿನ ಸಂಖ್ಯೆ ಹೆಚ್ಚಾಗುತ್ತಿದೆ. ಪ್ರತಿ ವರ್ಷವೂ ಪ್ರಪಂಚದಾದ್ಯಂತ 2 ಕೋಟಿ ಜನರು ಹೃದಯ ರೋಗದಿಂದ ಮೃತಪಡುತ್ತಿದ್ದಾರೆ. ಅದರಲ್ಲಿ ಭಾರತದಲ್ಲಿ 1 ಕೋಟಿ ಜನರು ಸಾಯುತ್ತಿದ್ದಾರೆ ಎಂದರು.



ಬೃಹತ್ ಆರೋಗ್ಯ ಶಿಬಿರ, ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ ಕವಿತ ಉದ್ಘಾಟಿಸಿದರು.

ಡಾ.ಅಶೋಕ್ ಹೃದಯ ರೋಗ ತಡೆಗಟ್ಟುವ ಕುರಿತು ಪ್ರದರ್ಶನ ಮೂಲಕ ತರಬೇತಿ ನೀಡಿದರು. ಜಿಲ್ಲಾಧಿಕಾರಿ ಶಿಲ್ಪಾನಾಗ್ ಶುಭ ಕೋರಿದರು. ರೊ.ಸಿ.ಆರ್. ಹನುಮಂತು, ಸಹಾಯಕ ಗೌರ್‍ನರ್‌ಗಳಾದ ಡಾ.ರಾಘವೇಂದ್ರ ಪ್ರಸಾದ್, ಎಸ್.ಎಚ್.ಜಗದೀಶ್, ರೋಟರಿ ಕ್ಲಬ್ ಆಫ್ ಚಾಮರಾಜನಗರ ರೋಟರಿ ಸಂಸ್ಥೆ ಅಧ್ಯಕ್ಷ ಕಾಗಲವಾಡಿ ಚಂದ್ರು, ಕಾರ್ಯದರ್ಶಿ ಸಿದ್ದರಾಜು ಸಂಸ್ಥಾಪಕ ಸದಸ್ಯ ಶ್ರೀನಿವಾಸ ಶೆಟ್ಟಿ, ಕಮಲ್ ರಾಜ್, ಮುಂದಿನ ಸಾಲಿನ ಅಧ್ಯಕ್ಷ ಅಬ್ದುಲ್ ಅಜೀಜ್ ದೀನ, ಭವಾನಿ ದೇವಿ, ಹರೀಶ್ ಇತರರಿದ್ದರು.

ಕೇಂದ್ರ, ರಾಜ್ಯ ಸರ್ಕಾರದ ಆದೇಶದನ್ವಯ ಸಂಘ ಸ್ಥಾಪನೆ

ರೈತರು ಆತಂಕಕ್ಕೊಳಗಾಗದೆ ಸಂಘದ ಸದಸ್ಯರಾಗಿ

ಸಭೆಯಲ್ಲಿ ಬಿಲಿಗೆರೆಹುಂಡಿ ಪಿಎಸಿಎಸ್ ಅಧ್ಯಕ್ಷ ಎಂ.ಶೇಖರ್ ಮನವಿ



ಬಿಲಿಗೆರೆಹುಂಡಿ ಪಿಎಸಿಎಸ್ ಅಧ್ಯಕ್ಷ ಎಂ.ಶೇಖರ್ ಮಾತನಾಡಿದರು.

ತಿ.ನರಸೀಪುರ, ಸೆ.14– ಕೇಂದ್ರ ಮತ್ತು ರಾಜ್ಯ ಸರ್ಕಾರದ ಆದೇಶದನ್ವಯ ಒಂದು ಗ್ರಾಪಂಗೆ ಒಂದು ಸೊಸೈಟಿ ಇರಬೇಕೆಂಬ ನಿಯಮದಂತೆ ಬಿಲಿಗೆರೆ ಹುಂಡಿ ಸಹಕಾರ ಸಂಘ ಸ್ಥಾಪನೆಯಾಗಿದ್ದು, ರೈತರು ಆತಂಕಕ್ಕೊಳಗಾಗದೆ ಸಂಘದ ಸದಸ್ಯರಾಗುವಂತೆ ಬಿಲಿಗೆರೆ ಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಶೇಖರ್ ಮನವಿ ಮಾಡಿದರು.

ಗ್ರಾಮದ ಸಂಘದ ಆವರಣದಲ್ಲಿ ಭಾನುವಾರ ನಡೆದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘ ಸ್ಥಾಪನೆಯಾಗಿ ಒಂದು ವರ್ಷ ಕಳೆದಿದೆ. ಸಂಘ ಸ್ಥಾಪಿಸುವ ವೇಳೆ ಕಸಬಾ ಸಂಘ ತಂದಿದ್ದ ತಡೆಯಾಜ್ಞೆಯನ್ನು ಹೈಕೋರ್ಟ್ ವಜಾಗೊಳಿಸಿದೆ. ಈಗ ಪ್ರಕರಣ ಡಿ.ಆರ್.ಕೋರ್ಟ್‌ನಲ್ಲಿದ್ದು, ಅಲ್ಲಿಯೂ ನಮ್ಮ ಪರವಾಗಿಯೇ ಆಗಲಿದೆ. ಹೀಗಾಗಿ ರೈತರು ಯಾವುದೇ ಊಹಾಪೋಹಗಳಿಗೆ ಕಿವಿಗೊಡದೇ ಸಂಘದ ಸದಸ್ಯರಾಗಿ ಮುಂದೆ ಸಂಘದಿಂದ ಸಿಗುವ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಸಹಕಾರ ಬಂಧುಗಳು, ರೈತರು, ಷೇರುದಾರರ ಸಹಕಾರದಿಂದ ಸಹಕಾರ ಸಂಘ ಒಂದು ವರ್ಷಕ್ಕೆ ತನ್ನ ದಾಪುಗಾಲು ಇರಿಸಿದ್ದು, ಮುಂದಿನ ವರ್ಷದಿಂದ ಎಲ್ಲಾ ಸದಸ್ಯರಿಗೂ ಸಾಲ ವಿತರಣೆ ಮಾಡಲಾಗುತ್ತದೆ. ವಿನಾಕಾರಣ ಕೆಲವರು ಊಹಾಪೋಹಗಳನ್ನು ತೇಲಿ ಬಿಡುತ್ತಿದ್ದು, ಯಾರೂ ಸಹ ಇದಕ್ಕೆ ಕಿವಿಗೊಡಬೇಡಿ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಆದೇಶದಡಿ ಸಂಘ ಸ್ಥಾಪನೆಯಾಗಿದ್ದು, ಮುಂದಿನ ದಿನಗಳಲ್ಲಿ ಸಂಘವು ಅಭಿವೃದ್ಧಿ ಹೊಂದುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಸಂಘದ ಸಿಇಓ ಬಿ.ಸಿದ್ದರಾಜು ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಂಘದಲ್ಲಿ ಕಳೆದ ಆರ್ಥಿಕ ವರ್ಷದಲ್ಲಿ ಯಾವುದೇ ಸಾಲ ವಿತರಿಸಿಲ್ಲ. ಮುಂದಿನ ವರ್ಷ 2ರಿಂದ 3 ಕೋಟಿ ರೂ. ಕೆಸಿಸಿ ಸಾಲ ವಿತರಣೆ ಮಾಡುವ ಗುರಿ ಹೊಂದಲಾಗಿದೆ. ಈಗ ಸಂಘದ ಸದಸ್ಯತ್ವ ನೋಂದಾಯಿಸಿಕೊಂಡಿರುವ ಪ್ರಕಾರ 1.50 ಕೋಟಿ ಸಾಲ ಕೊಡಬಹುದಾಗಿದೆ. ಹಾಗಾಗಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಕೊಳ್ಳುವ ಮೂಲಕ ಸಂಘದಿಂದ ಸಿಗುವ ಸವಲತ್ತುಗಳನ್ನು ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಸಹಕಾರ ಸಂಘದಲ್ಲಿ ರೈತರು ನೋಂದಣಿ ಮಾಡಿಕೊಳ್ಳದ ಹಿನ್ನೆಲೆಯಲ್ಲಿ ಸಾಲ ವಿತರಣೆ ಸಾಧ್ಯವಾಗಿಲ್ಲ. ಸಾಲ ಬೇಕು ಎಂದು ರೈತರು ಅರ್ಜಿ ಕೊಟ್ಟರೆ ದಾಖಲಾತಿಯನ್ನು ಎಂಸಿಡಿಸಿಸಿ ಬ್ಯಾಂಕ್‌ಗೆ ಸಲ್ಲಿಸಲಾಗುತ್ತದೆ. ಆದರೆ ಈವರೆಗೆ ರೈತರು ಸಾಲಕ್ಕೆ ಬೇಡಿಕೆ ಇಟ್ಟಿಲ್ಲ ಎಂದರು.

ನಮ್ಮ ಗ್ರಾಪಂನಲ್ಲಿ ಬೈಲಾ ಪ್ರಕಾರ ಕಸಬಾ ಸಂಘದಿಂದ ಗ್ರಾಮಗಳು ಬಿಡುಗಡೆಯಾಗಿವೆ. ರೈತರು ಕಸಬಾದಲ್ಲಿ ಸಾಲಕ್ಕೆ ಅರ್ಜಿ ಹಾಕಿರುವುದನ್ನು ನಾವು ತಡೆಗಟ್ಟಲು ಹೋಗಿಲ್ಲ. ನಾವು ಸಂಘದ ಆಡಿಟ್ ಮಾಡಿಸಬೇಕು. ಅದಕ್ಕೆ 2 ತಿಂಗಳು ಕಾಲಾವಕಾಶ ಬೇಕಿರುವುದರಿಂದ ರೈತರಿಗೆ ತೊಂದರೆಯಾಗುತ್ತದೆಂಬ ಉದ್ದೇಶಕ್ಕೆ ಸಾಲ ನೀಡಿಕೆಗೆ ತಡೆಯೊಡ್ಡಲಿಲ್ಲ ಎಂದರು.

ಸಭೆಯಲ್ಲಿ ಉಪಾಧ್ಯಕ್ಷ ಪಿ.ಚಿನ್ನಬುದ್ದಿ, ನಿರ್ದೇಶಕರಾದ ಎಸ್.ಬಸವಣ್ಣ, ಎಂ.ವೆಂಕಟೇಶ್, ಎಸ್.ರಾಜೀವ್, ವಸಂತ, ಗೌರಮ್ಮಣಿ, ಕೆ.ಎಂ.ದೇವರಾಜು, ಎನ್.ಅಶ್ವಿನ್ ಸೇರಿದಂತೆ ಷೇರುದಾರರು, ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

> ಸಂಘದ ಸದಸ್ಯತ್ವ ಪಡೆಯಲು ಎಲ್ಲಾ ರೈತರು ಮುಂದಾಗಬೇಕು. ಸಣ್ಣ, ದೊಡ್ಡ ರೈತರು ಎಂಬ ತಾರತಮ್ಯವಿಲ್ಲದೇ ಆರ್‌ಟಿಸಿ ಹೊಂದಿರುವ ಎಲ್ಲರೂ ಸದಸ್ಯರಾಗಲು ಅವಕಾಶವಿದೆ. 10 ಗುಂಟೆ ಜಮೀನಿರುವ ರೈತರೂ ಸಂಘದ ಸದಸ್ಯತ್ವ ಪಡೆಯಬಹುದಾಗಿದೆ. ನಿಯಮಾನುಸಾರ ಸರ್ಕಾರ ನಮ್ಮ ಸಂಘಕ್ಕೆ ಎಲ್ಲಾ ಸೌಲಭ್ಯಗಳನ್ನು ನೀಡಲಿದ್ದು, ಮುಂದಿನ ದಿನಗಳಲ್ಲಿ ಸಂಘವು ಮಾದರಿ ಸಂಘವಾಗಿ ಹೊರಹೊಮ್ಮಲಿದೆ.
> –ಎಂ.ಶೇಖರ್, ಪಿಎಸಿಎಸ್ ಅಧ್ಯಕ್ಷ.

ವೃತ್ತಿನಿರತ ಛಾಯಾಗ್ರಾಹಕರ ಸಂಘದ ಪದಾಧಿಕಾರಿಗಳು ಆಯ್ಕೆ



ವೃತ್ತಿನಿರತ ಛಾಯಾಗ್ರಾಹಕರ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಹೆಚ್.ಡಿ.ಕೋಟೆ, ಸೆ.14– ಕೋಟೆ, ಸರಗೂರು ತಾಲೂಕು ವೃತ್ತಿನಿರತ ಛಾಯಾಗ್ರಾಹಕರ ಸಂಘದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ನಡೆದ ಕಾರ್ಯಕಾರಿ ಸಭೆಯಲ್ಲಿ ಎಲ್ಲಾ ಸದಸ್ಯರ ಒಮ್ಮತದಿಂದ ನೂತನ ಆಡಳಿತ ಮಂಡಳಿ ರಚಿಸಲಾಯಿತು. ನೂತನ ಅಧ್ಯಕ್ಷರಾಗಿ ಗುರುಸ್ವಾಮಿ, ಉಪಾಧ್ಯಕ್ಷ ವೆಂಕಿ, ಪ್ರಧಾನ ಕಾರ್ಯದರ್ಶಿ ಪರಮೇಶ್ ಗೌಡ, ಗೌರವಾಧ್ಯಕ್ಷ ರವಿಕುಮಾರ್ ಆರಾಧ್ಯ, ಸಹ ಕಾರ್ಯದರ್ಶಿ ಕುಮಾರ್, ಕಾರ್ಯಾಧ್ಯಕ್ಷ ಪಾರ್ಶ್ವನಾಥ, ಖಜಾಂಚಿ ರಮೇಶ್, ಸಂಚಾಲಕ ನಾಗು, ಲೆಕ್ಕ ಪರಿಶೋಧಕ ಸೋಮೇಶ, ನಿರ್ದೇಶಕ ಗುರು ಆಚಾರ್, ನಿಂಗರಾಜು, ಕುಮಾರ್, ಅನುಶ್ರೀ, ರಂಗನಾಥ್, ಪಿ.ಕೆ.ಕುಮಾರ್, ಮೂರ್ತಿ, ಸಿ.ಎಸ್.ರವಿ, ಮಹೇಂದ್ರ, ಸಲಹೆಗಾರರಾಗಿ ಬಾಲಸುಬ್ರಹ್ಮಣ್ಯಂ, ಸ್ವಾಮಿ, ಲಕ್ಷ್ಮಿ ಅವರನ್ನು ನೇಮಕ ಮಾಡಲಾಯಿತು.

ನಾಳೆ ವೀರಶೈವ ಮಹಾಸಭಾ ಸಭೆ

ನಂಜನಗೂಡು, ಸೆ.14– ತಾಲೂಕಿನ ಶ್ರೀಕ್ಷೇತ್ರ ಮಲ್ಲನಮೂಲೆ ಮಠದಲ್ಲಿ ಮಲ್ಲನಮೂಲೆ ಮಠಾಧ್ಯಕ್ಷರು ಹಾಗೂ ವೀರಶೈವ ಮಹಾಸಭಾ ಗೌರವಾಧ್ಯಕ್ಷ ಚನ್ನಬಸವಸ್ವಾಮಿಗಳ ನೇತೃತ್ವದಲ್ಲಿ ಸೆ.16ರಂದು ನಂಜನಗೂಡು ತಾಲೂಕು ವೀರಶೈವ ಮಹಾಸಭಾ ಮತ್ತು ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳ ಒಕ್ಕೂಟದ ಸಭೆಯನ್ನು ಏರ್ಪಡಿಸಲಾಗಿದೆ.

ತಾಲೂಕಿನ ವೀರಶೈವ ಮಹಾಸಭಾದ ಎಲ್ಲಾ ಸದಸ್ಯರು ಮತ್ತು ಸಮುದಾಯದ ಎಲ್ಲಾ ಮುಖಂಡರು, ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳ ಅಧಿಕಾರಿಗಳು ಮತ್ತು ಪದಾಧಿಕಾರಿಗಳು ಭಾಗವಹಿಸುವಂತೆ ಪ್ರಕಟಣೆ ತಿಳಿಸಿದೆ.

ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ: ರೈತ ಸ್ಥಳದಲ್ಲೇ ಸಾವು



ತಿ.ನರಸೀಪುರ, ಸೆ.14– ರಸ್ತೆ ದಾಟುತ್ತಿದ್ದ ದನಗಾಹಿ ರೈತನಿಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಭಾನುವಾರ ಸಂಜೆ ತಾಲೂಕಿನ ಮಾಡ್ರಹಳ್ಳಿ ಗೇಟ್‌ನಲ್ಲಿ ನಡೆದಿದೆ.

ತಾಲೂಕಿನ ಮಾಡ್ರಹಳ್ಳಿ ಗ್ರಾಮದ ಲೇ. ಮಹದೇವಸ್ವಾಮಿ ಅವರ ಪುತ್ರ ಕುಮಾರ್ (34) ಸಾವನ್ನಪ್ಪಿದ ರೈತ. ಈತ ಎಂದಿನಂತೆ ತಮ್ಮ ಜಮೀನಿನಲ್ಲಿ ಜಾನುವಾರುಗಳನ್ನು ಮೇಯಿಸಿಕೊಂಡು ಮನೆಗೆ ವಾಪಸ್ಸಾಗುತ್ತಿದ್ದ ವೇಳೆ ಮಾಡ್ರಹಳ್ಳಿ ಗೇಟ್‌ನಲ್ಲಿ ಕೊಳ್ಳೇಗಾಲದಿಂದ ಮೈಸೂರು ಕಡೆಗೆ ವೇಗವಾಗಿ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ (ಕೆಎ.57, ಎಫ್.3989) ಬಸ್ ಡಿಕ್ಕಿ ಹೊಡೆದ ಪರಿಣಾಮ ಕುಮಾರ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಪ್ರತಿಭಟನೆ: ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಮಾಡ್ರಹಳ್ಳಿ ಗ್ರಾಮಸ್ಥರು ಕೆಲ ಕಾಲ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಸಾರಿಗೆ ಬಸ್ಸುಗಳ ಅತೀ ವೇಗ ನಿಯಂತ್ರಣ ತಪ್ಪುತ್ತಿದ್ದು, ಚಾಲಕನ ಬೇಜವಾಬ್ದಾರಿಯಿಂದಾಗಿ ರೈತನೋರ್ವ ಜೀವ ಕಳೆದುಕೊಂಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಸ್ತೆ ತಡೆಯಿಂದಾಗಿ ಮೈಸೂರು, ತಿ.ನರಸೀಪುರ, ಕೊಳ್ಳೇಗಾಲ ಹಾಗೂ ಚಾಮರಾಜನಗರ ನಡುವಿನ ವಾಹನಗಳ ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಸ್ಥಳಕ್ಕೆ ಕೆಎಸ್‌ಆರ್‌ಟಿಸಿ ಡಿಪೋ ಮ್ಯಾನೇಜರ್ ಕಲಾಶ್ರೀ ಮೋಹನ್, ಎಎಸ್ಪಿ ಮಲ್ಲಿಕಾ, ಡಿವೈಎಸ್ಪಿ ಜಿ.ಎಸ್.ರಘು, ಸಿಪಿಐ ಧನಂಜಯ ಹಾಗೂ ಎಸ್‌ಐ ಜಗದೀಶ್ ಧೂಳ್‌ಶೆಟ್ಟಿ ಭೇಟಿ ನೀಡಿ ಪರಿಶೀಲಿಸಿದರು. ಬಳಿಕ ಸಾವನ್ನಪ್ಪಿದ ವ್ಯಕ್ತಿ ಕುಟುಂಬಕ್ಕೆ ಒಂದು ತಿಂಗಳಲ್ಲಿ ಉದ್ಯೋಗ ಭರವಸೆ ನೀಡಿ, ಪರಿಹಾರವಾಗಿ 50 ಸಾವಿರ ರೂ. ನೀಡುವ ಭರವಸೆ ನೀಡಿದರು. ಅಲ್ಲದೇ ಸ್ಥಳದಲ್ಲೇ ಅಂತ್ಯಕ್ರಿಯೆಗೆ 25 ಸಾವಿರ ನೀಡಿ, ಮರಣ ಪ್ರಮಾಣ ಪತ್ರ ನೀಡಿದಾಗ ಇನ್ನುಳಿದ 25 ಸಾವಿರ ರೂ. ನೀಡುವುದಾಗಿ ತಿಳಿಸಿ ಪ್ರತಿಭಟನಾಕಾರರ ಮನವೊಲಿಸಿದ್ದರಿಂದ ಪ್ರತಿಭಟನೆ ಕೈಬಿಡಲಾಯಿತು.

ಪ್ರತಿಭಟನೆಯಲ್ಲಿ ಮುಖಂಡರಾದ ಕನ್ನಳ್ಳಿ ಲಕ್ಷ್ಮಣ, ಶಿವಕುಮಾರ್, ಬಸವರಾಜು, ಮರಿಸ್ವಾಮಿ, ಮಹೇಶ, ನಾಗೇಂದ್ರ, ಕುರುಬೂರು ಶಿವು ಮಹೇಶ್, ಕುಮಾರ್ ಹಾಗೂ ಗ್ರಾಮಸ್ಥರಿದ್ದರು.

ವೀರಶೈವ ಸೊಸೈಟಿಯಿಂದ ಸಾಮಾಜಿಕ ಕಾರ್ಯ

ಸಂಘದ ಅಧ್ಯಕ್ಷ ಎನ್.ಸಿ.ಬಸವಣ್ಣ ಮಾಹಿತಿ



ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ನಂಜನಗೂಡು, ಸೆ.14– ಸಮುದಾಯದ ಬಡ ಜನರಿಗೆ ಆರ್ಥಿಕ ನೆರವು ನೀಡುವ ಉದ್ದೇಶದಿಂದ ಸ್ಥಾಪಿತವಾದ ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮದ ಮೂಲಕ ಸಾಮಾಜಿಕ ಕಾರ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದೆ ಎಂದು ಸಂಘದ ಅಧ್ಯಕ್ಷ ಎನ್.ಸಿ.ಬಸವಣ್ಣ ತಿಳಿಸಿದರು.

ನಗರದ ಕಮಲಮ್ಮ ಗುರುಮಲ್ಲಪ್ಪ ಕಲ್ಯಾಣ ಮಂಟಪದಲ್ಲಿ ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸೊಸೈಟಿ ವತಿಯಿಂದ ಸಮುದಾಯದ ಸಾಕಷ್ಟು ಬಡವರು ಆರ್ಥಿಕ ನೆರವು ಪಡೆದು ಅಭಿವೃದ್ಧಿ ಹೊಂದಿದ್ದಾರೆ. ಜೊತೆಗೆ ಸಾಕಷ್ಟು ಬಡವರು ತಮ್ಮ ಮಕ್ಕಳ ಮದುವೆ ಮತ್ತು ವಿದ್ಯಾಭ್ಯಾಸಕ್ಕಾಗಿ ಸೊಸೈಟಿಯನ್ನು ಉಪಯೋಗಿಸಿಕೊಂಡಿದ್ದಾರೆ. ಸಮುದಾಯದ ಆರ್ಥಿಕ ನೆರವಿನ ಜೊತೆಗೆ ಸಮುದಾಯದ ಶೈಕ್ಷಣಿಕ ಪ್ರಗತಿಗಾಗಿ ಸಂಘವು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಿವಿಧ ರಂಗಗಳಲ್ಲಿ ಸಾಧನೆಗೈದ ಸಮುದಾಯದ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಮಾಡುವ ಮೂಲಕ ಸಮಾಜಮುಖಿ ಕೆಲಸಗಳಲ್ಲೂ ತೊಡಗಿಸಿಕೊಂಡು ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಧರ್ಮದ ಜೊತೆಗೆ ಸಮುದಾಯದ ಸಂಘಟನೆಯೂ ಕೂಡ ಆಗಬೇಕಿದೆ. ಜೊತೆಗೆ ನಮ್ಮ ಪರಂಪರೆ, ಸಂಸ್ಕೃತಿ, ಸಂಸ್ಕಾರಗಳನ್ನು ಮುಂದಿನ ಪೀಳಿಗೆ ಮಕ್ಕಳಲ್ಲಿ ಬೆಳೆಸಬೇಕು ಎಂಬ ಚಿಂತನೆಯಿಂದ ಸಂಘವು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಮುಂದಿನ ವರ್ಷ 20ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಸುತ್ತೂರು ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಸಂಘದ ಸ್ವಂತ ಕಟ್ಟಡಕ್ಕೆ ಗುದ್ದಲಿ ಪೂಜೆ ನೆರವೇರಿಸಲಾಗುವುದು ಎಂದು ಭರವಸೆ ನೀಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು, ವಿವಿಧ ರಂಗಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು.

ಈ ವೇಳೆ ಸೊಸೈಟಿ ಉಪಾಧ್ಯಕ್ಷ ಎಂ.ವಿ.ಶಿವಕುಮಾರ್, ನಿರ್ದೇಶಕರಾದ ವಿನಯ್ ಕುಮಾರ್, ಮಹೇಶ್, ಕೆಂಡಗಣ್ಣಸ್ವಾಮಿ, ಶಾಂತಕುಮಾರಿ, ಮಂಜುಳಾ, ರಮೇಶ್, ಶಿವಮಲ್ಲಪ್ಪ ಚೈತ್ರ ಪೂಜಾ, ಪ್ರಸನ್ನ ಕುಮಾರ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಚೆನ್ನಪ್ಪ ಮೈಸೂರು ಸಹಕಾರ ಬ್ಯಾಂಕ್ ನಿರ್ದೇಶಕ ಸದಾನಂದ, ವೀರಶೈವ ಮಹಾಸಭಾ ಅಧ್ಯಕ್ಷ ಎಸ್.ಎಂ.ಕೆಂಪಣ್ಣ ಸೇರಿದಂತೆ ಹಲವರಿದ್ದರು.

ಬಾಬೂಜಿ ಭವನಕ್ಕೆ ಎಂಎಲ್‌ಸಿ ತಿಮ್ಮಯ್ಯ ಭೇಟಿ, ಪರಿಶೀಲನೆ



ಡಾ.ಬಾಬು ಜಗಜೀವನ್ ರಾಂ ಭವನಕ್ಕೆ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಭೇಟಿ ನೀಡಿ ಪರಿಶೀಲಿಸಿದರು.

ಹುಣಸೂರು, ಸೆ.14– ನಗರದ ದಾವಣಿ ಬೀದಿಯಲ್ಲಿರುವ ಡಾ.ಬಾಬು ಜಗಜೀವನ್ ರಾಂ ಭವನಕ್ಕೆ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಭೇಟಿ ನೀಡಿ ಕೆಳಹಂತದ ಹಾಗೂ ಬಾಲ್ಕನಿ ಕಾಮಗಾರಿ ಪರಿಶೀಲಿಸಿದರು.

ನಂತರ ಮಾತನಾಡಿದ ಅವರು, ಈಗಾಗಲೇ ಎಂಎಲ್‌ಸಿ ಕೋಟಾದಿಂದ 20 ಲಕ್ಷ ರೂ. ಅನುದಾನ ನೀಡಲಾಗಿದ್ದು, ಶಾಸಕರು ಅಗತ್ಯವಿರುವ 15 ಲಕ್ಷ ರೂ. ಬಿಡುಗಡೆಗೊಳಿಸಿ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ 3 ತಿಂಗಳೊಳಗೆ ಭವನದ ಕಾಮಗಾರಿ ಮುಗಿಸಿ ಸಾರ್ವಜನಿಕರ ಸೇವೆಗೆ ಸಮರ್ಪಿಸಬೇಕು ಎಂದರು. ತಹಸೀಲ್ದಾರ್ ಮಂಜುನಾಥ್, ಕುಮಾರ್, ತಾಲೂಕು ಆದಿಜಾಂಬವ ಸಂಘದ ಅಧ್ಯಕ್ಷ ಬಿ.ಶಿವಣ್ಣ, ಮುಖಂಡರಾದ ಸಣ್ಣ ಮಾದಯ್ಯ, ನಾಗರಾಜ್, ಸೌರಬ್, ಮೋಹನ್, ಯುವ ಮುಖಂಡರಾದ ಪ್ರಣಬ್, ಹರ್ಷ, ಪಾಲಾಕ್ಷ ಸೇರಿದಂತೆ ಇನ್ನಿತರರಿದ್ದರು.

ಬೈಕ್‌ಗೆ ಕಾರು ಡಿಕ್ಕಿ: ಸವಾರ ಸಾವು

ನಂಜನಗೂಡು, ಸೆ.14– ಬೈಕ್‌ಗೆ ಕಾರು ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿ, ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಗೋಳೂರು ಗ್ರಾಮದ ವಿದ್ಯಾಪೀಠದ ಬಳಿ ನಡೆದದೆ.

ಗೋಳೂರು ಗ್ರಾಮದ ನಿವಾಸಿ ಜೀವನ್ ಕುಮಾರ್ (25) ಸಾವನ್ನಪ್ಪಿದವರು. ಈತ ಹೆಮ್ಮರಗಾಲದಿಂದ ಗೋಳೂರು ಗ್ರಾಮಕ್ಕೆ ತನ್ನ ಸ್ನೇಹಿತ ಶ್ರೀನಿವಾಸ್ ಜೊತೆ ಬೈಕ್‌ನಲ್ಲಿ ಚಾಮರಾಜನಗರ ಮುಖ್ಯರಸ್ತೆಯಲ್ಲಿ ತೆರಳುತ್ತಿದ್ದ ವೇಳೆ ವೇಗವಾಗಿ ಬಂದ ಕಾರು ಬೈಕ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದು ಉರುಳಿಬಿದ್ದು, ಜಖಂಗೊಂಡಿದೆ. ಈ ವೇಳೆ ತೀವ್ರ ಗಾಯಗೊಂಡ ಜೀವನ್ ಕುಮಾರ್ ಸ್ಥಳದಲ್ಲೇ ಸಾವನ್ನಪ್ಪಿದರೇ, ಹಿಂಬದಿ ಸವಾರ ಶ್ರೀನಿವಾಸ್‌ಗೆ ಗಂಭೀರ ಗಾಯವಾಗಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆ ಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆ ಬಳಿಕ ಕಾರು ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯ ಉಪ ನಿರೀಕ್ಷಕ ಕೃಷ್ಣಕಾಂತ ಕೋಳಿ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಗರಹೊಳೆಯಲ್ಲಿ ತಾಯಿಯೊಂದಿಗೆ ಮರಿ ಹುಲಿಗಳು





ಹೆಚ್.ಡಿ.ಕೋಟೆ ತಾಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ದಮ್ಮನಕಟ್ಟೆ ಸಫಾರಿ ಕೇಂದ್ರ ವ್ಯಾಪ್ತಿಯ ನಾಯಂಜಿ ಕಟ್ಟೆ ಬಳಿ ತಾಯಿ ಹುಲಿ ತನ್ನ ಎರಡು ಮರಿಗಳೊಂದಿಗೆ ನಡೆದು ಹೋಗುತ್ತಿರುವುದು. ಮತ್ತೊಂದು ಚಿತ್ರದಲ್ಲಿ ತಾಯಿ ಹುಲಿ ತನ್ನ ಎರಡು ಮರಿಗಳ ಜೊತೆಗೂಡಿ ಆಟವಾಡುತ್ತಿರುವ ದೃಶ್ಯವನ್ನು ವನ್ಯಜೀವಿ ಛಾಯಾಗ್ರಾಹಕ ಚಿರತೆ ಯೋಗೇಶ್ ತಮ್ಮ ಕ್ಯಾಮರಾದಲ್ಲಿ ಸೆರೆ ಹಿಡಿದಿದ್ದಾರೆ.

ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಡಾ.ಬಿ.ದಿನೇಶ್



ಬೆಂಗಳೂರಿನ ಶ್ರೀಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನೂತನ ನಿರ್ದೇಶಕ ಡಾ.ಬಿ.ದಿನೇಶ್ ಅವರು ಸುತ್ತೂರು ಮಠಕ್ಕೆ ಭೇಟಿ ನೀಡಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು. ಈ ವೇಳೆ ಮೈಸೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ದೊಡ್ಡಬಾಗಿಲು ಎಂ.ಮಹದೇವಸ್ವಾಮಿ, ಮಹದೇವ, ಕೋಣಗಹಳ್ಳಿ ನಾಗರಾಜೇಗೌಡ, ನಿವೃತ್ತ ಅಧಿಕಾರಿ ಶಾಂತ ಮಲ್ಲೇಶಪ್ಪ ಸೇರಿದಂತೆ ಇತರರಿದ್ದರು.

ಕಂಪಲಾಪುರಕೊಪ್ಪಲು ಡೇರಿ ವಾರ್ಷಿಕ ಮಹಾಸಭೆ



ಕಂಪಲಾಪುರಕೊಪ್ಪಲು ಡೇರಿ ಮಹಾಸಭೆಯನ್ನು ಅಧ್ಯಕ್ಷ ಕೆ.ಗೋಪಾಲ್ ಉದ್ಘಾಟಿಸಿದರು.

ಕಂಪಲಾಪುರ, ಸೆ.14– ಕಂಪಲಾಪುರಕೊಪ್ಪಲು ಹಾಲು ಉತ್ಪಾದಕರ ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಸಂಘದ ಆವರಣದಲ್ಲಿ ನಡೆಯಿತು.

ಸಿಇಓ ಹೆಚ್.ಲೋಕೇಶ್ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಂಘದಲ್ಲಿ ಒಟ್ಟು 76 ನಿರ್ದೇಶಕರಿದ್ದು, ನಿತ್ಯ 400 ಲೀಟರ್ ಹಾಲು ಶೇಖರಣೆಯಾಗುತ್ತಿದೆ. ಅಲ್ಲದೇ ಈ ಬಾರಿ ಸಂಘ 1.05 ಲಕ್ಷ ನಿವ್ವಳ ಲಾಭಗಳಿಸಿದೆ ಎಂದರು.

ಕೆಲ ಸದಸ್ಯರು ರಾಸು ವಿಮೆ ಬಗ್ಗೆ ನಮಗೆ ಸರಿಯಾಗಿ ಮಾಹಿತಿ ನೀಡುತ್ತಿಲ್ಲ. ಜೊತೆಗೆ ವಾರ್ಷಿಕ ಮಹಾಸಭೆಯ ಖರ್ಚು ವೆಚ್ಚಗಳ ಲೆಕ್ಕ ಕೊಡಿ ಎಂದಾಗ ಇದಕ್ಕೆ ಪ್ರತಿಕ್ರಿಯಿಸಿದ ವಿಸ್ತರಣಾಧಿಕಾರಿ ಎಂ.ನಂದಿನಿ ಸಭಾ ನಿಯಮದಂತೆ ಎಲ್ಲಾ ಷೇರುದಾರರಿಗೆ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಈಗಾಗಲೇ ತಲುಪಿಸಿದ್ದು, ಸಭೆ ದಿನ ಏನೇ ಪ್ರಶ್ನೆಗಳಿದ್ದರೂ, 3 ದಿನಗಳ ಹಿಂದೆಯೇ ಸಂಘಕ್ಕೆ ಲಿಖಿತವಾಗಿ ಅರ್ಜಿ ನೀಡಬೇಕೆಂಬ ನಿಯಮವಿದೆ. ಆದರೆ ಏಕಾಏಕಿ ಲೆಕ್ಕ ನೀಡಿ ಅಂದರೆ ಕೊಡುವುದಕ್ಕೆ ಹೇಗೆ ಸಾಧ್ಯ ಎಂದರು.

ಅಧ್ಯಕ್ಷ ಕೆ.ಗೋಪಾಲ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಉಪಾಧ್ಯಕ್ಷೆ ಶೀಲಾ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ.ರಮೇಶ್, ಗ್ರಾಪಂ ಸದಸ್ಯ ರಾಮಲಿಂಗ, ಚಿಕ್ಕಣ್ಣ ಅನಿಲ್, ನಿರ್ದೇಶಕರಾದ ಕೆ.ಎಂ.ಲಕ್ಷ್ಮಣ್, ಗಿರೀಶ್, ಚಂದ್ರು, ಸಿದ್ದಪ್ಪ, ಕುಮಾರ, ದಿನೇಶ್, ಚನ್ನಪ್ಪ, ಸದಾನಂದ, ಪುಟ್ಟಮ್ಮ, ಹಾಲು ಪರೀಕ್ಷಕ ಮಂಜು ಸೇರಿದಂತೆ ಇನ್ನಿತರರಿದ್ದರು.

ವಿದ್ಯಾರ್ಥಿಗಳಿಗೆ ಅಭಿನಂದನೆ



ಕ್ರೀಡಾಕೂಟದಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳನ್ನು ಕಾಣಬಹುದು.

ಸರಗೂರು, ಸೆ.14– ತಾಲೂಕಿನ ಇಟ್ನಾ ಗ್ರಾಮದಲ್ಲಿ ನಡೆದ ಸರಗೂರು ವಲಯ ಮಟ್ಟದ ಕ್ರೀಡಾಕೂಟದಲ್ಲಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳನ್ನು ಜೆಎಸ್‌ಎಸ್ ಪ್ರೌಢಶಾಲೆ ವತಿಯಿಂದ ಅಭಿನಂದಿಸಲಾಯಿತು.

ಖೋಖೋ ಪ್ರಥಮ, ಕಬ್ಬಡ್ಡಿ ದ್ವಿತೀಯ, ವಾಲಿಬಾಲ್ ದ್ವಿತೀಯ, ಭರ್ಜಿ ಎಸೆತ ಪ್ರಥಮ, ಚಕ್ರ ಎಸೆತ ಪ್ರಥಮ, ಗುಂಡು ಎಸೆತ ಪ್ರಥಮ, 100 ಮೀಟರ್ ಓಟ ಪ್ರಥಮ, ತ್ರಿವಿಧ ಜಿಗಿತ ಪ್ರಥಮ, 1500 ಮೀಟರ್ ಓಟ ಪ್ರಥಮ, 400 ಮೀಟರ್ ಓಟ ತೃತೀಯ, 200 ಮೀಟರ್ ಓಟ ತೃತೀಯ, ಗುಂಡು ಎಸೆತ ತೃತೀಯ, ಎತ್ತರ ಜಿಗಿತ ತೃತೀಯ, 1500 ಮೀಟರ್ ಓಟ ತೃತೀಯ, 4x100 ರಿಲೇ ದ್ವಿತೀಯ ಸ್ಥಾನ ಪಡೆದು ವಿದ್ಯಾರ್ಥಿಗಳು ವಲಯ ಮಟ್ಟದಿಂದ ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಇದೇ ವೇಳೆ ವಿದ್ಯಾರ್ಥಿಗಳೊಂದಿಗೆ ಮುಖ್ಯ ಶಿಕ್ಷಕಿ ನಾಗರತ್ನ, ದೈಹಿಕ ಶಿಕ್ಷಣ ಶಿಕ್ಷಕರಾದ ನಂದೀಶ್, ಸಿದ್ದಲಿಂಗಸ್ವಾಮಿ, ಕೆ.ವಿ.ಸ್ವಾಮಿ, ಮಾಲಿನಿ, ಸುಮಲತಾ, ಉಮಾ, ವೆಂಕಟೇಶ್ ಇನ್ನಿತರರಿದ್ದರು.

ಕೆ.ಆರ್.ನಗರ ಕೆಎಸ್‌ಆರ್‌ಟಿಸಿ ನೌಕರರ ವಿವಿಧೋದ್ದೇಶ ಸಹಕಾರ ಸಂಘದ ಸಭೆ

50 ಲಕ್ಷ ನಿವ್ವಳ ಲಾಭದೊಂದಿಗೆ ಸಂಘ ಅಭಿವೃದ್ಧಿಯತ್ತ

ಅಧ್ಯಕ್ಷ ಎಂ.ಸುರೇಶ್



ಸಭೆಯಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕೆ.ಆರ್.ನಗರ, ಸೆ.14– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕೆ.ಆರ್.ನಗರ ನೌಕರರ ವಿವಿಧೋದ್ದೇಶ ಸಹಕಾರ ಸಂಘ ಪ್ರಸಕ್ತ ಸಾಲಿನಲ್ಲಿ 33 ಕೋಟಿ ರೂ. ವಹಿವಾಟು ನಡೆಸಿ, 50 ಲಕ್ಷ ರೂ. ನಿವ್ವಳ ಲಾಭ ಗಳಿಸಿ, 'ಎ' ಶ್ರೇಣಿಯಲ್ಲಿ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಎಂದು ಸಂಘದ ಅಧ್ಯಕ್ಷ ಎಂ.ಸುರೇಶ್ ತಿಳಿಸಿದರು.

ಪಟ್ಟಣದ ವಾಲ್ಮೀಕಿ ಸಮುದಾಯದ ಭವನದಲ್ಲಿ ನಡೆದ 2024–25ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಈ ಸಾಲಿನ ಚುನಾವಣೆಯಲ್ಲಿ ನಮ್ಮ ತಂಡ 5 ಭರವಸೆಗಳನ್ನು ನೀಡಿತ್ತು ಅದರಂತೆ ಸರ್ವ ಸದಸ್ಯರ ಸಮ್ಮುಖದಲ್ಲಿ ಈಡೇರಿಸಲಾಗಿದೆ ಎಂದರು.

ಹೊಸ ಸದಸ್ಯರಿಗೆ 1 ಲಕ್ಷದವರೆಗೆ ಸಾಲ, 4 ಲಕ್ಷಕ್ಕೆ ನಿಗದಿಯಾಗಿದ್ದ ಸಾಲವನ್ನು 1 ಲಕ್ಷ ಹೆಚ್ಚಿಸಿ 5.5 ಲಕ್ಷದವರೆಗೆ ಸಾಲ ನೀಡಲಾಗುತ್ತಿದೆ. ಮಹಿಳಾ ಸದಸ್ಯರಿಗೆ ಶೇ.7.5%, ಪುರುಷರಿಗೆ 8% ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತಿದ್ದು, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ 40ರಿಂದ 50 ಸಾವಿರಕ್ಕೆ ಹೆಚ್ಚಿಸಲಾಗಿದೆ. ನಿವೃತ್ತರಿಗೆ ಹಾಗೂ ಸದಸ್ಯತ್ವ ವಾಪಸ್ ಪಡೆದವರಿಗೆ ಮರಣ ನಿಧಿ ಶೇ.75% ವಾಪಸ್ ಕೊಡಲಾಗುವುದು. ಅಲ್ಲದೇ ನಿವೇಶನ ಖರೀದಿಸಲು 4 ಲಕ್ಷದವರೆವಿಗೂ ಸಾಲ ನೀಡಲಾಗುವುದು ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ವೃತ್ತಿಪರ ಶಿಕ್ಷಣ, ಸ್ನಾತಕೋತ್ತರ ಪದವಿ ಪಡೆದವರಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಈ ವೇಳೆ ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗದ ವಿಭಾಗೀಯ ತಾಂತ್ರಿಕ ಅಭಿಯಂತರ ಪಿ.ಮಹೇಶ್, ಪಟ್ಟಣದ ಬಸ್ ಡಿಪೋ ವ್ಯವಸ್ಥಾಪಕ ಎ.ಡಿ.ಕುಮಾರ್, ಸಹಾಯಕ ಸಂಚಾರ ಅಧೀಕ್ಷಕಿ ರಾಜೇಶ್ವರಿ, ಮಾಜಿ ಅಧ್ಯಕ್ಷ ರಾಜೇಗೌಡ, ಸಂಘದ ಗೌರವಾಧ್ಯಕ್ಷ ಶಿವಾನಂದ ಕುಂಬಾರ, ಉಪಾಧ್ಯಕ್ಷ ಹೆಚ್.ಪಿ.ಪ್ರವೀಣ, ನಿರ್ದೇಶಕರಾದ ಎನ್.ವೆಂಕಟೇಶ್, ಬಿ.ಕೆ. ಪೂರ್ಣಯ್ಯ, ಎಂ.ಡಿ.ಗಿರೀಶ್, ಪ್ರೇಮ್ ಕುಮಾರ್, ಜಿ.ಎಸ್.ಚೇತನ್, ಆರ್.ಅಶೋಕ್, ಶರಣಪ್ಪ ಅಳಗುಂಡಗಿ, ಎಂ.ಸಿ.ಹರೀಶ್ ಕುಮಾರ್, ತಾಂಡವ ಮೂರ್ತಿ, ಪಿ.ಅಶೋಕ, ಸಿ.ಸಿ.ಮಂಜುನಾಥ್, ದೇವರಾಜ್, ಎಸ್.ರೂಪ, ಸಿ.ರಾಧ, ಮಾಜಿ ನಿರ್ದೇಶಕ ಶಿವ ಕುಮಾರ್, ಧರ್ಮೇಗೌಡ, ಭಾರಾಗಣಿ, ಗೋವಿಂದರಾಜು, ಸುರೇಶ್, ನಾ.ಮ. ನಾಗರಾಜ್, ಬೇಲೂರು ಘಟಕದ ಶೇಖರ್, ಮಡಿಕೇರಿ ಘಟಕದ ಮ್ಯಾಕ್ಸ್ ಬ್ರೋನಿ ಸೇರಿದಂತೆ ಅನೇಕ ಸದಸ್ಯರು ಭಾಗವಹಿಸಿದ್ದರು.

ಪಿಎಚ್.ಡಿ ಪದವಿ



ಮೈಸೂರು, ಸೆ.14– ಡಾ.ಆರ್.ತಿಮ್ಮರಾಯಪ್ಪ ಅವರ ಮಾರ್ಗದರ್ಶನದಲ್ಲಿ ಎಸ್. ಉಷಾ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮಧುಸೂಧನ್ ನಿಧನ



ತಿ.ನರಸೀಪುರ, ಸೆ.14– ಪಟ್ಟಣದ ಕಡ್ಲೆ ರಂಗಮ್ಮನ ಬೀದಿ ನಿವಾಸಿ, ದನದ ವ್ಯಾಪಾರಿ ಮಧುಸೂದನ್ ಅಲಿಯಾಸ್ ಕರಿಯಪ್ಪ(48) ಭಾನುವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಸಹೋದರ ಪುರಸಭಾ ಸದಸ್ಯ ಬಾದಾಮಿ ಮಂಜು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕುರುಬ ಸಮುದಾಯದ ರುದ್ರಭೂಮಿಯಲ್ಲಿ ನಡೆಯಿತು. ಮೃತರ ನಿಧನಕ್ಕೆ ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ನಿರ್ದೇಶಕ ಸಂಜು, ಪುರಸಭೆ ಮಾಜಿ ಅಧ್ಯಕ್ಷ ಎನ್.ಎಸ್.ಬಸವರಾಜು, ಎನ್.ಮಹದೇವಸ್ವಾಮಿ, ಟಿ.ಎಂ.ನಂಜುಂಡಸ್ವಾಮಿ, ಎಸ್.ಮದನ್ ರಾಜ್, ಸದಸ್ಯ ಎಲ್.ಮಂಜುನಾಥ್, ಮಾಜಿ ಸದಸ್ಯ ರಾಘವೇಂದ್ರ, ಶಾಮಿಯನ ನಾಗೇಶ್ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

ಸ.ರ.ಸುದರ್ಶನರಿಗೆ ಭಾವಪೂರ್ಣ ನುಡಿ ನಮನ



ಸ.ರ.ಸುದರ್ಶನ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮೈಸೂರು,ಸೆ.14(ಪಿಎಂ)–ಇತ್ತೀಚೆಗೆ ನಿಧನರಾದ ಕನ್ನಡಪರ ಹೋರಾಟಗಾರ ಸ.ರ.ಸುದರ್ಶನ ಅವರಿಗೆ ಭಾನುವಾರ ಭಾವಪೂರ್ಣ ನುಡಿನಮನ ಸಲ್ಲಿಸ ಲಾಯಿತು.

ಮೈಸೂರಿನ ರಾಮಕೃಷ್ಣನಗರದ ನೃಪತುಂಗ ಶಾಲೆ ಆವರಣದ ರಮಾಗೋವಿಂದ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕನ್ನಡಪರ ಹೋರಾಟಗಾರರು, ಸಾಹಿತಿಗಳು, ಚಿಂತಕರಾದ ದಿ. ಸ.ರ.ಸುದರ್ಶನ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಕನ್ನಡ ಕ್ರಿಯಾ ಸಮಿತಿ ಮೈಸೂರು, ಕನ್ನಡ ವಿಕಾಸ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಸಂಸ್ಥೆ, ನೃಪತುಂಗ ಶಾಲೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ), ಸ.ರ.ಸುದರ್ಶನರ ಬಂಧು–ಬಳಗದಿಂದ ಏರ್ಪಡಿಸಿದ್ದ ಈ ಕಾರ್ಯಕ್ರಮದಲ್ಲಿ ಸ.ರ.ಸುದರ್ಶನ ಅವರು ಕನ್ನಡ ನಾಡು ನುಡಿಗೆ ನೀಡಿದ ಕೊಡುಗೆಗಳನ್ನು ಸ್ಮರಿಸಿ ನುಡಿ ನಮನ ಸಲ್ಲಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ಮ.ಗು.ಸದಾನಂದಯ್ಯ, ರಮಾಗೋವಿಂದ ರಂಗಮಂದಿರ ಸಮೀಪದ ರಸ್ತೆ ಹಾಗೂ ವೃತ್ತಕ್ಕೆ ಪ.ಮಲ್ಲೇಶ್ ಹಾಗೂ ಸ.ರ.ಸುದರ್ಶನ ಅವರ ಹೆಸರುಗಳನ್ನು ನಾಮಕರಣ ಮಾಡುವಂತೆ ನಗರ ಪಾಲಿಕೆಗೆ ಒಕ್ಕೊರಲಿನಿಂದ ನಾವು ಮನವಿ ಮಾಡಬೇಕಿದೆ. ಸ.ರ.ಸುದರ್ಶನ ಅವರು ಕನ್ನಡಪರ ಹೋರಾಟಗಾರರಾಗಿ ತಮ್ಮ ಜೀವನದ ಭಾಗಶಃ ಅವಧಿಯನ್ನು ಕನ್ನಡದ ದುಡಿಮೆಗಾಗಿ ಕಳೆದಿದ್ದಾರೆ. ಅವರ ಕನ್ನಡ ಕ್ರಿಯಾ ಸಮಿತಿ ಚಟುವಟಿಕೆ ಮುಂದುವರೆಸಲು ಎಲ್ಲರೂ ಸಹಕಾರ ನೀಡಬೇಕೆಂದು ಕೋರಿದರು.

ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಮಾತನಾಡಿ, ನಾನು 1994ರಲ್ಲಿ ಮೈಸೂರಿಗೆ ಬಂದಾಗ ಸ.ರ.ಸುದರ್ಶನ ಅವರ ಪರಿಚಯವಾಯಿತು. ನಾನು ಪ್ರಸಾರಾಂಗದ ನಿರ್ದೇಶಕನಾಗಿದ್ದ ವೇಳೆ ಅವರು ವಿಶ್ವಕೋಶದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಯಾವುದೇ ಕೆಲಸವಾದರೂ ಅತ್ಯಂತ ಬದ್ಧತೆಯಿಂದ ನಿಭಾಯಿಸುತ್ತಿದ್ದರು ಎಂದು ಹೇಳಿದರು.

ಪ್ರಸಾರಾಂಗದ ಮಾರಾಟ ವಿಭಾಗದ ಸಹಾಯಕ ನಿರ್ದೇಶಕರಾಗಿ ಅವರು ಸೇವೆ ಸಲ್ಲಿಸುವಾಗ ಪ್ರಸಾರಾಂಗವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದರು. ಅವರಿಗೆ ಅದ್ಭುತ ನೆನಪಿನ ಶಕ್ತಿ ಇತ್ತು. ಪ್ರಸಾರಾಂಗದ ಹಣಕಾಸು ವ್ಯವಸ್ಥೆ ಬಗ್ಗೆ ಅತ್ಯಂತ ಬದ್ಧತೆ ಹೊಂದಿದ್ದರು. ಯಾವುದೇ ಹೋರಾಟಗಳಿದ್ದರೂ ನನಗೆ ಕರೆ ಮಾಡಿ ಆಹ್ವಾನಿಸುತ್ತಿದ್ದರು. ನಾನು ಕನ್ನಡಪರ ಮತ್ತು ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದರೆ ಅದಕ್ಕೆ ಪ.ಮಲ್ಲೇಶ್ ಹಾಗೂ ಸ.ರ.ಸುದರ್ಶನ ಅವರ ಒಡನಾಟವೇ ಕಾರಣ ಎಂದರು.

ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಮಾತನಾಡಿ, ಗೋಕಾಕ್ ಚಳುವಳಿ ಸಂದರ್ಭದಲ್ಲಿ ನನಗೆ ಸ.ರ.ಸುದರ್ಶನ ಅವರ ಒಡನಾಟ ಸಿಕ್ಕಿತು. ನಮ್ಮಂತಹವರು ಕನ್ನಡ ಚಳವಳಿಯಲ್ಲಿ ತೊಡಗಿಸಿಕೊಳ್ಳಲು ಪ.ಮಲ್ಲೇಶ್, ಸ.ರ.ಸುದರ್ಶನ ಅವರು ಕಾರಣ. ಆದರೆ ನಾನು ಇದ್ದಕ್ಕಿದ್ದಂತೆ 1988ರಲ್ಲಿ ರಾಜಕಾರಣಕ್ಕೆ ಪ್ರವೇಶಿಸಿದೆ. ಆಗ ಈ ಬಗ್ಗೆ ಪ.ಮಲ್ಲೇಶ್ ಅಸಮಾಧಾನ ವ್ಯಕ್ತಪಡಿಸಿದ್ದರು. ಆಗ ಮಲ್ಲೇಶ್ ಅವರೇ ಹೈಕಮಾಂಡ್ ಇದ್ದಂತೆ ಇದ್ದರು ಎಂದರು.

ಸ.ರ.ಸುದರ್ಶನ ಅವರ ಅಗಲಿಕೆಯಿಂದ ಒಬ್ಬ ನೈಜ ಕನ್ನಡ ಸಂತನನ್ನು ಕಳೆದುಕೊಂಡಿದ್ದೇವೆ. ಮೈಸೂರಿನಲ್ಲಿ ಎಲ್ಲಿಯೂ ಪುರಂದರದಾಸರ ಹೆಸರಿನ ರಸ್ತೆ ಸಿಗುವುದಿಲ್ಲ. ಜಾತಿ ಹಿನ್ನೆಲೆಯಲ್ಲಿ ಮಹನೀಯರನ್ನು ನೋಡುವುದೇ ಇದಕ್ಕೆ ಕಾರಣ. ನಾನು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷನಾಗಿದ್ದ ವೇಳೆ ಪುರಂದರದಾಸರು ಸೇರಿದಂತೆ ಕನ್ನಡ ನಾಡು ನುಡಿಗೆ ಕೊಡುಗೆ ಕೊಟ್ಟ ಅನೇಕ ಮಹನೀಯರ ಹೆಸರುಗಳನ್ನು ವಸ್ತು ಪ್ರದರ್ಶನದ ರಸ್ತೆಗಳಿಗೆ ನಾಮಕರಣ ಮಾಡಲಾಯಿತು. ಈ ಮಹತ್ವದ ಕಾರ್ಯದ ನೇತೃತ್ವ ವಹಿಸಿದ್ದವರು ಸ.ರ.ಸುದರ್ಶನ ಎಂದರು.

ಪ್ರಗತಿಪರ ಚಿಂತಕರಾದ ಪ್ರೊ.ಕಾಳೇಗೌಡ ನಾಗವಾರ, ಪ್ರೊ.ಕಾಳಚೆನ್ನೇಗೌಡ, ರೈತ ಸಂಘದ ಹೊಸಕೋಟೆ ಬಸವರಾಜು, ಕನ್ನಡ ಪರ ಹೋರಾಟಗಾರರಾದ ಮೂಗೂರು ನಂಜುಂಡಸ್ವಾಮಿ, ಬಾಲಕೃಷ್ಣ, ಪ್ರಕಾಶಕರಾದ ಸಂಸ್ಕೃತಿ ಸುಬ್ರಹ್ಮಣ್ಯ, ಡಿ.ಎನ್.ಲೋಕಪ್ಪ, ಸುಯೋಗ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸ.ರ.ಸುದರ್ಶನ ಅವರ ಪುತ್ರಿ ನುಡಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಸ.ರ.ಸುದರ್ಶನ ಕನ್ನಡದ ಗಟ್ಟಿಧ್ವನಿ...

ಯಾವುದೇ ಅಪೇಕ್ಷೆ, ದ್ವೇಷ, ಅಸೂಯೆ ಇಲ್ಲದೇ ಕನ್ನಡದ ಕೈಂಕರ್ಯಕ್ಕಾಗಿ ನಿಸ್ವಾರ್ಥದಿಂದ ತಮ್ಮ ಕೊನೆ ಉಸಿರು ಇರುವರೆಗೂ ದುಡಿದವರು ಸ.ರ.ಸುದರ್ಶನ. ಅವರೊಬ್ಬ ಕನ್ನಡ ಗಟ್ಟಿಧ್ವನಿ. ಮೈಸೂರು ಮತ್ತು ಕರ್ನಾಟಕಕ್ಕೆ ಸಂಬಂಧಿಸಿದಂತೆ ಪರಂಪರೆಯ ಕೊಂಡಿ ಕಳಚಿ ಹೋಗುತ್ತಿವೆ. ಕನ್ನಡ ನಾಡು–ನುಡಿಗೆ ದುಡಿಯುವ ಒಂದು ತಲೆಮಾರು ಒಂದೆಡೆ ಕಣ್ಮರೆಯಾಗುತ್ತಿದ್ದರೆ, ಮತ್ತೊಂದೆಡೆ ಮೈಸೂರು ಪರಂಪರೆ ಉಳಿಸಿ–ಬೆಳೆಸುವ ಆಲೋಚನೆ ಇರುವ ಮತ್ತೊಂದು ತಲೆಮಾರು ಕೂಡ ಮರೆಯಾಗುತ್ತಿದೆ. ಇದು ಅತ್ಯಂತ ನೋವಿನ ಸಂಗತಿ.

-ರಘು ಕೌಟಿಲ್ಯ, ರಾಜ್ಯಾಧ್ಯಕ್ಷರು, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಿರಾಯ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಿರಾಯ್(ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾಘಿ–4 (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಘಾಟಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಘಾಟಿ (ತೆ)	4 ಪ್ರದರ್ಶನಗಳು
ಸಂಗಂ	
ಮಿರಾಯ್ (ತೆ)	4 ಪ್ರದರ್ಶನಗಳು
ಲಿಡೋ	
ಜಂಬೋ ಸರ್ಕಸ್(ಕ) + ಸನ್ ಆಫ್ ಮುತ್ತಣ್ಣ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ನಿದ್ರಾದೇವಿ ನೆಕ್ಸ್ಟ್ ಡೋರ್(ಕ) + ರಾಮನಗರ (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮರಗಳಿಗೆ ವಿದ್ಯುತ್ ದೀಪಾಲಂಕಾರ ಖಂಡಿಸಿ ಎಂಜಿಪಿಯಿಂದ ಅಪ್ಪಿಕೋ ಚಳುವಳಿ



ಮರಗಳಿಗೆ ವಿದ್ಯುತ್ ದೀಪಾಲಂಕಾರ ಖಂಡಿಸಿ, ಮೈಸೂರು ಗ್ರಾಹಕರ ಪರಿಷತ್(ಎಂಜಿಪಿ) ವತಿಯಿಂದ ಭಾನುವಾರ 'ಅಪ್ಪಿಕೋ ಚಳುವಳಿ' ನಡೆಸಲಾಯಿತು.

ಮೈಸೂರು, ಸೆ.14(ಎಂಕೆ)– ನಾಡಹಬ್ಬ ಮೈಸೂರು ದಸರಾ ಹಿನ್ನಲೆ ಮರಗಳಿಗೆ ವಿದ್ಯುತ್ ದೀಪಾಲಂಕಾರ ಮಾಡುತ್ತಿರುವುದನ್ನು ಖಂಡಿಸಿ, ಮೈಸೂರು ಗ್ರಾಹಕರ ಪರಿಷತ್(ಎಂಜಿಪಿ) ವತಿಯಿಂದ ಭಾನುವಾರ 'ಅಪ್ಪಿಕೋ ಚಳುವಳಿ' ನಡೆಸಲಾಯಿತು.

ಮೈಸೂರು–ಹುಣಸೂರು ರಸ್ತೆಯಲ್ಲಿರುವ ಜಿಲ್ಲಾಧಿಕಾರಿಗಳ ನಿವಾಸದ ಎದುರು ಜಮಾಯಿಸಿದ ಎಂಜಿಪಿ ಸದಸ್ಯರು, ವಿದ್ಯುತ್ ದೀಪಾಲಂಕಾರ ಮಾಡಿದ್ದ ರಸ್ತೆ ಬದಿಯಲ್ಲಿನ ಮರಗಳನ್ನು ಅಪ್ಪಿಕೊಂಡು ಮರಗಳನ್ನು ರಕ್ಷಿಸುವಂತೆ ಪ್ರತಿಭಟಿಸಿದರು.

ವಿದ್ಯುತ್ ದೀಪಾಲಂಕಾರ ಮಾಡುತ್ತಿರುವುದರಿಂದ ಮರಗಳಿಗೆ ಹಾಗೂ ಮರಗಳಲ್ಲಿ ವಾಸಿಸುವ ಪಕ್ಷಿಗಳಿಗೆ ಹಾನಿಯುಂಟಾಗುತ್ತದೆ. ಆದ್ದರಿಂದ ಕೂಡಲೇ ಮರಗಳಿಗೆ ವಿದ್ಯುತ್ ದೀಪಾಲಂಕಾರ ಮಾಡುವುದನ್ನು ನಿಲ್ಲಿಸಬೇಕು. ಅಲ್ಲದೆ ಈಗಾಗಲೇ ಮಾಡಿರುವುದನ್ನು ತೆರವುಗೊಳಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಮಾತನಾಡಿದ ಮೈಸೂರು ಗ್ರಾಹಕರ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಭಾಮಿ ಶೆಣೈ, ಕಳೆದ ಐದಾರು ವರ್ಷಗಳಿಂದ ಮರಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಬೇಡಿ ಎಂದು ಒತ್ತಾಯ ಮಾಡುತ್ತಲೇ ಬರುತ್ತಿದ್ದೇವೆ. ಆದರೂ ಚೆಸ್ಕಾಂನವರು ಮರಗಳಿಗೆ ವಿದ್ಯುತ್ ದೀಪಾಲಂಕಾರ ಮಾಡುತ್ತಿದ್ದಾರೆ. ಇದರಿಂದ ಇಡೀ ಮರದ ಬೆಳವಣಿಗೆಗೆ ತೊಂದರೆಯಾಗಲಿದೆ ಎಂದು ತಿಳಿಸಿದರು.

ಮರಗಳಿಗೆ ವಿದ್ಯುತ್ ದೀಪಾಲಂಕಾರ ಮಾಡುವುದರಿಂದ ಮರಗಳ ಬೆಳವಣಿಗೆ ಜೊತೆಗೆ ಮರದ ಬೇರಿಗೂ ಹಾನಿಯುಂಟಾಗಲಿದೆ. ಅಲ್ಲದೆ ಮರದಲ್ಲಿ ವಾಸ ಮಾಡುವ ಪಕ್ಷಿಗಳಿಗೂ ತೊಂದರೆಯಾಗಲಿದೆ. ವಿದ್ಯುತ್ ದೀಪಾಲಂಕಾರದ ಹೆಸರಿನಲ್ಲಿ ಮೈಸೂರಿನ ಪರಿಸರವನ್ನು ಕಡೆಗಣಿಸಲಾಗುತ್ತಿದೆ ಎಂದು ತೀವ್ರ ಅಸಮಾದಾನ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ವರ್ಷದಿಂದ ವರ್ಷಕ್ಕೆ ಮರಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಮರಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲು ಮೊಳೆಗಳನ್ನು ಹೊಡೆದು ಹಾಳು ಮಾಡಲಾಗುತ್ತಿದೆ. ಮೈಸೂರಿನ ಪರಿಸರ ಉಳಿಯಬೇಕಾದರೆ ಕೂಡಲೇ ಮರಗಳಿಗೆ ಮಾಡುತ್ತಿರುವ ವಿದ್ಯುತ್ ದೀಪಾಲಂಕಾರ ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಬಳಿಕ ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿ ಮಾಡಿ ವಿದ್ಯುತ್ ದೀಪಾಲಂಕಾರದಿಂದ ಮರಗಳಿಗೆ ಹಾಗೂ ಪರಿಸರದ ಮೇಲಾಗುವ ಹಾನಿ ಕುರಿತು ಮನವರಿಕೆ ಮಾಡಿಕೊಡಲಾಯಿತು. ಮೈಸೂರು ಗ್ರಾಹಕರ ಪರಿಷತ್‌ನ ಶೋಭನಾ, ಸಂಚಾಲಕ ದಯಾನಂದ ಸಾಗರ್, ಎಎಪಿ ಮಾಳವಿಕಾ ಗುಬ್ಬಿವಾಣಿ, ಪರಿಸರವಾದಿ ಭಾನು ಮೋಹನ್ ಮತ್ತಿತರರಿದ್ದರು.

ಅರಮನೆ ಅಂಗಳದಲ್ಲಿ

ಪ್ರಸಿದ್ಧ ಸಂಗೀತಗಾರರಿಂದ ವೈವಿಧ್ಯಮಯ ಕಾರ್ಯಕ್ರಮ

ಸೆ,22ರಂದು ಪದ್ಮಶ್ರೀ ಪುರಸ್ಕೃತ ಹರಿಹರನ್ ಗಾಯನದ ಮೂಲಕ ಮೋಡಿ

ಮೈಸೂರು, ಸೆ.14– ಮೈಸೂರು ದಸರಾ ಮಹೋತ್ಸವದಲ್ಲಿ ಅರಮನೆ ಅಂಗಳದ ಪ್ರಧಾನ ಸಾಂಸ್ಕೃತಿಕ ವೇದಿಕೆಯಲ್ಲಿ ಪ್ರಸಿದ್ಧ ಸಂಗೀತಗಾರರು ವೈವಿಧ್ಯಮಯ ಕಾರ್ಯಕ್ರಮ ಪ್ರಸ್ತುತಪಡಿಸಲಿದ್ದಾರೆ.

ಮೊದಲ ದಿನವಾದ ಸೆ.22ರಂದು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದ ನಂತರ ಖ್ಯಾತ ಗಾಯಕ ಪದ್ಮಶ್ರೀ ಪುರಸ್ಕೃತ ಹರಿಹರನ್ ಗಾಯನದ ಮೂಲಕ ಮೋಡಿ ಮಾಡಲಿದ್ದಾರೆ. ಸೆ.23ರಂದು ಥೈಕ್ಕುಡಂ ಬ್ರಿಡ್ಜ್ ಮ್ಯೂಸಿಕಲ್ ಬ್ಯಾಂಡ್‌ನಿಂದ ವಿಶೇಷ ಸಂಗೀತ ಹಾಗೂ ಅಭಿಷೇಕ್ ರಘುರಾಮ್ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಪ್ರಸ್ತುತಪಡಿಸಲಿದ್ದಾರೆ.

ಸೆ.24ರಂದು ಸೋಜುಗಾದ ಸೂಜಿಮಲ್ಲಿಗೆ ಖ್ಯಾತಿಯ ಗಾಯಕಿ ಅನನ್ಯ ಭಟ್ ಹಾಗೂ ಖ್ಯಾತ ಪಿಟೀಲು ವಾದಕರಾದ ಡಾ.ಮೈಸೂರು ಮಂಜುನಾಥ್ ಕಾರ್ಯಕ್ರಮ ನೀಡಲಿದ್ದಾರೆ. ಸೆ.25ರಂದು ಶ್ರೀ ನಿಮಿಷಾಂಬ ನೃತ್ಯ ಶಾಲೆಯ ವಿದ್ವಾನ್ ಶ್ರೀಧರ್ ಜೈನ್ ಹಾಗೂ ತಂಡದ ಕಲಾವಿದರಿಂದ ನೃತ್ಯ ಪ್ರದರ್ಶನ ಹಾಗೂ ಡಾ.ಮೊಹಿಸಿನ್ ಖಾನ್ ಅವರಿಂದ ಸಿತಾರ್ ವಾದನ ಪ್ರಸ್ತುತಗೊಳ್ಳಲಿದೆ. ಸೆ.26ಕ್ಕೆ ಪೊಲೀಸ್ ವಾದ್ಯಗೋಷ್ಠಿ, ಸೆ.27ರಂದು ಸಂಗೀತ ಸಂಯೋಜಕ ನಿಲಾದ್ರಿ ಕುಮಾರ್, ಸೆ.28ಕ್ಕೆ ಖ್ಯಾತ ಗಾಯಕ ವಿಜಯ್ ಪ್ರಕಾಶ್ ಗಾಯನ ಪ್ರಸ್ತುತಿ ಇರಲಿದೆ. ಸೆ.29ಕ್ಕೆ ಶ್ರೀಮತಿ ಇಂದೂ ನಾಗರಾಜ್ ಹಾಗೂ ಲಕ್ಷ್ಮೀ ನಾಗರಾಜ್ ಸಹೋದರಿಯರು ಮತ್ತು ಜಾನಪದ ಕಲಾವಿದ ಡಾ.ಮೈಸೂರು ಗುರುರಾಜ್ ಕಾರ್ಯಕ್ರಮ ಪ್ರಸ್ತುತಪಡಿಸಲಿದ್ದಾರೆ. ಪ್ರತಿದಿನ ಸಂಜೆ 4ರಿಂದ ರಾತ್ರಿ 10 ಗಂಟೆವರೆಗೆ ವೈವಿದ್ಯಮಯ ಕಾರ್ಯಕ್ರಮಗಳ ರಸದೌತಣ ಸವಿಯಬಹುದಾಗಿದೆ.

ಪ್ರಾಕ್ಟೀಸ್ ಮಾಡುತ್ತಿದ್ದಾಗಲೇ ಕುಸಿದು ಹೃದಯಾಘಾತದಿಂದ

ಹವ್ಯಾಸಿ ಬ್ಯಾಡ್ಮಿಂಟನ್ ಆಟಗಾರ ಸಾವು



ಮೈಸೂರು, ಸೆ.14–ಮೈಸೂರಿನ ನಿವಾಸಿಯೊಬ್ಬರು ಬೆಂಗಳೂರಿನಲ್ಲಿ ಗೆಳೆಯರ ಜೊತೆ ಬ್ಯಾಡ್ಮಿಂಟನ್ ಆಟವಾಡುತ್ತಿದ್ದಾಗ ಕುಸಿದು ಬಿದ್ದು ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ವರದಿಯಾಗಿದೆ.

ಮೈಸೂರಿನ ಇಟ್ಟಿಗೆಗೂಡಿನ ನಿವಾಸಿಯಾದ ಕೆಎಸ್‌ಆರ್‌ಟಿಸಿಯ ನಿವೃತ್ತ ಟ್ರಾಫಿಕ್ ಇನ್ಸ್‌ಪೆಕ್ಟರ್ ಎಂ.ಸಿ.ಗುರುದೇವ್(73) ಎಂಬುವರೇ ಹೃದಯಾಘಾತದಿಂದ ಸಾವನ್ನಪ್ಪಿದವರಾಗಿದ್ದಾರೆ. ಹವ್ಯಾಸಿ ಬ್ಯಾಡ್ಮಿಂಟನ್ ಆಟಗಾರರಾದ ಗುರುದೇವ್ ಪ್ರತಿ ನಿತ್ಯ ಬೆಳಗ್ಗೆ ಬ್ಯಾಡ್ಮಿಂಟನ್ ಪ್ರಾಕ್ಟೀಸ್ ಮಾಡುತ್ತಿದ್ದರು. ಶನಿವಾರ ಸ್ನೇಹಿತರ ಜೊತೆ ಕಾರ್ಯ ನಿಮಿತ್ತ ಬೆಂಗಳೂರಿಗೆ ತೆರಳಿದ್ದ ಅವರು ಎಂದಿನಂತೆ ಭಾನುವಾರ ಬೆಳಗ್ಗೆ ಬ್ಯಾಡ್ಮಿಂಟನ್ ಅಭ್ಯಾಸ ಮಾಡುವಾಗ ಕುಸಿದು ಬಿದ್ದಿದ್ದಾರೆ. ತಕ್ಷಣ ಸ್ನೇಹಿತರು ಅವರನ್ನು ಆಸ್ಪತ್ರೆಗೆ ಕರೆದೊಯ್ದರಾದರೂ ಅಷ್ಟರಲ್ಲಾಗಲೇ ಹೃದಯಾಘಾತದಿಂದ ಸಾವನ್ನಪ್ಪಿದ್ದರು. ದಿವಂಗತರು ಪತ್ನಿ ಕೌಶಲ್ಯ, ಪುತ್ರ ರಘು, ಪುತ್ರಿ ರಂಜಿತಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಪಾರ್ಥಿವ ಶರೀರವನ್ನು ಭಾನುವಾರ ರಾತ್ರಿ ಮೈಸೂರಿಗೆ ತರಲಾಗಿದ್ದು, ಸೋಮವಾರ(ಸೆ.15) ಬೆಳಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಿಗ್ವಿಜಯ ದಿವಸ್



ದಿಗ್ವಿಜಯ ದಿವಸ್ ಪ್ರಯುಕ್ತ ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆದ ರಾಜ್ಯ ಮಟ್ಟದ ಭಾಷಣ ಸ್ಪರ್ಧೆ ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಬಿಎಸ್‌ಎಸ್ ವಿದ್ಯಾಲಯದ ಕಾರ್ಯದರ್ಶಿ ವಾಸುದೇವ ಭಟ್, ಸಹಾಯಕ ಪ್ರಾಧ್ಯಾಪಕಿ ಡಾ.ಎಸ್.ಯಶಸ್ವಿನಿ, ಟ್ರಸ್ಟ್ ಪದಾಧಿಕಾರಿಗಳಾದ ಮುರಳೀಧರ್ ಭಟ್, ರುದ್ರಮೂರ್ತಿ, ಆಯುರ್ವೇದ ರಿಸರ್ಚ್ ಸೆಂಟರ್‌ನ ಲಕ್ಷ್ಮಿನಾರಾಯಣ ಶೆಣೈ, ವಾಸವಾಂಬ ಫುಡ್ ಸೆಂಟರ್‌ನ ವಿನಾಯಕ್ ಭಾಗವಹಿಸಿ, ಸ್ಪರ್ಧಿಗಳಿಗೆ ಶುಭ ಕೋರಿದರು.

ಸೆ.23ರಂದು ಮೈಸೂರಿಗೆ ಬಸವ ರಥ



ಬಸವ ಸಂಸ್ಕೃತಿ ಅಭಿಯಾನದ ಪೂರ್ವಭಾವಿ ಸಭೆಯಲ್ಲಿ ಅ.ಭಾ.ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜು ಮಾತನಾಡುತ್ತಿರುವುದು

ಮೈಸೂರು, ಸೆ.14(ಎಸ್‌ಪಿಎನ್)– ಬಸವ ಸಂಸ್ಕೃತಿ ಅಭಿಯಾನದ 'ಬಸವ ರಥ'ವು ಸೆ.23ರಂದು ಬೆಳಗ್ಗೆ 10ಕ್ಕೆ ಕೊಡಗಿನಿಂದ ಮೈಸೂರಿಗೆ ಆಗಮಿಸಲಿದೆ ಎಂದು ಜಾಗತಿಕ ಲಿಂಗಾಯತ ಮಹಾಸಭಾ ರಾಜ್ಯ ಕಾರ್ಯದರ್ಶಿ ಶರಣ ಮಹದೇವಪ್ಪ ಮಾಹಿತಿ ನೀಡಿದರು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠದ ಆವರಣದಲ್ಲಿ ಬಸವ ಸಂಸ್ಕೃತಿ ಅಭಿಯಾನ ಮೈಸೂರು ಸಮಿತಿ ಭಾನುವಾರ ಹಮ್ಮಿಕೊಂಡಿದ್ದ ಸದಸ್ಯರ ಪೂರ್ವಭಾವಿ ಸಭೆಯಲ್ಲಿ ಮಾಹಿತಿ ನೀಡಿದರು.

ಕೊಡಗಿನಿಂದ ಆಗಮಿಸುವ ಬಸವ ರಥವು ಹಿನಕಲ್‌ಗೆ ಆಗಮಿಸಿದಾಗ ಅಲ್ಲಿನ ಮುಖಂಡರು ಸ್ವಾಗತ ಕೋರಲಿದ್ದಾರೆ. ಬಳಿಕ ನಿವೇದಿತಾ ನಗರದ ಉದ್ಯಾನವನ ಮುಂಭಾಗ ಶಾಸಕ ಜಿ.ಟಿ.ದೇವೇಗೌಡರು ಬಸವರಥದ ಜೊತೆಗೆ 'ಬಸವ ಸಾಮರಸ್ಯದ ನಡಿಗೆ'ಗೆ ಚಾಲನೆ ನೀಡಲಿದ್ದಾರೆ. ಈ ವೇಳೆ ಸ್ಥಳೀಯ ಮುಖಂಡರು, ವೀರವನಿತೆ ರಾಣಿ ಚೆನ್ನಮ್ಮ ಸ್ವಯಂ ಸೇವಾ ಸಂಘದ ಪದಾಧಿಕಾರಿಗಳು, ಲಿಂಗಾಯತ ಮುಖಂಡರು, ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷ ಹಿನಕಲ್ ಬಸವರಾಜು ಸೇರಿದಂತೆ ಇತರರು ಭಾಗವಹಿಸಲಿದ್ದಾರೆ. ಮೈಸೂರು ನಗರ ಎಲ್ಲಾ ಮಠಾಧೀಶರು ಈ ವೇಳೆ ಭಾಗವಹಿಸಲಿದ್ದಾರೆ.


ಬಸವರಥವು ಸೆ.21ರಂದು ಹಾಸನ, ಸೆ.22 ಕೊಡಗು, ಸೆ.23 ಮೈಸೂರು, ಸೆ.24 ಚಾಮರಾಜನಗರ, ಸೆ.25ರಂದು ಮಂಡ್ಯ ಜಿಲ್ಲೆಯಲ್ಲಿ ಸಂಚರಿಸಲಿದೆ

ಬಳಿಕ ಚಾಮುಂಡಿಪುರಂ ವೃತ್ತದ ಮೂಲಕ ಬೆಳ್ಗೆ 11.30ಕ್ಕೆ ಬಸವರಥವು ಸುತ್ತೂರು ಮಠ ತಲುಪಲಿದೆ. ನಂತರ ಮಠದ ಆವರಣದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ ಎಂದು ಮಾಹಿತಿ ನೀಡಿದರು.

ಜಾಗೃತಿಗೆ ಒತ್ತು: ಬಸವ ಸಂಸ್ಕೃತಿಯ ಅಭಿಯಾನದಲ್ಲಿ ಹಳೆ ಮೈಸೂರು ಭಾಗದ ಲಿಂಗಾಯತ ಸಮುದಾಯ ಈ ಬಾರಿಯ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಒಗ್ಗಟ್ಟಿನಿಂದ ಪಾಲ್ಗೊಂಡು ಧರ್ಮದ ಕಾಲಂನಲ್ಲಿ 'ಲಿಂಗಾಯತ' ಎಂದೇ ನಮೂದು ಮಾಡುವಂತೆ ಸಮುದಾಯದಲ್ಲಿ ಜಾಗೃತಿ, ಇದರಿಂದಾಗುವ ಅನುಕೂಲಗಳ ಮಾಹಿತಿ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಪೂರ್ವಭಾವಿ ಸಭೆಯಲ್ಲಿ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ನಾಗರಾಜು ಬ್ಯಾತಳ್ಳಿ, ಮಾಜಿ ಅಧ್ಯಕ್ಷ ಪ್ರದೀಪ್ ಕುಮಾರ್ ಸೇರಿದಂತೆ ಎಲ್ಲಾ ಮಠಾಧೀಶರು, ಮುಖಂಡರು ಭಾಗವಹಿಸಿದ್ದರು.

ಜಯದೇವ ಆಸ್ಪತ್ರೆ ನಿರ್ದೇಶಕರಿಗೆ ಅಭಿನಂದನೆ



ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನೂತನ ನಿರ್ದೇಶಕರಾಗಿ ನೇಮಕಗೊಂಡ ಡಾ.ಬಿ. ದಿನೇಶ್ ಅವರನ್ನು ಮೈಸೂರಿನ ಅವರ ನಿವಾಸದಲ್ಲಿ ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಚಾಮರಾಜ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ನಿಶಾಂತ್ ಪಟೇಲ್, ಮುಖಂಡರಾದ ಚಿಕ್ಕ ಚಿಕ್ಕಣ್ಣ, ರಮೇಶ್, ಮೋಹನ್, ನಂದನ್ ಚಿಕ್ಕಣ್ಣ ಮತ್ತಿತರರು ಅಭಿನಂದಿಸಿದರು.

ಸಹಕಾರ ಕ್ಷೇತ್ರದ ಬೆಳವಣಿಗೆ ಸಮಾನತೆ, ಆರ್ಥಿಕ ಪ್ರಗತಿಗೆ ಹಾದಿಯಾಗಲಿದೆ

ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯ



ಶ್ರೀ ಶಾರದ ಪತ್ತಿನ ಸಹಕಾರ ಸಂಘದ ರಜತ ಮಹೋತ್ಸವದಲ್ಲಿ ಸ್ಮರಣ ಸಂಚಿಕೆಯನ್ನು ಹಿರಿಯ ಸಹಕಾರಿ ಹಾಗೂ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಬಿಡುಗಡೆ ಮಾಡಿದರು.

ಮೈಸೂರು, ಸೆ.14(ಎಂಕೆ)– ಗ್ರಾಮಾಂತರ ಪ್ರದೇಶ ಸೇರಿದಂತೆ ಇಡೀ ದೇಶದಲ್ಲಿ ಸಹಕಾರ ಕ್ಷೇತ್ರ ಉತ್ತಮವಾಗಿ ಬೆಳೆದರೆ ಎಲ್ಲರಿಗೂ ಸಮಾನತೆ, ಆರ್ಥಿಕ ಪ್ರಗತಿಗೆ ದಾರಿಯಾಗಲಿದೆ ಎಂದು ಹಿರಿಯ ಸಹಕಾರಿಯೂ ಆದ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಮೈಸೂರಿನ ಬೋಗಾದಿ ರಿಂಗ್ ರಸ್ತೆಯ ಜಿಎಲ್‌ಎನ್ ಕನ್‌ವೆನ್ಷನ್ ಹಾಲ್‌ನಲ್ಲಿ ಭಾನುವಾರ ಆಯೋಜಿಸಿದ್ದ ಶ್ರೀ ಶಾರದ ಪತ್ತಿನ ಸಹಕಾರ ಸಂಘದ ರಜತ ಮಹೋತ್ಸವ ಸಮಾರಂಭದಲ್ಲಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಹಕಾರ ಕ್ಷೇತ್ರ ಸ್ವಾಯತ್ತತೆಯಿಂದ ಕೆಲಸ ಮಾಡಿದಷ್ಟು ಅಭಿವೃದ್ಧಿ ಹೊಂದಿ ನೂರಾರು ಜನರಿಗೆ ನೆರವಾಗಲು ಕಾರಣವಾಗಲಿದೆ ಎಂದರು.

ಸ್ವಾತಂತ್ರ್ಯ ಪೂರ್ವ ಮತ್ತು ನಂತರದಲ್ಲಿ ಸಹಕಾರ ಕ್ಷೇತ್ರ ಸ್ವಾಯತ್ತತೆ, ಸ್ವಾವಲಂಬಿಯಾಗಿ ಕೆಲಸ ಮಾಡುತ್ತಿದೆ. ಸಹಕಾರ ಕ್ಷೇತ್ರದ ಬ್ಯಾಂಕ್ ಮತ್ತು ಸಂಘಗಳು ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಜನರಿಗೆ ಸಾಲ ಸೌಲಭ್ಯ ನೀಡಲು ಅನುಕೂಲವಾಗಲಿದೆ. ಹಣ್ಣು–ತರಕಾರಿ ವ್ಯಾಪಾರಿಗಳು, ಗುಡಿ ಕೈಗಾರಿಕೆ ನಡೆಸುವವರಿಗೆ ಸರ್ಕಾರಿ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ನೀಡುವುದಿಲ್ಲ. ಅಂತಹವರನ್ನು ಸಹಕಾರಿ ಬ್ಯಾಂಕ್‌ಗಳು ಸದಸ್ಯರನ್ನಾಗಿ ಮಾಡಿಕೊಂಡು ಸಾಲ ಸೌಲಭ್ಯ ನೀಡಿದರೆ ಅವರ ಆರ್ಥಿಕ ಪ್ರಗತಿಗೆ ದಾರಿಯಾಗಲಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರವಾಗಲೀ ರಾಜ್ಯ ಸರ್ಕಾರವಾಗಲೀ ಸಹಕಾರ ಸಂಘಗಳಿಗೆ ಅನುದಾನ ಕೊಡುತ್ತಿಲ್ಲ. ಶೇ.3ರಷ್ಟು ಬಡ್ಡಿದರದಲ್ಲಿ ಸಾಲ ಕೊಡಬಹುದೇ ಹೊರತು ಅಭಿವೃದ್ಧಿಗೆ ಹಣ ಕೊಡುತ್ತಿಲ್ಲ. ಸಹಕಾರ ಕ್ಷೇತ್ರ ನಮ್ಮದೆಂದು ಸರ್ಕಾರ ಹೇಳಿಕೊಳ್ಳುತ್ತಿದೆಯೇ ಹೊರತು ಅನುದಾನ ಕೊಡಲು ಮುಂದಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಹಕಾರ ಕ್ಷೇತ್ರ ರಾಜಕೀಯ ಮತ್ತು ಸರ್ಕಾರದ ಹಸ್ತಕ್ಷೇಪದಿಂದ ದೂರವಿರಬೇಕು. ಠೇವಣಿದಾರರು ಬ್ಯಾಂಕ್, ಸಂಘದ ಮೇಲೆ ವಿಶ್ವಾಸವಿಟ್ಟು ಠೇವಣಿ ಇಡುತ್ತಾರೆ. ಸದಸ್ಯರಿಗೆ ಕಾಲ ಕಾಲಕ್ಕೆ ಸೌಲಭ್ಯಗಳನ್ನು ನೀಡಿದರೆ ಮತ್ತಷ್ಟು ಪ್ರಗತಿ ಹೊಂದಬಹುದು ಎಂದು ಅಭಿಪ್ರಾಯ ಪಟ್ಟರು.

ಮೈಸೂರು ಜಿಲ್ಲಾ ಸಹಕಾರಿ ಯೂನಿಯನ್ ಅಧ್ಯಕ್ಷ ಹೆಚ್.ವಿ.ರಾಜೀವ್, ಶ್ರೀ ಶಾರದ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ವಿ.ವೆಂಕಟೇಶ್, ರಜತ ಮಹೋತ್ಸವ ಸಮಿತಿ ಅಧ್ಯಕ್ಷ ಡಾ.ಎ.ಎಸ್.ಚಂದ್ರಶೇಖರ್, ಉಪಾಧ್ಯಕ್ಷ ಕೆ.ವೆಂಕಟಕೃಷ್ಣ ಭಟ್, ನಿರ್ದೇಶಕರಾದ ಎಸ್.ವೆಂಕಟೇಶ್, ಟಿ.ಎನ್.ರಾಮದಾಸ್, ಎಂ.ಮಹೇಂದ್ರ, ಜೆ.ಎಸ್.ಗೋಪಾಲಕೃಷ್ಣ, ಕೆ.ಆರ್.ನಟರಾಜು, ಎಚ್.ಎಸ್.ಲಲಿತಾ ನಾಗರಾಜ್, ವೈ.ಕೆ.ರೇವತಿ, ಎಂ.ಆರ್.ಯೋಗೀಶ್, ಎಂ.ಗೋಪಾಲ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎಂ.ಜಿ.ಕೃಷ್ಣಮೂರ್ತಿ ಮತ್ತಿತರರಿದ್ದರು.

ಬಸ್ ಹತ್ತುವಾಗ ಮಹಿಳೆಯ ವ್ಯಾನಿಟಿ ಬ್ಯಾಗ್‌ನಲ್ಲಿದ್ದ ಸರ ಕಳವು

ಮೈಸೂರು, ಸೆ.14(ವಿವಿಹೆಚ್)– ಮಗುವಿನ ನಾಮಕರಣಕ್ಕಾಗಿ ಬಂದ ಮಹಿಳೆಯ 40 ಗ್ರಾಂ ಚಿನ್ನದ ಸರವನ್ನು ಕಳ್ಳತನ ಮಾಡಿರುವ ಘಟನೆ ಲಷ್ಕರ್ ಮೊಹಲ್ಲಾದಲ್ಲಿ ತಡವಾಗಿ ಬೆಳಕಿಗೆ ಬಂದಿದೆ. ತುಮಕೂರು ಜಿಲ್ಲೆಯ ತಿಪಟೂರಿನ ಎಚ್.ಇ.ಗೀತಾ ಚಿನ್ನ ಕಳೆದುಕೊಂಡರು. ಇವರು ಆ.4 ರಂದು ಶ್ರೀರಂಗಪಟ್ಟಣದ ಸಂಬಂಧಿಕರ ಮನೆಯಲ್ಲಿ ನಡೆದ ನಾಮಕರಣ ಶಾಸ್ತ್ರ ಕಾರ್ಯಕ್ರಮಕ್ಕೆ ಆಗಮಿಸಿ, ವಾಪಸ್ಸಾಗುವ ವೇಳೆ ಬಸ್ ನಿಲ್ದಾಣದಲ್ಲಿ ಚಿನ್ನದ ಸರವಿದ್ದ ಪರ್ಸ್ ಕಳುವಾಗಿದೆ.

ಮೈಸೂರು ಸಬ್‌ಅರ್ಬನ್ ಬಸ್ ನಿಲ್ದಾಣದಲ್ಲಿ ಮೈಸೂರಿನಿಂದ ತಿಪಟೂರು ಮಾರ್ಗವಾಗಿ ತೆರಳುವ ಬಸ್‌ಗೆ ಹತ್ತುವಾಗ ಜನಸಂದಣಿ ಹೆಚ್ಚಾಗಿದ್ದು, ನೂಕುನುಗ್ಗಲಿನಲ್ಲಿ ಬಸ್ ಹತ್ತಿದ್ದಾರೆ. ಈ ವೇಳೆ ವ್ಯಾನಿಟಿ ಬ್ಯಾಗ್ ಜಿಪ್ ತೆರೆದಿರುವುದು ಕಂಡುಬಂದಿದೆ. 40 ಗ್ರಾಂ ತೂಕದ ಚಿನ್ನದ ಸರ ಮತ್ತು ಗುಂಡುಗಳನ್ನು ಇಟ್ಟಿದ್ದ ಪರ್ಸ್ ಕಳುವಾಗಿರುವುದು ಗಮನಕ್ಕೆ ಬಂದಿದೆ. ತಿಪಟೂರಿಗೆ ವಾಪಾಸ್ ಹೋಗಿ ಮನೆಯವರೊಂದಿಗೆ ಮಾತನಾಡಿ, ತಡವಾಗಿ (ಸೆ.13) ದೂರು ನೀಡಿದ್ದಾರೆ. ಈ ಸಂಬಂಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಭಿನಂದನೆ



ಮೈಸೂರು ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದಲ್ಲಿ 4x100 ಮೀ ಫ್ರೀ ಸ್ಟೈಲ್ ರಿಲೇ ಈಜು ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮೈಸೂರಿನ ಸಂತ ಜೋಸೆಫ್ ಪಿಯು ಕಾಲೇಜಿನ ವಿದ್ಯಾರ್ಥಿ ಟೇರೆನ್ಸ್ ಎ. ಸಬಾಸ್ಟಿನ್ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಅವರನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ.ಆಂಟೋ ರಿಚರ್ಡ್ ಅಭಿನಂದಿಸಿದರು.

ಎಂ.ಎಸ್. ರಮೇಶಗೆ ಪಿಹೆಚ್.ಡಿ



ಮೈಸೂರು: ಡಾ. ಪುಟ್ಟಸ್ವಾಮಿ ಅವರ ಮಾರ್ಗದರ್ಶನದಲ್ಲಿ ಎಂ.ಎಸ್. ರಮೇಶ ಅವರು ಗಣಿತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಉಚಿತ ಕಾನೂನು ಸೇವೆಗಳ ಕ್ಲಿನಿಕ್ ಉದ್ಘಾಟನೆ

ಮೈಸೂರು, ಸೆ.14(ಎಂಕೆ)– ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿ ಸಮೀಪದಲ್ಲಿರುವ ಜಿಲ್ಲಾ ಸೈನಿಕ್ ಭವನದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ 'ವೀರ್ ಪರಿವಾರ್ ಸಹಾಯತಾ ಯೋಜನೆ'ಯಡಿ ಕಾನೂನು ಸೇವಾ ಸಮಿತಿಯ 'ಉಚಿತ ಕಾನೂನು ಸೇವೆಗಳ ಕ್ಲಿನಿಕ್' ಅನ್ನು ಉದ್ಘಾಟಿಸಲಾಯಿತು.

ನೂತನ ಉಚಿತ ಕಾನೂನು ಸೇವೆಗಳ ಕ್ಲಿನಿಕ್ ಉದ್ಘಾಟಿಸಿದ ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷರಾದ ಶ್ರೀಮತಿ ಅನು ಶಿವರಾಮನ್ ಮಾತನಾಡಿ, ಏಕಕಾಲದಲ್ಲಿ ರಾಜ್ಯದಲ್ಲಿನ 11 ಕಾನೂನು ಸೇವೆಗಳ ಕ್ಲಿನಿಕ್(10 ಆನ್‌ಲೈನ್ ಮೂಲಕ)ಗಳನ್ನು ಉದ್ಘಾಟಿಸಲಾಗಿದ್ದು, ಸೈನಿಕರು, ಮಾಜಿ ಸೈನಿಕರು ಹಾಗೂ ಅವರ ಕುಟುಂಬಸ್ಥರು ಕಾನೂನು ಸೇವೆಗಳನ್ನು ತ್ವರಿತವಾಗಿ ಪಡೆದುಕೊಳ್ಳಬಹುದಾಗಿದೆ. ದೇಶಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಡುವ ಸೈನಿಕರ ನೆಮ್ಮದಿ ಜೀವನಕ್ಕಾಗಿ ಮತ್ತು ಅವರ ಕುಟುಂಬಸ್ಥರ ಯಾವುದೇ ಕಾನೂನು ತೊಡಕುಗಳಿದ್ದರು ಈ ಸೇವಾ ಕ್ಲಿನಿಕ್‌ಗಳು ಸಹಕಾರಿಯಾಗಲಿದೆ ಎಂದರು.



ಮೈಸೂರು ಜಿಲ್ಲಾ ಸೈನಿಕ್ ಭವನದಲ್ಲಿ 'ಉಚಿತ ಕಾನೂನು ಸೇವೆಗಳ ಕ್ಲಿನಿಕ್' ಅನ್ನು ಹೈಕೋರ್ಟ್ ನ್ಯಾಯಮೂರ್ತಿಗಳು ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷರಾದ ಶ್ರೀಮತಿ ಅನು ಶಿವರಾಮನ್ ಉದ್ಘಾಟಿಸಿದರು.

ಜಿಲ್ಲಾ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ಹೆಚ್.ಶಶಿಧರಶೆಟ್ಟಿ ಮಾತನಾಡಿ, ಸೈನಿಕರಿಗಾಗಿ ಕಾನೂನು ಸಹಾಯ ಮಾಡಲು ನಾವಿದ್ದೇವೆ. ಕೋರ್ಟ್‌ನಲ್ಲಿ ನಿಮ್ಮ ಹಾಗೂ ನಿಮ್ಮ ಕುಟುಂಬಸ್ಥರ ಕೇಸ್‌ಗಳಿದ್ದರೆ ಲೋಕ ಅದಾಲತ್‌ನಲ್ಲಿ ಯಾವುದೇ ಖರ್ಚಿಲ್ಲದೆ ಶೀಘ್ರವಾಗಿ ಬಗೆಹರಿಸಲಾಗುವುದು. ಸೈನಿಕ್ ಭವನದಲ್ಲಿರುವ ನೂತನ 'ಉಚಿತ ಕಾನೂನು ಸೇವೆಗಳ ಕ್ಲಿನಿಕ್' ಅನ್ನು ಸದುಪಯೋಗ ಪಡೆದುಕೊಳ್ಳಿ ಎಂದು ಸಲಹೆ ನೀಡಿದರು.

ಪ್ರದಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷೆ ಉಷಾರಾಣಿ ಮಾತನಾಡಿ, ವೀರ ಪರಿವಾರದ ಸದಸ್ಯರ ಅನುಕೂಲಕ್ಕಾಗಿ ಉಚಿತ ಕಾನೂನು ಸೇವೆಗಳ ಕ್ಲಿನಿಕ್ ತೆರೆಯಲಾಗಿದ್ದು, ರಕ್ಷಣಾ ಸಿಬ್ಬಂದಿ, ಮಾಜಿ ಸೈನಿಕರು, ಅವರ ಅವಲಂಬಿತರಿಗೆ ಆಸ್ತಿ, ವೈವಾಹಿಕ ಮತ್ತು ನಾಗರಿಕ ವಿವಾದಗಳು ಹಾಗೂ ಕಲ್ಯಾಣ ಯೋಜನೆಗಳಿಗಾಗಿ ಕಾನೂನು ವಿಷಯಗಳಲ್ಲಿ ಉಚಿತ ಮತ್ತು ಸಮರ್ಥ ಕಾನೂನು ಸೇವೆಗಳು ಮತ್ತು ಸಹಾಯ ಒದಗಿಸಲಾಗುವುದು. ಅಲ್ಲದೆ ಆದ್ಯತಾ ಕಾನೂನು ಸೇವೆ ಮತ್ತು ಕಾನೂನು ಜಾಗೃತಿ ಮೂಡಿಸಲಾಗುವುದು.

ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ನಿರ್ದೇಶಕ ಎಂ.ಎಸ್.ಲೋಲಾಕ್ಷ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಕೆ.ಕೆ.ಅಮರನಾಥ್, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪನಿರ್ದೇಶಕ ಡಾ.ಜೆ.ಆರ್.ಬಾಲಸುಬ್ರಹ್ಮಣ್ಯಂ ಇನ್ನಿತರರು ಉಪಸ್ಥಿತರಿದ್ದರು.

ಸಾಧಕರಿಗೆ ಯೋಗ ವಿಭೂಷಣ, ಯೋಗ ನಕ್ಷತ್ರ ಪ್ರಶಸ್ತಿ ಪ್ರದಾನ

ಮೈಸೂರು,ಸೆ.14(ಜಿಎ)–ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಶಿವಾನಂದ ಜ್ಞಾನಾಲಯದಲ್ಲಿ ಹಿಮಾಲಯ ಪ್ರತಿಷ್ಠಾನದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯೋಗ ಕ್ಷೇತ್ರದಲ್ಲಿ ಗಣನೀಯ ಸಾಧನೆಗೈದ ಯೋಗ ಸಾಧಕರಿಗೆ ಯೋಗ ವಿಭೂಷಣ ಮತ್ತು ಯೋಗ ನಕ್ಷತ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಯೋಗ ಮಾಡುವುದರಿಂದ ಮನುಷ್ಯನಲ್ಲಿ ಸಕಾರಾತ್ಮಕ ಅಂಶ ಮೂಡಿ, ಉತ್ತಮ ಆಲೋಚನೆಗಳಿಂದ ಆರೋಗ್ಯಕರ ಸಮಾಜ ಕಟ್ಟಲು ಸಹಕಾರಿಯಾಗುತ್ತದೆ. ಜೀವನ ಶೈಲಿಯಲ್ಲಿ ಕಟ್ಟು ನಿಯಮಗಳನ್ನು ಪಾಲಿಸಿಕೊಂಡು ಆಹಾರ ಕ್ರಮ, ಚಟ್ಟಗಳ ಮೇಲೆ ನಿಯಂತ್ರಣ, ಯೋಗ್ಯ ಧ್ಯಾನ ಮಾಡುವುದರಿಂದ ಮಾನಸಿಕ ಮತ್ತು ದೈಹಿಕವಾಗಿ ಸುಸ್ಥಿರವಾಗಲು ಸಹಕರಿಸುತ್ತದೆ ಎಂದು ಹೇಳಿದರು.



ಮೈಸೂರಿನ ಶಿವಾನಂದ ಜ್ಞಾನಾಲಯದಲ್ಲಿ ಹಿಮಾಲಯ ಪ್ರತಿಷ್ಠಾನದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯೋಗ ಕ್ಷೇತ್ರದಲ್ಲಿ ಸಾಧನೆಗೈದ ಯೋಗ ಸಾಧಕರಿಗೆ ಯೋಗ ವಿಭೂಷಣ ಮತ್ತು ಯೋಗ ನಕ್ಷತ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಒಬ್ಬ ವ್ಯಕ್ತಿ ಆರೋಗ್ಯವಂತ ಎಂದು ಹೇಳಲೂ ವ್ಯಕ್ತಿ ರೋಗರಹಿತನಾಗಿ, ಅಂಗವಿಕಲತೆ ಇರದೇ ದೈಹಿಕ, ಮಾನಸಿಕವಾಗಿ ಸುಸ್ಥಿರವಾಗಿರುವವರನ್ನು ಆರೋಗ್ಯವಂತ ಎಂದು ಹೇಳಬಹುದು. ಉತ್ತಮ ಜೀವನ ಶೈಲಿ ಪಾಲಿಸಲು ಯೋಗಾಭ್ಯಾಸ ಸಾಥ್ ನೀಡಲಿದೆ ಎಂದು ತಿಳಿಸಿದರು.

ಜಿಎಸ್‌ಎಸ್ ಸಂಸ್ಥೆಯ ಸಂಸ್ಥಾಪಕ ಶ್ರೀಹರಿ ಮಾತನಾಡಿ, ಹಿಮಾಲಯ ಪ್ರತಿಷ್ಠಾನ ಯೋಗ ಸಾಧಕರನ್ನು ಗುರುತಿಸಿ ಬೆಳೆಸುತ್ತಿರುವುದು ಶ್ಲಾಘನೀಯ ಎಂದರಲ್ಲದೆ, ಯೋಗ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡುತ್ತಿರುವ ಎನ್.ಅನಂತ ಅವರ ಸೇವೆಯನ್ನು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ಬಿ.ಶಾಂತಾರಾಮ್ ಅವರಿಗೆ ಯೋಗ ವಿಭೂಷಣ, ಆರ್.ಶೈಲಜಾ, ಪೂರ್ಣಿಮಾ, ಮಣಿಕಂಠನ್, ರವಣೀಕರ್, ಸಂತೋಷ್, ಪ್ರೇಮ್ ಕುಮಾರ್, ಮೈತ್ರಾವತಿ ಅವರಿಗೆ ಯೋಗಭೂಷಣ ಮತ್ತು ಎಂ.ವರ್ಷ, ಎನ್.ಹಾಸಿನಿಗೆ ಯೋಗ ನಕ್ಷತ್ರ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇದೇ ವೇಳೆ ವಿದೂಷಿ ಭಾಗ್ಯಲಕ್ಷ್ಮಿ ಅವರ ಭರತನಾಟ್ಯ ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಕಾರ್ಯಕ್ರಮದಲ್ಲಿ ಸಮಾಜ ಸೇವಕ ಡಾ.ಕೆ.ರಘುರಾಮ ವಾಜಪೇಯಿ, ಅಂತರ ರಾಷ್ಟ್ರೀಯ ಯೋಗ ಶಿಕ್ಷಕ ಎಂ.ಎನ್.ರಮೇಶ್ ಕುಮಾರ್, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಹಿರಿಯ ಯೋಗ ಶಿಕ್ಷಕರಾದ ನಾಗಮಲ್ಲು, ಬಿ.ರವಿ, ಸಂಚಾಲಕ ಎಂ.ವಿ.ನಾಗೇಂದ್ರಬಾಬು ಇತರರು ಉಪಸ್ಥಿತರಿದ್ದರು.

ಪ್ರಜಾಪ್ರಭುತ್ವ ದಿನಾಚರಣೆ ಇಂದು

ಮೈಸೂರು: ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮೈಸೂರು ನಗರ ಪಾಲಿಕೆ ಸಂಯುಕ್ತಾಶ್ರಯದಲ್ಲಿ ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನು ಸೆ.15ರಂದು ಬೆಳಗ್ಗೆ 10.30 ಗಂಟೆಗೆ ಡಾ.ಬಿ.ಆರ್ ಅಂಬೇಡ್ಕರ್‌ರವರ ಪ್ರತಿಮೆಗೆ ಮಾಲಾರ್ಪಣೆ ಹಾಗೂ 'ನನ್ನ ಮತ ನನ್ನ ಹಕ್ಕು' ವಿಷಯದ ಮೇಲೆ ಚರ್ಚಾ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, ಛಾಯಾಚಿತ್ರ ಸ್ಪರ್ಧೆಗೆ ವಿದ್ಯುಕ್ತ ಚಾಲನೆಯನ್ನು ಪುರಭವನದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಹಮ್ಮಿಕೊಳ್ಳಲಾಗಿದೆ. ಸೈಕಲ್ ಜಾಥಾವನ್ನು ಬೆಳಗ್ಗೆ 8.30 ಗಂಟೆಗೆ ಮೈಸೂರು ಡಿಸಿ ಕಚೇರಿ ಮುಂಭಾಗದಿಂದ ಪುರಭವನದ ಮುಂಭಾಗವಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆವರೆಗೆ ಏರ್ಪಡಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್ ಆಗಮಿಸಲಿದ್ದಾರೆ.

ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್‌ಗೌಡ ರವಿಶಂಕರ್ ಡಿ., ಟಿ.ಎಸ್.ಶ್ರೀವತ್ಸ, ಹಾಗೂ ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ ವಿವೇಕಾನಂದ, ಕೆ.ಶಿವಕುಮಾರ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

